14 November 2025 Friday
SINCE 1957
Happy children's day
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬಗ್ಗೆ ತಪ್ಪು ತಿಳುವಳಿಕೆ ಹೊಂದಿದವರು, ನಾವು ಏನು ಮಾತನಾಡಿದರೂ ತಪ್ಪಾಗಿಯೇ ಅರ್ಥೈಸುತ್ತಾರೆ! ವಿವರಣೆ ಅಲ್ಲಿ ವ್ಯರ್ಥ!

ಸ್ನೇಹಾ ಆನಂದ್

info.varthaman@gmail.com

**ಒಂದೊಳ್ಳೆ ಮಾತು**

ಎಲ್ಲಾ ಪಾಠಗಳನ್ನು ಪುಸ್ತಕವೇ ಕಲಿಸುವದಿಲ್ಲ "ಕೆಲವು ಪಾಠಗಳನ್ನು ಜೀವನ ಹಾಗೂ ಸಂಬಂಧಗಳು ಕಲಿಸುತ್ತವೆ

ಮೈಲಾರ ಸಾವಿತ್ರಿಬಾಯಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 32 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಜಲವಿವಾದದಲ್ಲಿ ಪ್ರವೇಶಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಣೆ

# ಮೇಕೆದಾಟುಗೆ 'ಸುಪ್ರೀಂ ಗ್ರೀನ್ ಸಿಗ್ನಲ್'

## ಡಿಪಿಆರ್ ಪ್ರಶ್ನಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ್

**ನವದೆಹಲಿ:** ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಅಣೆಕಟ್ಟು ಯೋಜನೆಯ ಡಿಪಿಆರ್ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಕಾವೇರಿ ನೀರು ಹಂಚಿಕೆಯ ಮೇಕೆದಾಟು ಯೋಜನೆ ವಿವಾದದಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, ನೀರಿನ ಹಂಚಿಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಈ ಉದ್ದೇಶಕ್ಕಾಗಿ ರಚಿಸಲಾದ ತಜ್ಞರ ಸಮಿತಿ ನಿರ್ವಹಿಸುವುದು ಉತ್ತಮ ಎಂದು ಸೂಚಿಸಿದೆ.

ಮೇಕೆದಾಟು ಅಣೆಕಟ್ಟಿನ ವಿವರವಾದ ಯೋಜನಾ ವರದಿಯನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಗುರುವಾರ ವಜಾಗೊ ಳಿಸಿದ ಸುಪ್ರೀಂ ಕೋರ್ಟ್, ಅನುಮೋದನೆಗಳು ನ್ಯಾಯಾಂಗದಿಂದ ಬರಬೇಕಿರುವುದು ಅಲ್ಲ. ಕಾವೇರಿ ನೀರು ನಿಯಂತ್ರಣ ಸಮಿತಿ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ದಿಂದ ಬರಬೇಕು ಎಂದು ತಿಳಿಸಿದೆ. ಮೇಕೆದಾಟು ಜಲಾಶಯ ನಿರ್ಮಾಣ ಯೋಜ ನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್)

ಪುಟ 2ಕ್ಕೆ



### ಕೋರ್ಟ್ ಹೇಳಿದ್ದೇನು?

ಕರ್ನಾಟಕದಲ್ಲಿ ಬಳಕೆಯಾಗದ ಹರಿಯುವ ನೀರನ್ನು ವರ್ಗಾಯಿಸದಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಲು ಕೋರಿ ತಮಿಳುನಾಡು ಮತ್ತೊಂದು ಅರ್ಜಿಯನ್ನು ಸಲ್ಲಿಸಿತ್ತು. ಆದೇಶಗಳನ್ನು ಜಾರಿಗೊಳಿಸದಿರುವ ಎಲ್ಲಾ ಆರೋಪಗಳನ್ನು ಕೇಂದ್ರ ಸೂಚಿಸಿದ ಕಾವೇರಿ ಜಲವಿವಾದ ನಿರ್ವಹಣಾ

ಪುಟ 2ಕ್ಕೆ

### ನ್ಯಾಯಾಂಗ ನಿಂದನೆ ಎಚ್ಚರಿಕೆ

**ಕರ್ನಾಟಕ ಸರ್ಕಾರ ಸಿಡಬ್ಲ್ಯುಸಿ ಅಥವಾ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳನ್ನು ಪಾಲಿಸಲು ವಿಫಲವಾದರೆ, ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಒಳಗಾಗುವ ಅಪಾಯವಿದೆ ಎಂದು ಸುಪ್ರೀಂ ಕೋರ್ಟ್ ಇದೇ ಸಂದರ್ಭದಲ್ಲಿ ಕರ್ನಾಟಕಕ್ಕೂ ಎಚ್ಚರಿಕೆ ನೀಡಿದೆ. ಕರ್ನಾಟಕ**

ಪುಟ 2ಕ್ಕೆ


### ರಾಜ್ಯಕ್ಕೆ ನ್ಯಾಯ ಸಿಕ್ಕಿದೆ: ಡಿ.ಕೆ.ಶಿವಕುಮಾರ್

**ಬೆಂಗಳೂರು:** ರಾಜ್ಯದ ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿರುವುದರಿಂದ ನಮಗೆ ನ್ಯಾಯ ಸಿಕ್ಕಂತಾಗಿದೆ ಎಂದು ಜಲಸಂಪನ್ಮೂಲ ಸಚಿವರಾದ ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ಮೇಕೆದಾಟು, 'ನಮ್ಮ ನೀರು, ನಮ್ಮ ಹಕ್ಕು' ಯೋಜನೆ. ನಾವು ತಮಿಳುನಾಡಿಗೆ ಯಾವುದೇ ರೀತಿಯಲ್ಲೂ ಅಡ್ಡಿ ಮಾಡುತ್ತಿಲ್ಲ. ಈ ಯೋಜನೆಯಿಂದ ತಮಿಳುನಾಡಿಗೇ ಹೆಚ್ಚು ಲಾಭವಾಗಲಿದೆ. ರಾಜ್ಯದ ಜನರ ಪ್ರಾರ್ಥನೆ, ಜನರ ಕಷ್ಟಕ್ಕೆ ನ್ಯಾಯಾಲಯ ಸ್ಪಂದಿಸಿದೆ ಎಂದು ತಿಳಿಸಿದರು.

ನ್ಯಾಯಾಲಯಗಳ ತೀರ್ಮಾನದಂತೆ ತಮಿಳುನಾಡು ತನ್ನ ಪಾಲಿನ ನೀರನ್ನು ಪಡೆಯಲಿದೆ. ಹೀಗಾಗಿ ನಾವು ಈ ಯೋಜನೆ ಮುಂದುವರಿಸಿಕೊಂಡು ಹೋಗುತ್ತೇವೆ. ಈ ಯೋಜನೆಯನ್ನು ನಮ್ಮ ನೆಲದಲ್ಲಿ, ನಮ್ಮ ಹಣದಲ್ಲಿ ಮಾಡಲಾಗುತ್ತಿದೆ. ನೀರಿನ ಕೊರತೆ ಉಂಟಾದಾಗ ತಮಿಳುನಾಡಿಗೆ ನೀರು ಹರಿಸಲು ಈ ಸಮತೋಲಿತ ಅಣೆಕಟ್ಟು ನೆರವಾಗಲಿದೆ. ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಂದ ಬರುವ ಜನರಿಗೂ ನೀರು ಒದಗಿಸಲಾಗುವುದು ಎಂದು ತಮಿಳುನಾಡಿಗೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಈ ಯೋಜನೆಗೆ ಸಹಕಾರ ನೀಡುವುದೇ ಎಂದು ಸುದ್ದಿಗಾರರು ಕೇಳಿದಾಗ, ಈ ಯೋಜನೆಗೆ ಅನುಮತಿ ನೀಡದೇ ಬೇರೆ ಆಯ್ಕೆ ಅವರ ಮುಂದೆ ಇಲ್ಲ. ಅವರು ನ್ಯಾಯ ಒದಗಿಸಿ ಕೊಡಲೇ ಬೇಕು ಎಂದರು.



### 50ಕ್ಕೂ ಹೆಚ್ಚು ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಬೆಂಕಿ



**ಮುಧೋಳ:** ಸಮೀರವಾಡಿಯ ಗೋದಾವರಿ ಬಯೋರಿಫೈನರಿ ಸಕ್ಕರೆ ಕಾರ್ಖಾನೆ ಕೇನ್ ಯಾರ್ಡ್‌ನಲ್ಲಿ ನಿಂತಿದ್ದ 50ಕ್ಕೂ ಹೆಚ್ಚು ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳಿಗೆ ಕಿಡಿಗೇಡಿಗಳು ಗುರುವಾರ ಸಂಜೆ ಬೆಂಕಿ ಹಚ್ಚಿದ್ದಾರೆ.

ಕಾರ್ಖಾನೆಯ ಆರಂಭ ಮಾಡಲಾಗಿದೆ ಎಂಬ ಸುದ್ದಿ ತಿಳಿದ ರೈತರು ಮುತ್ತಿಗೆ ಹಾಕಲು ವಾಹನಗಳಲ್ಲಿ ಕಾರ್ಖಾನೆಯತ್ತ ಹೊರಟಿದ್ದರು. ಸಂಗಾನಟ್ಟಿ ಕ್ರಾಸ್ ಬಳಿ ಎದುರಾದ ಟ್ರ್ಯಾಕ್ಟರ್‌ಗೆ ಕೆಲ ಕಿಡಿಗೇಡಿಗಳು ಬೆಂಕಿ ಹಚ್ಚಿದರು. ಕೂಡಲೇ ಕಾರ್ಖಾನೆಯವರು ನೀರಿನ ವಾಹನ ಕಳುಹಿಸಿ ಬೆಂಕಿ ನಂದಿಸುವ ಕೆಲಸ ಮಾಡಿದರು. ಕಾರ್ಖಾನೆಗೆ ಹೋದಾಗ 15ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು ನಿಂತಿದ್ದವು. ಕೂಡಲೇ ಅವುಗಳತ್ತ ನುಗ್ಗಿದ ಅವರು, ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದರು. ಕೆಲವೇ ಕ್ಷಣಗಳಲ್ಲಿ ಬೆಂಕಿ ಹೊತ್ತಿ ಉರಿದಿದೆ.

### ಡಿ.8ರಿಂದ ಚಳಿಗಾಲದ ಅಧಿವೇಶನ

**ಬೆಂಗಳೂರು:** ಬೆಳಗಾವಿ ಸುವರ್ಣಸೌಧದಲ್ಲಿ ಡಿಸೆಂಬರ್ 8ರಿಂದ 10 ದಿನಗಳ ಕಾಲ ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಸಲು ಗುರುವಾರ ಸಚಿವ ಸಂಪುಟ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್ ಅವರು, ಒಟ್ಟು 10 ದಿನಗಳ ಕಾಲ ಅಧಿವೇಶನ ನಡೆಯಲಿದೆ ಎಂದು ತಿಳಿಸಿದರು.

ಇನ್ನು ಆರು ತಿಂಗಳಿಗಿಂತ ಹೆಚ್ಚು ಕಾಲ ವರದಿ ಸಲ್ಲಿಸದ ಮೂರು ಸಂಪುಟ ಉಪಸಮಿತಿಗಳಿಗೆ ಸಾಧ್ಯವಾದಷ್ಟು ಬೇಗ ವರದಿ ಸಲ್ಲಿಸಲು ಸೂಚಿಸಲಾಗಿದೆ. ಒಂದು ಸಮಿತಿಯು ಕೋವಿಡ್ ಸಮಯದಲ್ಲಿ ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳ ಖರೀದಿ ಕುರಿತು ನ್ಯಾಯಮೂರ್ತಿ ಜಾನ್ ಮೈಕೆಲ್

ಪುಟ 2ಕ್ಕೆ

### ಇಂದು ಡಿಸಿಎಂ 'ನೀರಿನ ಹೆಜ್ಜೆ' ಕೃತಿ ಸಿಎಂನಿಂದ ಬಿಡುಗಡೆ



**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬರೆದಿರುವ 'ನೀರಿನ ಹೆಜ್ಜೆ' ಪುಸ್ತಕವನ್ನು ನವೆಂಬರ್ 14ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ. ರಾಜ್ಯದ ಜಲಸಂಪನ್ಮೂಲಗಳ ಇತಿಹಾಸ, ಸವಾಲುಗಳು ಮತ್ತು ಅವಕಾಶಗಳ ಮೇಲೆ ಈ ಪುಸ್ತಕ ಬೆಳಕು ಚೆಲ್ಲುತ್ತದೆ.

ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜಲ ವಿವಾದಗಳು, ಒಪ್ಪಂದಗಳು, ನ್ಯಾಯಾಲಯದ ತೀರ್ಪುಗಳು, ನೀರಾವರಿ ಯೋಜನೆಗಳು, ಸಮಸ್ಯೆಗಳು ಮತ್ತು ಪರಿಹಾರಗಳ ಚಿತ್ರಣವಿರುವ ನಾನು ಬರೆದಿರುವ ನೀರಿನ ಹೆಜ್ಜೆ ಕೃತಿಯನ್ನು ಮುಖ್ಯಮಂತ್ರಿ

ಪುಟ 2ಕ್ಕೆ

### ಆರ್‌ಎಸ್‌ಎಸ್ ಪಥಸಂಚಲನಕ್ಕೆ ಹೈಕೋರ್ಟ್ ಷರತ್ತುಬದ್ಧ ಅನುಮತಿ

**ಕಲಬುರಗಿ:** ಚಿತ್ತಾಪುರದಲ್ಲಿ ಪಥಸಂಚಲನ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಆರ್‌ಎಸ್‌ಎಸ್ ನಡುವೆ ನಡೆಯುತ್ತಿದ್ದ ಹಗ್ಗಜಗ್ಗಾಟಕ್ಕೆ ಕೊನೆಗೂ ತೆರೆ ಬಿದ್ದಿದೆ. ಚಿತ್ತಾಪುರದಲ್ಲಿ ಪಥಸಂಚಲನಕ್ಕೆ ಕಲಬುರಗಿ ಹೈಕೋರ್ಟ್ ಪೀಠ ಷರತ್ತುಬದ್ಧ ಅನುಮತಿ ನೀಡಿದೆ.

ನವೆಂಬರ್ 16ರಂದು ಮಧ್ಯಾಹ್ನ ಮಧ್ಯಾಹ್ನ 3:30ರಿಂದ ಸಂಜೆ 5:45ರ ವರೆಗೆ ಪಥ ಸಂಚಲನಕ್ಕೆ ಅವಕಾಶ ಕಲ್ಪಿಸಿದೆ. 350 ಗಣವೇಷಧಾರಿಗಳು ಮಾತ್ರ ಪಾಲ್ಗೊಳ್ಳಲು ಕೋರ್ಟ್ ಅವಕಾಶ ಕಲ್ಪಿಸಿದೆ.

ಚಿತ್ತಾಪುರದಲ್ಲಿ ಪಥಸಂಚಲನಕ್ಕೆ ಅನುಮತಿ ನೀಡುವ ಕುರಿತ ಅರ್ಜಿ ವಿಚಾರಣೆ ಗುರುವಾರ ಕಲಬುರಗಿ ಹೈಕೋರ್ಟ್ ಪೀಠದಲ್ಲಿ ನಡೆಯಿತು. ಪಥಸಂಚಲನದಲ್ಲಿ 600 ಗಣವೇಷಧಾರಿಗಳು ಪಾಲ್ಗೊಳ್ಳಲು ಆರ್‌ಎಸ್‌ಎಸ್ ಅನುಮತಿ ಕೋರಿತ್ತು. ಆದರೆ ರಾಜ್ಯದ ಅಡ್ವೋಕೇಟ್

ಪುಟ 2ಕ್ಕೆ





### ಪೋಕ್ಸೊ ಕೇಸ್‌ಗೆ ಹೈಕೋರ್ಟ್ ಅನುಮತಿ: ಬಿಎಸ್‌ವೈಗೆ ಸಂಕಷ್ಟ

**ಬೆಂಗಳೂರು:** ಪೋಕ್ಸೋ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಂಕಷ್ಟ ಎದುರಾಗಿದೆ.



ಯಡಿಯೂರಪ್ಪ ಮತ್ತಿತರರ ವಿರುದ್ಧ ಕೆಳ ನ್ಯಾಯಾಲಯ ಸಮನ್ಸ್ ನೀಡಿರುವುದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಕೆಳ ಹಂತದ ನ್ಯಾಯಾಲಯ ಆರೋಪ ನಿಗದಿಗೆ ಸಂಬಂಧಿಸಿದಂತೆ ಯಡಿಯೂರಪ್ಪನವರಿಗೆ ಸಮನ್ಸ್ ಜಾರಿ ಮಾಡಿತ್ತು. ಸಮನ್ಸ್ ಜಾರಿ ಮಾಡಿದ್ದನ್ನು ಪ್ರಶ್ನಿಸಿ ಬಿಎಸ್‌ವೈ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ಯಡಿಯೂರಪ್ಪ ಅರ್ಜಿಯನ್ನು ವಜಾಗೊಳಿಸಿ ಟ್ರಯಲ್‌ಗೆ ಅನುಮತಿ ನೀಡಿದೆ. ಬೆಂಗಳೂರಿನ ಡಾಲರ್ಸ್ ಕಾಲೊನಿಯ ತಮ್ಮ ನಿವಾಸದಲ್ಲಿ 17 ವರ್ಷದ

ಪುಟ 2ಕ್ಕೆ

### ಮತ್ತೊಬ್ಬ ಉಗ್ರ ವೈದ್ಯನ ಬಂಧನ

**ಕಾನ್ಪುರ:** ದೆಹಲಿಯ ಕೆಂಪುಕೋಟೆ ಬಳಿ ಕಳೆದ ಸೋಮವಾರ ಸಂಜೆ ನಡೆದ ಕಾರು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಹೃದ್ರೋಗ ವಿಭಾಗದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಯನ್ನು ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ ಗುರುವಾರ ಬಂಧಿಸಿದೆ.

ಡಾ.ಮೊಹಮ್ಮದ್ ಆರಿಫ್ (32) ಬಂಧಿತ ವ್ಯಕ್ತಿ. ಗಣೇಶ್ ಶಂಕರ್ ವಿದ್ಯಾರ್ಥಿ ಸ್ಮಾರಕ ವೈದ್ಯಕೀಯ ಕಾಲೇಜಿನಲ್ಲಿ ಮೊದಲ ವರ್ಷದ ಹೃದ್ರೋಗ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ. ಡಾ.ಆರಿಫ್‌ಗೆ ಉಳಿದುಕೊಂಡಿದ್ದ ನಜೀರಾಬಾದ್‌ನ ಅಶೋಕ ನಗರದಲ್ಲಿರುವ

ಪುಟ 2ಕ್ಕೆ

# ಕಾಂಗ್ರೆಸ್ ಮತ್ತೇ 'ವೈಟ್ ವಾಶ್'!

## ನಾನು ಬೇರೆ ಪಕ್ಷದ ಬಾವುಟ ಹಿಡಿಯಬಹುದು: ಕೆ.ಎನ್.ರಾಜಣ್ಣ

**ಮಧುಗಿರಿ:** ಜೆಡಿಎಸ್ ನಿಂದ ನಾನು ಶಾಸಕನಾಗಿದ್ದಾಗ 2004ರಲ್ಲಿ ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಪೂರ್ಣ ವೈಟ್ ವಾಶ್ ಆಗಿತ್ತು. ಮತ್ತೆ ಅಂತಹ ಸಂದರ್ಭ ಬಂದರೂ ಬರಬಹುದು ಎಂದು ಕಾಂಗ್ರೆಸ್ ಶಾಸಕ ಕೆ.ಎನ್.ರಾಜಣ್ಣ ಸ್ವಪಕ್ಷವನ್ನೇ ಲೇವಡಿ ಮಾಡಿದ್ದಾರೆ.

ಪಟ್ಟಣದಲ್ಲಿ ಮಾತನಾಡಿದ ಅವರು, ಮುಂದೆ ನಾನು ಬೇರೆ ಪಕ್ಷದ ಬಾವುಟ ಹಿಡಿಯುವ ಪ್ರಸಂಗ ಬಂದರೂ ಬರಲೂಬಹುದು. ಕಾದು ನೋಡೋಣ ಎಂದು ಹೇಳುವ ಮೂಲಕ ಕಾಂಗ್ರೆಸ್ ನಾಯಕರಿಗೆ ಶಾಕ್ ನೀಡಿದ್ದಾರೆ.

ಕಾಂಗ್ರೆಸ್ ರ್‍ಯಾಲಿಯಲ್ಲಿ ಯಾರೂ ಕಾಂಗ್ರೆಸ್ ಬಾವುಟ ಹಿಡಿದಿರಲಿಲ್ಲ. ಏಕೆ ಎಂದು ನನಗೂ ಗೊತ್ತಿಲ್ಲ. ಮುಂದೆ ನಾನು ಕೂಡ ಯಾವ ಬಾವುಟ ಹಿಡಿಯುತ್ತೇನೋ ಗೊತ್ತಿಲ್ಲ. ರಾಜಕಾರಣದಲ್ಲಿ ಯಾರೂ ಶಾಶ್ವತ ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಜನರ ಬೆಂಬಲವೇ ನನಗೆ ಆನೆ ಬಲ. ಜನರನ್ನು ನಂಬಿ ನಾನು ರಾಜಕಾರಣ ಮಾಡುತ್ತಿದ್ದೇನೆ ಎಂದರು.



ನಾನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಈಗಾಗಲೇ ಹೇಳಿದ್ದರಿಂದ ಹಿಂದೆ ಆದಂಥ ಪರಿಸ್ಥಿತಿ ಕಾಂಗ್ರೆಸ್‌ಗೆ ಮತ್ತೆ ಬರುವುದಿಲ್ಲ. ಆದರೆ ಪರಿಸ್ಥಿತಿ ಏನಾಗುತ್ತದೆ ಎಂದು ಹೇಳಲಾಗದು. ಜನರ ನಂಬಿಕೆ ಮತ್ತು ಆಶೀರ್ವಾದದಿಂದ ಮಾತ್ರ ರಾಜಕಾರಣದಲ್ಲಿ ಬೆಳೆಯಲು ಸಾಧ್ಯ ಎಂದು ಅವರು ಹೇಳಿದರು.

# ಶತ್ರು ಆಸ್ತಿ ವಶಕ್ಕೆ ಯೋಜನೆ

## ಪಾಕಿಸ್ತಾನಿಗಳ ಬೆಂಗಳೂರಿನ 4 ಆಸ್ತಿ ವಶಕ್ಕೆ ಕಾನೂನು ಪ್ರಕ್ರಿಯೆ

**ಬೆಂಗಳೂರು:** ಬೆಂಗಳೂರಿನಲ್ಲಿ ಗುರುತಿಸಲಾದ ನಾಲ್ಕು ಶತ್ರು ಆಸ್ತಿಗಳ ವಶಕ್ಕೆ ಜಿಲ್ಲಾಧಿಕಾರಿ ಮೌಲ್ಯಮಾಪನ ಮಾಡುತ್ತಿದ್ದಾರೆ. ರಾಜಭವನ ರಸ್ತೆ, ವಿಕ್ಟೋರಿಯಾ ರಸ್ತೆ, ಕಲಾಸಿಪಾಳ್ಯ ಮತ್ತು ಗ್ರಾಂಟ್ ರಸ್ತೆಯಲ್ಲಿ ಈ ಆಸ್ತಿಗಳಿವೆ. ಈ ಅಸ್ತಿ ವಶಕ್ಕೆ ಕಾನೂನು ಪ್ರಕ್ರಿಯೆ ಆರಂಭವಾಗಿದೆ.

ಶತ್ರು ರಾಷ್ಟ ಪಾಕಿಸ್ತಾನಿಗಳಿಗೆ ಸೇರಿದ ಆಸ್ತಿ ವಶಕ್ಕೆ ಕೇಂದ್ರ ಸರ್ಕಾರ ಕಾನೂನು ರೂಪಿಸಿದೆ. ಕೇಂದ್ರದಿಂದ ಶತ್ರು ಆಸ್ತಿಯ ಉಪ ಕಸ್ಟೋಡಿಯನ್ ಆಗಿ ನೇಮಕಗೊಂಡಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ರಾಜಭವನ ರಸ್ತೆಯ ಪ್ರಮುಖ ಸ್ಥಳದಲ್ಲಿ 1,23,504 ಚದರ ಅಡಿ ವಿಸ್ತೀರ್ಣ ಆಸ್ತಿ ವಶಕ್ಕೆ ಮುಂದಾಗಿದ್ದಾರೆ. ವಿಕ್ಟೋರಿಯಾ ರಸ್ತೆಯಲ್ಲಿ ಸಂಖ್ಯೆ 2 ಮತ್ತು 8ರಲ್ಲಿ 8,845 ಚದರ ಅಡಿ ಆಸ್ತಿ, ಕಲಾಸಿಪಾಳ್ಯ 2ನೇ ಮುಖ್ಯ ರಸ್ತೆಯಲ್ಲಿ ಸೈಟ್ ಸಂಖ್ಯೆ 41 ರಲ್ಲಿ 70ಥ30 ಅಳತೆಯ ಆಸ್ತಿ ಮತ್ತು ಗ್ರಾಂಟ್ ರಸ್ತೆಯಲ್ಲಿರುವ ಸಂಖ್ಯೆ 4 ಹೊಂದಿರುವ ಹೋಟೆಲ್ ಅನ್ನು 'ಶತ್ರು ಆಸ್ತಿ' ಎಂದು ಗುರುತಿಸಲಾಗಿದೆ. 1968 ರ ಶತ್ರು ಆಸ್ತಿ ಕಾಯ್ದೆಯ ನಿಬಂಧನೆಗಳ ಪ್ರಕಾರ ಅವುಗಳನ್ನು ಕೇಂದ್ರ ಸರ್ಕಾರವು ವಶಪಡಿಸಿಕೊಳ್ಳುತ್ತದೆ.

ರಾಜಭವನ ರಸ್ತೆಯಲ್ಲಿರುವ ಆಸ್ತಿ ಪ್ರಸ್ತುತ ಮಾರುಕಟ್ಟೆ ಮೌಲ್ಯ 200 ಕೋಟಿ ರೂ.ಗಳಿಗಿಂತ ಹೆಚ್ಚಿರಬಹುದು. ಈ ಬಗ್ಗೆ ವಿವರವಾದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಮುಚ್ಚಿದ ಲಕೋಟೆಯಲ್ಲಿ ತಲುಪಿಸಲಾಗುತ್ತದೆ. ಅಂತಹ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಹಕ್ಕು ಕೇಂದ್ರ ಸರ್ಕಾರದ್ದಾಗಿದೆ. 'ಭಾರತದ ಶತ್ರು ಆಸ್ತಿಯ ಕಸ್ಟೋಡಿಯನ್'ಯಿಂದ ಮುಂದಿನ ನಿರ್ದೇಶನಗಳಿಗಾಗಿ ಕಾಯುತ್ತೇವೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಶತ್ರು ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಶತ್ರು ಆಸ್ತಿ ಕಾಯ್ದೆ 1968 ರ ಪ್ರಕಾರ ಹರಾಜು ಹಾಕಲು ನಿರ್ದೇಶನ ನೀಡಿತ್ತು. ನವೆಂಬರ್ 2024 ರಲ್ಲಿ ಬೆಂಗಳೂರು ನಗರ ಜಿಲ್ಲೆಯ ಉಪ ಆಯುಕ್ತರನ್ನು ಶತ್ರು ಆಸ್ತಿಯ ಉಪ ಕಸ್ಟೋಡಿಯನ್ ಆಗಿ ನೇಮಿಸಲಾಗಿತ್ತು.

### 10 ಐಎಸ್‌ಐ ಉಗ್ರರ ಬಂಧನ

**ಚಂಡಿಗಢ:** ಪಂಜಾಬ್‌ನಲ್ಲಿ ಅಶಾಂತಿ ಸೃಷ್ಟಿಸುವ ಉದ್ದೇಶದಿಂದ ಜನನಿಬಿಡ ಪ್ರದೇಶಗಳಲ್ಲಿ ಗ್ರೆನೇಡ್ ದಾಳಿ ನಡೆಸಲು ಹೊಂಚು ಹಾಕಿದ್ದ ಪಾಕಿಸ್ತಾನದ ಗುಪ್ತಚರ ಸಂಸ್ಥೆ (ಐಎಸ್‌ಐ) ಬೆಂಬಲಿತ ಭಯೋತ್ಪಾದಕರ ಸಂಚನ್ನು ಲುಧಿಯಾನ ಪೊಲೀಸರು ಭೇದಿಸಿದ್ದಾರೆ. ವಿದೇಶಿ ಮೂಲದ 10 ಹ್ಯಾಂಡ್ಲರ್‌ಗಳನ್ನು ಬಂಧಿಸಿದ್ದಾರೆ.


ಬಂಧಿತ ಆರೋಪಿಗಳು ಮಲೇಷ್ಯಾ ಮತ್ತು ಪಾಕ್ ಮೂಲದ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರು. ಜತೆಗೆ, ದಾಳಿಗಳನ್ನು ನಡೆಸಲು ಹ್ಯಾಂಡ್ ಗ್ರೆನೇಡ್‌ಗಳನ್ನು ಸಂಗ್ರಹ ಮತ್ತು ವಿತರಣೆ ಮಾಡುವುದರಲ್ಲಿ

ಪುಟ 2ಕ್ಕೆ

# ದೆಹಲಿಯಲ್ಲಿ ಡಿ.6ಕ್ಕೆ ಸ್ಫೋಟಕ್ಕೆ ಸಂಚು

## ಬಾಬರಿ ಮಸೀದಿ ಧ್ವಂಸಕ್ಕೆ ಸೇಡು ತೀರಿಸಲು ಉಗ್ರರ ಪ್ಲಾನ್

**ನವದೆಹಲಿ:** ಐತಿಹಾಸಿಕ ಕೆಂಪುಕೋಟೆ ಬಳಿಯ ಕಾರು ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳಿಗೆ ಬೆಚ್ಚಿ ಬೀಳಿಸುವಂತಹ ಮಾಹಿತಿಗಳು ಸಿಗುತ್ತಿವೆ. ಬಾಬರಿ ಮಸೀದಿ ಧ್ವಂಸದ ಸೇಡು ತೀರಿಸಿಕೊಳ್ಳಲು ಡಿಸೆಂಬರ್ 6ರಂದು ದೆಹಲಿಯ 6 ಕಡೆ ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಸರಣಿ ಬಾಂಬ್ ಸ್ಫೋಟ ನಡೆಸಲು ಸಂಚು ರೂಪಿಸಿದ್ದರು ಎನ್ನಲಾಗಿದೆ.



ಸ್ಫೋಟಕ ವಸ್ತುಗಳು, ಬಾಂಬ್ ಮತ್ತಿತರ ಸರಕುಗಳನ್ನು ಸಾಗಿಸಲು ಮಾರುತಿ ಸುಜುಕಿ ಬ್ರೇಜಾ ಮಾರುತಿ ಸ್ವಿಫ್ಟ್ ಡಿಜೈರ್ ಮತ್ತು ಫೋರ್ಡ್ ಇಕೋಸ್ಪೋರ್ಟ್ ಸೇರಿದಂತೆ ಮೂವತ್ತೆರಡು ಕಾರುಗಳನ್ನು

ಪುಟ 2ಕ್ಕೆ

### ಉಗ್ರರ 3ನೇ ಕಾರು ಪತ್ತೆ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಸ್ಫೋಟ ಪ್ರಕರಣ ಸಂಬಂಧ ಶಂಕಿತರೊಂದಿಗೆ ನಂಟು ಹೊಂದಿದೆ ಎನ್ನಲಾಗಿದ್ದ ಮಾರುತಿ ಬ್ರೀಜಾ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇದು ಪ್ರಕರಣದಲ್ಲಿ ಬಳಸಿರುವ 3ನೇ ಕಾರು ಎನ್ನಲಾಗಿದೆ.

ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್-ಫಲಾಹ್ ವಿಶ್ವವಿದ್ಯಾಲಯದ ಆವರಣದಲ್ಲಿ ಅನುಮಾನಾಸ್ಪದ ಬ್ರೀಜಾ ಕಾರು ಪತ್ತೆಯಾಗಿದೆ. ಕೆಂಪುಕೋಟೆಯ ಬಳಿ ನಡೆದ ಸ್ಫೋಟ ಘಟನೆ ಬಳಿಕ ತೀವ್ರ ಶೋಧ ನಡೆಸಿದ್ದ ತನಿಖಾಧಿಕಾ ರಿಗಳು ಪತ್ತೆಹಚ್ಚಿದ್ದಾರೆ. ಬ್ರೀಜಾ ಕಾರನ್ನು ಆರೋಪಿಗಳು ಸ್ಥಳ ಪರಿಶೀಲನೆ ನಡೆಸಲು ಅಥವಾ ತಪ್ಪಿಸಿಕೊಳ್ಳಲು ಬಳಸಿದ್ದಾರೆಂದು ಶಂಕಿಸಲಾಗಿದೆ.

# ಅರಳುವ ಮೊಗ್ಗಿಗೆ ಬೇಕಿದೆ ಕಾನೂನು ಬಳ್ಳಿಯ ಆಸರೆ

## ಇಂದು ಮಕ್ಕಳ ದಿನಾಚರಣೆ




**ಪವಿತ್ರಾ ಹೆತ್ತೂರು**

ತಾಯಿಯ ಗರ್ಭದಲ್ಲಿ ಮಗು ವೊಂದು ಹೇಗೆ ರೂಪುಗೊಳ್ಳುತ್ತದೆ ಎನ್ನುವುದು ನಿಜಕ್ಕೂ ನಮ್ಮ ಗ್ರಹಿ ಕೆಗೆ ನಿಲುಕದ ವಿಷಯ. ಇಂದಿನ ವೈಜಾನಿಕಯುಗದಲ್ಲಿ ಮಕ್ಕಳನ್ನು ನೈಸರ್ಗಿಕವಾಗಿ ಅಲ್ಲದೆ ಹಲವಾರು ವಿಧಾನಗಳಿಂದ ವೈದ್ಯಕೀಯ ಸಹಾಯ ಬಳಸಿ ಮಗುವನ್ನು ಪಡೆ ಯಬಹುದಾಗಿದೆ ಇದು ನಮ್ಮೆಲ್ಲರಿಗೂ ತಿಳಿದಿರುವ ವಿಚಾರವೇ ಆದರೂ ಯಾವುದೇ ಪ್ರಕ್ರಿಯೆ ಇರಲಿ ಅದು ಪೂರ್ಣಗೊಂಡು ತಾಯಿಯ ಗರ್ಭದಲ್ಲಿ ನವಮಾಸಗಳು ಇದ್ದು ಪುಟ್ಟ ಜೀವ ವೊಂದು ಹೊರ ಜಗತ್ತಿಗೆ ಕಾಲಿಡುವುದು ನಿಜಕ್ಕೂ ವಿಸ್ಮಯವೇ...ಸರಿ!!

ಇಂತಹ ಮಗುವಿನ ಜನನದ ಕ್ಷಣದಿಂದ ಹೆತ್ತವರ ಜವಾಬ್ದಾರಿ ಶುರುವಾಗುತ್ತದೆ. ಮೊದಮೊದಲು ಮಗುವಿನ ಜನ್ಮದಾತರ ಸಂಪೂರ್ಣ ಗಮನ ಆರೈಕೆ ಮತ್ತು ಆಸರೆ ಬೇಕಾಗುತ್ತದೆ. ಮಕ್ಕಳು ಬೆಳೆಯುತ್ತಾ ಹೋದಂತೆ ಶಾರೀರಿಕ ಆರೈಕೆಗಿಂತ ಹೆಚ್ಚಿನದ್ದನ್ನು ಹೆತ್ತವರು ನೀಡಬೇಕಾಗುತ್ತದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುವಂತೆ ಮಾನಸಿಕ, ಭಾವನಾತ್ಮಕ, ನೈತಿಕ ಸ್ಥೈರ್ಯವನ್ನು ತುಂಬುವುದರ ಜೊತೆಗೆ ಆಧ್ಯಾತ್ಮಿಕ ವಿಚಾರಗಳ ಬಗ್ಗೆಯೂ ಮಕ್ಕಳ ಮನಸ್ಸಿನಲ್ಲಿ ಹದವಾಗಿ ಬಿತ್ತುವ ಮೂಲಕ ಮೂಲಕ ಮಕ್ಕಳನ್ನು ಸದೃಢವಾಗಿಸಬೇಕಾಗುತ್ತದೆ.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ತಂದೆತಾಯಿಯ ಪಾತ್ರ ತುಂಬಾ ಮಹತ್ವದ್ದು ಮಾತ್ರವಲ್ಲದೆ ಅವರು ಯಾವ ರೀತಿಯಲ್ಲಿ ಮಗುವಿನ ಭವಿಷ್ಯಕ್ಕಾಗಿ ತಮ್ಮನ್ನು ಮುಡಿಪಾಡಿಟ್ಟು ಕೊಳ್ಳುವರು ಎನ್ನುವುದರ ಮೇಲೆ ಎಲ್ಲವೂ ನಿರ್ಧಾರಿತವಾಗಿರುವುದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಶಿಸ್ತು ಹಾಗೂ ಸಂಸ್ಕೃತಿಯನ್ನು ಕಲಿಸಿಕೊಡುವುದು ಅತೀ ಅಗತ್ಯವಾಗಿದೆ ಒಂದು ವೇಳೆ ನಾವು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿ ವೈಟ್ ಕಾಲರ್ ನಂತಹ ಕೆಲಸ ಪಡೆಯುವಂತೆ ಮಾಡಿದ್ರು ಅವರಲ್ಲಿ, ಶಿಸ್ತು ಹಾಗೂ ಸಂಸ್ಕೃತಿ ಇಲ್ಲದೆ ಇದ್ದರೆ ಅದು ಅಪ್ರಯೋಜಕ. ಈ ಕಾರಣದಿಂದಲೇ ತಂದೆತಾಯಂದಿರು ದಿನವಿಡಿ ಮಕ್ಕಳ ಭವಿಷ್ಯ ರೂಪಿಸುವಲ್ಲಿ ತೊಡಗಿಕೊಂಡರೆ ಸಾಲದು ಇದಕ್ಕಾಗಿ ಪೋಷಕರು ಕೆಲವೊಂದು ನಿಯಮಗಳನ್ನು ರೂಪಿಸಿಕೊಳ್ಳುವುದು ಅತೀ ಅಗತ್ಯ, ಅಂತಹ ಕೆಲವು ಹಲವು ನಿಯ ಮಗಳಲ್ಲಿ ಕಾನೂನಿನ ಅರಿವು, ಹಣಕಾಸಿನ ತಿಳುವಳಿಕೆ, ಹಿರಿ ಯರ ಬಗ್ಗೆ ಗೌರವ, ದೇಶದ ಸಂಸ್ಕೃತಿ,ಆಚಾರ ವಿಚಾರಗಳನ್ನು ತಿಳಿಸುವ ಮೂಲಕ ಸತ್ಪ್ರಜೆಯಾ ಗಿಸುವ ಕರ್ತವ್ಯ ಪ್ರತಿಯೊಬ್ಬ ಪೋಷಕರಾದಾಗಿದೆ.

ಪುಟ 2ಕ್ಕೆ



ಮೊದಲ ಪುಟದಿಂದ

## ಡಿ.6ಕ್ಕೆ ಸ್ಫೋಟಕ್ಕೆ ಸಂಚು

ಸಜ್ಜುಗೊಳಿಸಲಾಗುತ್ತಿತ್ತು. ಡಿಸೆಂಬರ್ 6ರಂದು ಅಯೋಧ್ಯೆಯ 16ನೇ ಶತಮಾನದ ಬಾಬರಿ ಮಸೀದಿಯ ಧ್ವಂಸಕ್ಕೆ ಸೇಡು ತೀರಿಸಿಕೊಳ್ಳಲು ದೇಶದ ವಿವಿಧ ಕಡೆಗಳಲ್ಲಿ ಸ್ಫೋಟ ನಡೆಸಲು ಐ20 ಕಾರನ್ನು ಬಳಸಿಕೊಳ್ಳಲು ಯೋಜಿಸಲಾಗಿತ್ತು.

## ಮತ್ತೊಬ್ಬ ಉಗ್ರ ಬಂಧನ

ಬಾಡಿಗೆ ಮನೆಯಲ್ಲೂ ಎಟಿಎಸ್ ಅಧಿಕಾರಿಗಳು ತೀವ್ರ ಶೋಧ ನಡೆಸಿದ್ದಾರೆ. ಮೊಬೈಲ್ ಫೋನ್, ಲ್ಯಾಪ್‌ಟಾಪ್ ವಶಕ್ಕೆ ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ದೆಹಲಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಈಗಾಗಲೇ ಬಂಧಿತರಾಗಿರುವ ವ್ಯಕ್ತಿಯೊಂದಿಗೆ ಸಂಬಂಧ ಹೊಂದಿರುವ ಆರೋಪದಡಿ ಇವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## 10 ಐಎಸ್‌ಐ ಉಗ್ರರ ಬಂಧನ

ನಿರತರಾಗಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ. ದೆಹಲಿಯ ಕೆಂಪುಕೋಟೆ ಸಮೀಪದ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಾರು ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ 13 ಮಂದಿ ಮೃತಪಟ್ಟಿದ್ದು, 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು. ಈ ಘಟನೆಯನ್ನು ಭಯೋತ್ಪಾದಕ ಕೃತ್ಯ ಎಂದು ಕೇಂದ್ರ ಘೋಷಿಸಿದೆ.

# ಮಕ್ಕಳಲ್ಲಿ ಪ್ರಾಮಾಣಿಕತೆ, ನೈತಿಕತೆ ಬೆಳೆಸೋಣ

ಮೈಸೂರು :ಗಾಂಧೀಜಿಯವರನ್ನು ಇಡೀ ಜಗತ್ತು ಗೌರವಿಸುತ್ತದೆ. ಸತ್ಯವೇ ದೇವರು ಎಂಬುದನ್ನು ಗಾಂಧೀಜಿ ತಿಳಿಸಿದರು. ಪ್ರಾಮಾಣಿಕತೆ ಹಾಗೂ ನೈತಿಕತೆಯನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದು ಶಿಕ್ಷಣ ಚಿಂತಕ ಪ್ರೊ.ಜಿ.ಎಸ್.ಜಯದೇವ ಹೇಳಿದರು.

ನಗರದ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎನ್.ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸೈನ್ಸಸ್ ವತಿಯಿಂದ 'ಸತ್ಯದ ಕಿರಣಗಳಲ್ಲಿ ಕನ್ನಡದ ಹೊಳಪು' ಗಾಂಧಿ ಜಯಂತಿ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗಾಂಧಿಯನ್ನ ಅರ್ಥ ಮಾಡಿಕೊಳ್ಳುವುದಕ್ಕೆ ಉತ್ತಮ ವಾತಾವರಣ ಸೃಷ್ಟಿ ಮಾಡುವ ಬದಲು ಗಾಂಧಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗಿದ್ದೇವೆ. ಎಲ್ಲರಿಗೂ ಬದುಕುವ ಆಸೆ ಒಂದೆಡೆಯಿದ್ದರೆ, ಎಲ್ಲರನ್ನು ಸಾಯಿಸಬೇಕು ಎಂಬ ಹೇಯ ಕೃತ್ಯ ಮತ್ತೊಂದೆಡೆ ನಡೆಯುತ್ತಿರುವುದು ಅಸಮಾಧಾನವಾದ ವಿಚಾರ ಎಂದರು.



ಅಹಿಂಸೆ ಮನಸ್ಸಿನ ಒಂದು ವೃತ್ತಿಯಾಗಿದೆ. ಕೋಪ, ಅಹಿಂಸೆಯ ಶತ್ರು. ಅಹಿಂಸೆಯ ಆಚರಣೆಯಲ್ಲಿ ಪ್ರೇಮ, ತ್ಯಾಗ, ಸಹನೆ, ಮತ್ತು ಧೈರ್ಯ ಎಂಬ ಅಂಶಗಳಿವೆ. ಅಹಿಂಸೆಯ ತತ್ವ ಅಷ್ಟು ಸುಲಭವಾಗಿ ಬರಲಾರದು. ಯೋಗ್ಯಶಿಕ್ಷಣ, ಸಂಸ್ಕಾರ ಬೇಕು. ಸತ್ಯ ಪರಮಧರ್ಮ, ಅಹಿಂಸೆ ಪರಮ ಕರ್ತವ್ಯ. ಅಹಿಂಸೆಗೆ ಸೋಲಿಲ್ಲ. ಅದೊಂದು ನೈತಿಕ ಶಕ್ತಿ. ಹೀಗಾಗಿ ಅಹಿಂಸೆ ಮತ್ತು ಸತ್ಯ ಮಾನವ ಧರ್ಮವಾಗಬೇಕು ಎಂಬುದು ಗಾಂಧಿಜೀ ಅವರ ಪರಮ ವಿಚಾರವಾಗಿತ್ತು ಎಂದು ಹೇಳಿದರು

ನಮ್ಮ ದೇಶ ಹೆಚ್ಚಾಗಿ ಸಂಸ್ಕೃತಿಯಲ್ಲಿ ಹಿತ್ಯಾತ್ಮಕ ಅಂಶದ ಜೊತೆಗೆ ನೇತ್ಯಾತ್ಯಕ ಅಂಶ ಕೂಡ ಸೇರಿಬಿಟ್ಟಿವೆ.ಕೈಗಾರಿಕೆಗಳನ್ನು ವಾಡುತ್ತಿರುವ ನಾವು ಚರಕ ಎಂಬುದು ಶೋಷಣೆ ಮುಕ್ತ ಸವಾಜ ನಿರ್ವಾಣ ವಾಡುತ್ತಿದೆ ಎಂಬುದನ್ನು ಮಹಾತ್ಮ ಹೇಳಿದ್ದರು ಎಂದು ತಿಳಿಸಿದರು.

ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಮಾತನಾಡಿ ಮಾತೃಭಾಷೆಯ ಪ್ರೀತಿ ಏಕೆ ಕಡಿಮೆಯಾಗುತ್ತಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ನಮ್ಮ ಸಂಸ್ಕೃತಿ, ಸಂಸ್ಕಾರ ಮತ್ತು ಮೌಲ್ಯಗಳ ಮೂಲ ಮಾತೃಭಾಷೆ. ಹಾಗಾಗಿ ಮಾತೃ ಭಾಷೆಯನ್ನುಕೀಳಾಗಿ ಕಾಣದೇ ಅಭಿಮಾನ ದಿಂದ ಬಳಸಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲುಂದ ಹಿರಿಯ ಪ್ರಾಧ್ಯಾಪಕ ಪ್ರೊ ಡಿ.ಆನಂದ್ ಮಾತನಾಡಿ ಕನ್ನಡ ಎಂಬುದು ಅದ್ಭುತ ಭಾಷೆಯಾಗಿದೆ ಈ ಭಾಷೆ ಸ್ವತಂತ್ರ ಭಾಷೆ ಹಾಗೂ ನಾವು ಉಚ್ಚರಿಸುವಂತಹದ್ದನ್ನು ಬಹಳ ಸುಲಭವಾಗಿ ಬರೆಯುವುದು ಕನ್ನಡ ಮಾತ್ರ ಎಂದು ಹೇಳಿದರೆ ತಪ್ಪಾಗಲಾರದು.ಕನ್ನಡಿಗರು ಸಹೃದುಂರು ಕನ್ನಡಿಗರು ಎಲ್ಲರನ್ನು ಸ್ವೀಕರಿಸುವವರು ಹಾಗೆ?ಯೇ ಭಾಷೆಯನ್ನು ಪ್ರೀತಿಸೋಣ ಗೌರವಿಸೋಣ ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಹಿರಿಯ ಪ್ರಾಧ್ಯಾಪಕ ಪ್ರೊ.ಆರ್. ಮಹೇಶ್, ಪ್ರೊ.ಎಸ್.ಜೆ.ಮಂಜುನಾಥ್ ಇದ್ದರು.

# ಅಂತಾರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ

ಮೈಸೂರು: ಭಾಷಣ ಮತ್ತು ಸಂಗೀತದಲ್ಲಿನ ಸಂಶೋಧನೆಯ ಗಡಿಗಳ ಕುರಿತ 29 ನೇ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಮೈಸೂರಿನ ಅಖಿಲ ಭಾರತ ಭಾಷಣ ಮತ್ತು ಶ್ರವಣ ಸಂಸ್ಥೆಯಲ್ಲಿ ಪ್ರಾರಂಭವಾಯಿತು.

ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ನವದೆಹಲಿ ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ವಿಜ್ಞಾನಿ 'ಜಿ' ಮತ್ತು ಗುಂಪು ಸಂಯೋಜಕಿ ಸುನೀತಾ ವರ್ಮಾ ಆನ್‌ಲೈನ್‌ನಲ್ಲಿ ಸಮ್ಮೇಳನವನ್ನು ಉದ್ಘಾಟಿಸಿದರು. ಬಳಿಕ ಆನ್‌ಲೈನ್‌ನಲ್ಲಿ ತಮ್ಮ ಉದ್ಘಾಟನಾ ಭಾಷಣದಲ್ಲಿ, ಮೇಡಂ ಸುನೀತಾ ವರ್ಮಾ ಮಾತನಾಡಿ, ಜನಸಾಮಾನ್ಯರಿಗೆ ಎಐ ಚಾಲಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡ ಉಪಕ್ರಮಗಳನ್ನು ವಿವರಿಸಿದರು. ಕೈಗೆಟುಕುವ, ಸುಸ್ಥಿರ, ಸ್ಥಳೀಯ ಮತ್ತು ಎಲ್ಲರನ್ನೂ ಒಳಗೊಂಡ ತಂತ್ರಜ್ಞಾನದೊಂದಿಗೆ ಆರೋಗ್ಯ ಸೇವೆಯ ಪ್ರವೇಶವನ್ನು ಸುಧಾರಿಸಲು ತಮ್ಮ ಗುಂಪು ಬದ್ಧವಾಗಿದೆ ಎಂದು ಹೇಳಿದರು. ಈ ದಿಕ್ಕಿನಲ್ಲಿ ಪ್ರಮುಖ ಸವಾಲು ವೆಚ್ಚ ಪರಿಣಾಮಕಾರಿತ್ವವಾಗಿದೆ. ಆರೋಗ್ಯ ಸೇವೆಯಲ್ಲಿನ ಇತ್ತೀಚಿನ



ಉಪಕ್ರಮಗಳು ಆರೋಗ್ಯ ವೃತ್ತಿಪರರಿಗೆ ಎಐ ವೇದಿಕೆಯ ಅಭಿವೃದ್ಧಿಯನ್ನು ಒಳಗೊಂಡಿವೆ, ಇದರಿಂದಾಗಿ ಅವರು ತಮ್ಮ ಕ್ಲಿನಿಕಲ್ ಅಭ್ಯಾಸದಲ್ಲಿ ಎಐ ಮಾದರಿಗಳನ್ನು ಪರಿಹರಿಸಲು ಮತ್ತು ಬಳಸಲು ಅನುವು ಮಾಡಿಕೊಡುತ್ತದೆ, ಇದರಲ್ಲಿ ಸ್ಟಾರ್ಟ್‌ಅಪ್‌ಗಳ ಒಳಗೊಳ್ಳುವಿಕೆ ಮತ್ತು ಪ್ರಮುಖ ಆಸ್ಪತ್ರೆಗಳಲ್ಲಿ ಅನುವಾದ ಕೇಂದ್ರವನ್ನು ಸ್ಥಾಪಿಸುವುದು ಸೇರಿದೆ ಎಂದು ಹೇಳಿದರು.

ತಂತ್ರಜ್ಞಾನ ಅಭಿವೃದ್ಧಿ ಅಗತ್ಯವಿರುವ ಕೆಲವು ಕ್ಷೇತ್ರಗಳನ್ನು ಉದ್ದೇಶಪೂರ್ವಕವಾಗಿ ಮತ್ತು ಶಾರ್ಟ್‌ಲಿಸ್ಟ್ ಮಾಡುವಂತೆ ಅವರು ಎಫ್ ಆರ್ ಎಸ್ ಎಂ 2025ರ ಪ್ರತಿನಿಧಿಗಳನ್ನು ವಿನಂತಿಸಿದರು, ಇದರಿಂದ ಅದು ರಾಷ್ಟ್ರೀಯ ಮಟ್ಟದಲ್ಲಿ ಕೈಗೆತ್ತಿಕೊಳ್ಳಬಹುದು. ನೀಲಿ ಆಕಾಶದಿಂದ ಅನ್ವಯಿಕ ಅಂದರೆ ಉತ್ಪನ್ನ ಆಧಾರಿತ ಸಂಶೋಧನಾ ಚಟುವಟಿಕೆಗಳವರೆಗೆ ವಿವಿಧ ಸಂಶೋಧನಾ ಚಟುವಟಿಕೆಗಳನ್ನು ಬೆಂಬಲಿಸುತ್ತದೆ, ಫಲಿತಾಂಶಗಳನ್ನು ವಾಣಿಜ್ಯಿಕವಾಗಿ ಕಾರ್ಯಸಾಧ್ಯವಾದ ಉತ್ಪನ್ನಗಳಾಗಿ ಪರಿವರ್ತಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ಐಐಐಟಿ ಧಾರವಾಡದ ನಿರ್ದೇಶಕ ಪ್ರೊ.ಎಸ್. ಆರ್. ಎಂ. ಪ್ರಸನ್ನ ಶ್ರವಣ ಸಮಸ್ಯೆಗಳಿರುವ ವ್ಯಕ್ತಿಗಳ ರೋಗನಿರ್ಣಯ, ಮೌಲ್ಯಮಾಪನ ಮತ್ತು ಚಿಕಿತ್ಸೆಗಾಗಿ ಎಐ ಆಧಾರಿತ ಪರಿಕರಗಳನ್ನು ಬಳಸುವ ಅಗತ್ಯವನ್ನು ಎತ್ತಿ ತೋರಿಸಿದರು. ಹೊಸ ಎಐ ಆಧಾರಿತ ಪರಿಕರಗಳನ್ನು ಅಭಿವೃದ್ಧಿಪಡಿಸುವಾಗ ಆಯಿಷ್ ಅಧ್ಯಾಪಕರು ಮತ್ತು ವೈದ್ಯರ ಪರಿಣತಿಯನ್ನು ಎಂಜಿನಿಯರ್‌ಗಳು/ತಂತ್ರಜ್ಞರು ಬಳಸಿಕೊಳ್ಳಬಹುದು ಎಂದು ಹೇಳಿದರು.

ಕೋಲ್ಕತ್ತಾದ ಜಾದವ್‌ಪುರ ವಿಶ್ವವಿದ್ಯಾಲಯದ ಡಾ.ಶಂಖ ಸನ್ಯಾಲ್, ಎಐಐಎಸ್‌ಎಚ್ ನಿರ್ದೇಶಕಿ ಐ.ಸಿ ಪ್ರೊ.ಪಿ.ಮಂಜುಳಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ವಿಚಾರ ಸಂಕಿರಣದ ಸಂಚಾಲಕ ಪ್ರೊ. ಅಜೀಶ್ ಕೆ. ಅಬ್ರಹಾಂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಾಳೆ ಪ್ರತಿಮೆ ಅನಾವರಣ



ಮೈಸೂರು:ಬಸವೇಶ್ವರ ಮುಖ್ಯ ರಸ್ತೆ ಕುದೇರು ಮಠದ ಪಕ್ಕದ ಶಿವಪಾದ ಗುರುಸೇವಾ ನಂದಿ ಧ್ವಜ ಸಂಘದ ವತಿಯಿಂದ ನ. 15 ರ ಬೆಳಗ್ಗೆ 10ಕ್ಕೆ ಸಂಘದ ಕಚೇರಿ ಮುಂಭಾಗ ಶಿವಯೋಗಿ ಶಿವಪಾದ ಸ್ವಾಮಿಗಳವರ ಕಂಚಿನ ಪ್ರತಿಮೆ ಅನಾವರಣ ಹಾಗೂ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ನಿರ್ದೇಶಕ ಜಿ. ಮಾದೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿದ್ಧ ಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಗುರುಶಾಂತ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಮೆ ಅನಾವರಣಗೊಳಿಸುವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆ ಯರ್ ಕಾರ್ಯಕ್ರಮ ಉದ್ಘಾಟಿಸುವರು, ಶಾಸಕರಾದ ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಎಂ.ಕೆ. ಸೋಮ ಶೇಖರ್ ಇನ್ನಿತರರು ಅತಿಥಿಗಳಾಗಿರುವರೆಂದರು.

ಸುಮಾರು 90 ಕೆಜಿ ತೂಕದ ಪ್ರತಿಮೆಯನ್ನು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ನಿರ್ಮಿಸಿದ್ದಾರೆ. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ, ಟಿ.ನರಸೀಪುರ, ಕೆ.ಆರ್. ನಗರ ಮೊದಲಾದ ಕಡೆಗಳಿಂದ ಸುಮಾರು ಐದು ಸಾವಿರ ಮಂದಿ ಭಕ್ತಾದಿಗಳು ಆಗಮಿಸಲಿದ್ದಾರೆಂದರು. ಅಧ್ಯಕ್ಷ ಆರ್. ಅಂಕಯ್ಯ, ಎಚ್.ಜಿ. ರಾಜು, ನಿತೀಶ್‌ಕುಮಾರ್, ಪಿ. ಗೂಳಪ್ಪ, ನಾಗಲಿಂಗಸ್ವಾಮಿ, ಗುರು ಇದ್ದರು.

ಮೊದಲ ಪುಟದಿಂದ

# ಅರಳುವ ಮೊಗ್ಗಿಗೆ ಬೇಕಿದೆ ಕಾನೂನು ಬಳ್ಳಿಯ ಆಸರೆ

ತಮ್ಮ ಬಗ್ಗೆ ಮತ್ತು ಇತರರಿಗೆ ಒಳ್ಳೆಯ ಗೌರವ ನೀಡುವುದು, ಮತ್ತೊಬ್ಬರ ಬಗ್ಗೆ ಸಹಾನುಭೂತಿ ಬೆಳೆಸುವುದರಿಂದ ಒಂದೊಳ್ಳೆಯ ಬಾಂಧವ್ಯವನ್ನು ಸೃಷ್ಟಿ ಮಾಡಬಹುದು, ಬುದ್ಧಿ ಬೆಳೆದ ನಂತರ ಮಕ್ಕಳಿಗೆ ತಾನು ಮಾಡುವ ಕೆಲಸಕಾರ್ಯಗಳು ಅರಿವಿಗೆ ಬರಲು ಶುರುವಾಗುತ್ತದೆ. ಇಂತಹ ಸಂದರ್ಭದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ತಮಗಿಂತ ವಯಸ್ಸಿನಲ್ಲಿ ಹಿರಿಯರಿಗೆ ಅವರು ಪುರುಷರಾಗಿರಲಿ ಅಥವಾ ಮಹಿಳೆಯರಾಗಿರಲಿ ಅವರಿಗೆ ಸಮಾನ ಗೌರವ ಕೊಡುವುದನ್ನು ಕಲಿತುಕೊಳ್ಳಬೇಕು ಎಂಬುದನ್ನು ತಿಳಿಹೇಳುವುದರ ಜೊತೆಗೆ. ವಿಶೇಷವಾಗಿ ಮನೆಯ ಹಿರಿಯರ ಬಗ್ಗೆ ಅಪಾರವಾದ ಕಾಳಜಿ ಮತ್ತು ಗೌರವವನ್ನು ಹೊಂದಬೇಕು ಎಂಬುದನ್ನು ಮಕ್ಕಳಿಗೆ ಪೋಷಕರು ಚಿಕ್ಕ ವಯಸ್ಸಿನಿಂದ ಮನವರಿಗೆ ಮಾಡಿಕೊಡುತ್ತಾ ಬರಬೇಕು.ಮಕ್ಕಳ ಭವಿಷ್ಯ ಹೇಗಿರುತ್ತದೆ ಎನ್ನುವುದು ಮನೆಯಲ್ಲೇ ನಿರ್ಧಾರವಾಗುವುದು. ಹೀಗಾಗಿ ಮಕ್ಕಳಿಗೆ ಜೀವನದ ಕೆಲವೊಂದು ಪಾಠಗಳನ್ನು ಕಲಿಸಿಕೊಡುವುದು ಅಗತ್ಯ.

ಎಳೆಯ ಜೀವಿಗಳಿಗೆ ಯಾವುದೇ ಸಮಸ್ಯೆಗಳು ಎದುರಾದಾಗ ಎದೆಗುಂದದೆ ಧೈರ್ಯದಿಂದ, ಸೃಜನಶೀಲತೆಯಿಂದ ಯೋಚಿಸಿ ಸ್ವತಂತ್ರವಾಗಿ ಆತ್ಮವಿಶ್ವಾಸದಿಂದ ವರ್ತಿಸಬೇಕು ಎಂಬುದನ್ನು ಮಕ್ಕಳಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಹುಟ್ಟಿನಿಂದಲೇ ಹೇಳಿಕೊಡಬೇಕು. ಯಾಕೆಂದರೆ ಮಕ್ಕಳು ತಮ್ಮ ಪೋಷಕರಿಂದಲೇ ಎಲ್ಲವನ್ನು ಕಲಿಯುವರು.

ಯಾವುದೇ ವಿಷಯವಾಗಲಿ ಅದು ಶಾಲೆಯಲ್ಲಿ ಆಟ ಅಥವಾ ಪಾಠದ ವಿಚಾರವಾಗಿರಲಿ ಮಕ್ಕಳಿಗೆ ಹಂತ-ಹಂತವಾಗಿ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗದರ್ಶನ ನೀಡಬೇಕು. ಹಾಗೆಯೇ ಪ್ರತಿಯೊಂದು ಪರಿಹಾರಗಳ ಲಾಭ-ನಷ್ಟಗಳ ಬಗ್ಗೆ ಅವರೊಂದಿಗೆ ಕುಳಿತು ಚರ್ಚಿಸಬೇಕು.

ಇನ್ನು ಮಕ್ಕಳ ಕೈಗೆ ಒಂದಿಷ್ಟು ಹಣವನ್ನು ಅವರು ಕೇಳಿದಾಗಲೆಲ್ಲ ಕೊಟ್ಟು ಬಿಟ್ಟರೆ ಸಾಲದು, ಯಾಕೆಂದರೆ ಅವರಿಗೆ ಅದನ್ನು ಉಳಿತಾಯ, ಖರ್ಚು ಮತ್ತು ತಿಂಗಳಿಡಿ ಅದರಿಂದ ಹೇಗೆ ಖರ್ಚನ್ನು ನಿಭಾಯಿಸಿಕೊಂಡು ಹೋಗಬೇಕು ಎನ್ನುವುದರ ಬಗ್ಗೆ ತಿಳಿಸಿಕೊಡುವುದು ಕೂಡಾ ಹೆತ್ತವರ ಕರ್ತವ್ಯವಾಗಿದೆ ನಾವು ಹೆತ್ತವರು ಹೇಗೆ ಇರುತ್ತೇವೂ ಹಾಗೆ ಮಕ್ಕಳು ಕೂಡ ವರ್ತಿಸುವರು. ಅತಿಯಾದ ಒತ್ತಡದ ಜೀವನದಲ್ಲಿ ಸಹಾನುಭೂತಿ ಎನ್ನುವುದೇ ಮಾಯವಾಗುತ್ತಿದೆ. ಇದರಿಂದ ಮಕ್ಕಳಲ್ಲಿ ಸಹಾನುಭೂತಿ ಮೂಡಿಸಿ, ಅವರನ್ನು ಒಬ್ಬ ಸೌಜನ್ಯಯುತ ವ್ಯಕ್ತಿಯನ್ನಾಗಿ ಬೆಳೆಸಬೇಕಾಗಿರುವುದು ಪ್ರತಿಯೊಬ್ಬ ತಂದೆ ತಾಯಿ ಕರ್ತವ್ಯವಾಗಿದೆ.

ಹಾಗೆ ಮಕ್ಕಳು ಎಲ್ಲಾ ಸಮಯದಲ್ಲೂ ಗೆಲ್ಲಲೇ ಬೇಕು ಎಂದು ಬಯಸುವ ಮೊದಲು ಸೋಲಿನಿಂದ ಜೀವನಪಾಠವನ್ನು ಕಲಿಯುವುದನ್ನು ಕಲಿಸಬೇಕು ಸೋಲು ಎನ್ನುವುದು ಗೆಲುವಿನ ಸೋಪಾನ ಎನ್ನುವ ಮಾತಿದೆ. ಅದೇ ರೀತಿಯಾಗಿ ಮಕ್ಕಳು ಸೋತಾಗ ಅವರನ್ನು ಬೈಯ್ಯುವ ಬದಲು ಅವರನ್ನು ಪ್ರೋತ್ಸಾಹಿಸಿ ಮತ್ತು ಮುಂದೆ ಕೂಡ ಸೋಲನ್ನು ಮೆಟ್ಟಿ ಗೆಲುವು ಪಡೆಯಬಹುದು ಎಂದು ಹೇಳಿಕೊಡಿ. ಜೀವನದಲ್ಲಿ ಸೋಲು ಹಾಗೂ ಗೆಲುವು ಎರಡೂ ಇರುವುದು. ಇದನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ತಿಳಿಸುವುದರಿಂದ ಮಕ್ಕಳು ಆತ್ಮಹತ್ಯೆಯ ಕಡೆಗೆ ಮುಖಮಾಡದಂತೆ, ಮಾದಕದ್ರವ್ಯ ವ್ಯಸನಿ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ತಡೆಯಬಹುದಾಗಿದೆ.

ದೇಶದ ಅಭಿವೃದ್ಧಿಯ ಪಥದಲ್ಲಿ ಇಂದಿನ ಮಕ್ಕಳೇ ಹೂ ಹಾಸುವಿನಂತೆ ಎಂದರೆ ತಪ್ಪಾಗಲಾರದು ಆದರೆ ಅದೇ ಮಕ್ಕಳು ಗೊತ್ತೋ ಗೊತ್ತಿಲ್ಲದೆಯೋ ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ ಭಾಗಿಯಾಗುವುದರ ಜೊತೆಗೆ ಆರೋಪಿಯಾಗಿ ಬಾಲಾಪರಾಧಿಗಳಾಗಿ ಜೈಲು ಸೇರುವುದು ಒಂದೆಡೆ ಆದರೆ, ಹದಿಹರೆಯದ ಆಕರ್ಷಣೆ ಇಂದು ಅನೇಕ ಎಳೆಯ ಪ್ರಾಯದ ಅಂದರೆ 18 ರಿಂದ 24ರೊಳಗಿನ ವಯಸ್ಸಿನ ಯುವಕರು ಪೋಕ್ಸೋ ಮತ್ತು ಮಾದಕದ್ರವ್ಯ ಅಪರಾಧಗಳಿಂದ ಜೈಲು ಶಿಕ್ಷೆ ಅನುಭವಿಸುತ್ತಿರುವುದು ಖೇದಕರ ಸಂಗತಿಯಾಗಿದೆ. ಇದು ಗಂಡುಮಕ್ಕಳ ಕಥೆಯಾದರೆ ನಮ್ಮ ರಾಜ್ಯಯೊಂದರಲ್ಲೆ 18 ವಯಸ್ಸಿನೊಳಗಿನ 20000 ಸಾವಿರಕ್ಕೂ ಅಧಿಕ ಹೆಣ್ಣು ಮಕ್ಕಳು ಗರ್ಭವತಿಯಾರಗಿ ಪುಟ್ಟ ವಯಸ್ಸಿನಲ್ಲಿ ಮಗುವನ್ನು ಹೇರತ್ತಿರುವುದು ಸ್ವಸ್ಥ ಸಮಾಜದ ಬೆಳವಣಿಗೆಗೆ ತೊಡಕು ಉಂಟು ಮಾಡುವುದರ ಜೊತೆಗೆ ಅವರ ದೈಹಿಕ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ.

ಪ್ರತಿ ಮಗುವಿಗೂ ಮನೆಯೇ ಮೊದಲ ಪಾಠಶಾಲೆ ಆಗಿದ್ದರೂ.. ಶಾಲೆಗಳಲ್ಲಿ ಪ್ರಾಥಮಿಕ, ಪ್ರೌಢ, ಕಾಲೇಜು ವಿದ್ಯಾರ್ಥಿಗಳಿಗೆ ಅವರ ಪುಟ್ಟ ಹೃದಯದಲ್ಲಿ ಜೀವನಕ್ಕೆ ಸ್ಫೂರ್ತಿ ತುಂಬುವ ವಿಚಾರಗಳ ಬೀಜವನ್ನು ಬಿತ್ತುವ ಕೆಲಸ ಮಾಡಬೇಕು... ಹಾಗೆ ಹುಟ್ಟಿನಿಂದ ಮರಣದವರೆಗೆ ನಮ್ಮೊಂದಿಗೆ ಹಾಸುಹೊಕ್ಕಾಗಿರುವ ಕಾನೂನು ,ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಪಾಲನೆಗೆ ಸಂಬಂಧಿಸಿದ ಕಾನೂನುಗಳ ರಚನೆ. ತಾರತಮ್ಯದಿಂದ ಮಕ್ಕಳಿಗೆ ರಕ್ಷಣೆ ನೀಡುವುದು.ಮಕ್ಕಳ ಸುರಕ್ಷಿತ ಮತ್ತು ಆರೋಗ್ಯಕರ ಬೆಳವಣಿಗೆಗೆ ಅಗತ್ಯವಿರುವ ಪರಿಸರವನ್ನು ನಿರ್ಮಿಸುವುದು. ಮಕ್ಕಳನ್ನು ಹಿಂಸೆ, ಶೋಷಣೆ ಮತ್ತು ನಿರ್ಲಕ್ಷ್ಯದಿಂದ ರಕ್ಷಿಸುವುದು ಇವುಗಳ ಜೊತೆಗೆ

ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015: ಇದರ ಅಡಿಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳನ್ನು ನೋಂದಾಯಿಸುವುದು ಕಡ್ಡಾಯವಾಗಿದೆ. ನೋಂದಣಿಯಾಗದಿದ್ದರೆ, ದಂಡ ಅಥವಾ ಜೈಲು ಶಿಕ್ಷೆ ವಿಧಿಸಬಹುದು.

ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ಸಂರಕ್ಷಿಸುವ ಕಾಯ್ದೆ (ಕಔಅಖಔ), 2012: ಇದು ಮಕ್ಕಳ ಲೈಂಗಿಕ ದೌರ್ಜನ್ಯದಿಂದ ರಕ್ಷಿಸಲು ರೂಪಿಸಲಾದ ಪ್ರಮುಖ ಕಾಯ್ದೆ.

ದತ್ತು ನಿಯಮಾವಳಿಗಳು, 2022ರಲ್ಲಿ ಜಾರಿಗೊಂಡಿರುವ ಮಕ್ಕಳ ದತ್ತು ಪ್ರಕ್ರಿಯೆಯನ್ನು ನಿಯಂತ್ರಿಸುವ ನಿಯಮಗಳು. ಬಾಲ್ಯ ವಿವಾಹ ನಿಷೇಧ ಕಾಯ್ದೆ, 2006: ಬಾಲ ವಿವಾಹವನ್ನು ನಿಷೇಧಿಸುವ ಕಾನೂನು. ಇದರ ಪ್ರಕಾರ ಹುಡುಗರಿಗೆ 21 ಮತ್ತು ಹುಡುಗಿಯರಿಗೆ 18 ವರ್ಷ ಕನಿಷ್ಠ ವಯಸ್ಸು ನಿಗದಿಪಡಿಸಲಾಗಿದೆ. ಕರ್ನಾಟಕ ನಾಗರಿಕ ಸೇವಾ (ನಡವಳಿಕೆ) ಕಾಯ್ದೆ, 1966: ಇದರ ನಿಯಮ 29ಎ ಪ್ರಕಾರ, ಸರ್ಕಾರಿ ನೌಕರರು 14 ವರ್ಷದೊಳಗಿನ ಮಕ್ಕಳನ್ನು ಮನೆಕೆಲಸಕ್ಕೆ ನೇಮಿಸುವುದು ಶಿಕ್ಷಾರ್ಹ ಅಪರಾಧ ಈ ಕಾನೂನಗಳ ಬೇಲಿಯಿಂದ ಸಂರಕ್ಷಣೆ ಮಾಡುವುದು ಜೊತೆಗೆ ಜಾಗೃತಿ ಮೂಡಿಸುವ ಕೆಲಸ ನಮ್ಮ ನಿಮ್ಮೆಲ್ಲರದಾಗಿದೆ.

# ಡಿ.8ರಿಂದ ಚಳಿಗಾಲದ ಅಧಿವೇಶನ

ಡಿ'ಕುನ್ಹಾ ಅವರ ವರದಿಗೆ ಸಂಬಂಧಿಸಿದೆ ಎಂದು ಸಚಿವ ಎಚ್.ಕೆ ಪಾಟೀಲ್ ತಿಳಿಸಿದರು. ಕರ್ನಾಟಕದ ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಲು ಮತ್ತು ಸೂಕ್ತ ಶಿಫಾರಸುಗಳನ್ನು ಮಾಡಲು ಎರಡನೇ ಸಮಿತಿಯನ್ನು ರಚಿಸಲಾಯಿತು. ಮೂರನೇ ಸಮಿತಿಯು ಬೆಂಗಳೂರು-ಮೈಸೂರು ಮೂಲಸೌಕರ್ಯ ಅಭಿವೃದ್ಧಿ ಕಾರಿಡಾರ್‌ನ ಬೆಳವಣಿಗೆಗಳನ್ನು ಪರಿಶೀಲಿಸುವ ಮತ್ತು ಭವಿಷ್ಯದಲ್ಲಿ ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳನ್ನು ಪ್ರಾರಂಭಿಸುವ ಕಾರ್ಯವನ್ನು ಹೊಂದಿದೆ ಎಂದರು.

ಮೊದಲ ಮತ್ತು ಎರಡನೇ ಸಮಿತಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವ ವಹಿಸುವರು. ಮೂರನೆಯ ಸಮಿತಿಗೆ ಗೃಹ ಸಚಿವ ಪರಮೇಶ್ವರ್ ನೇತೃತ್ವ ವಹಿಸಿದ್ದಾರೆ. ವರದಿಯನ್ನು ಆದಷ್ಟು ಬೇಗ ಸಲ್ಲಿಸಬೇಕೆಂದು ಸೂಚಿಸಲಾಗಿದೆ. ಆದರೆ, ಸಮಯ ಮಿತಿಯನ್ನು ನಿರ್ದಿಷ್ಟಪಡಿಸಲಾಗಿಲ್ಲ ಎಂದು ಅವರು ತಿಳಿಸಿದರು. ಮೈಸೂರು ನಗರದಲ್ಲಿರುವ ಸರ್ಕಾರಿ ಅತಿಥಿ ಗೃಹದ ನೌಕರರ ವಸತಿ ಗೃಹಗಳ ಆವರಣದಲ್ಲಿ ಶಾಸಕರ ಹಾಗೂ ಸಂಸದರ ಭವನವನ್ನು ಅಂದಾಜು 15 ಕೋಟಿ ರೂ.ಗಳ ಮೊತ್ತದಲ್ಲಿ ನಿರ್ಮಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ

## ಡಿ.8ರಿಂದ ಚಳಿಗಾಲದ ಅಧಿವೇಶನ

ಜನರಲ್ ಶಶಿಕಿರಣ ಶೆಟ್ಟಿ 300 ಜನರಿಗೆ ಮಾತ್ರ ಅವಕಾಶ ಮಾಡಿಕೊಡುವಂತೆ ವಾದ ಮಂಡಿಸಿದರು. ಇದಕ್ಕೆ ಆರ್‌ಎಸ್‌ಎಸ್ ಪರ ವಕೀಲ ಅರುಣ್ ಶ್ಯಾಂ ಆಕ್ಷೇಪ ವ್ಯಕ್ತಪಡಿಸಿದರು. ಇದು ರಾಷ್ಟ್ರೀಯ ಸ್ವಯಂ ಸೇವಾ ಸಂಘದ 100ನೇ ವರ್ಷದ ಆಚರಣೆ. ಸ್ಥಳೀಯರ ಭಾವನೆ ಇದರೊಂದಿಗೆ ಇದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಗಣವೇಷಧಾರಿಗಳು ಪಾಲ್ಗೊಳ್ಳಲು ಅವಕಾಶ ಮಾಡಿಕೊಂಡುವಂತೆ ಮನವಿ ಮಾಡಿದರು. ಬಳಿಕ ಕೋರ್ಟ್ 350 ಮಂದಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿತು. 300 ಜನ ಗಣವೇಷಧಾರಿಗಳಾಗಿ ಹಾಗೂ 50 ಜನ ಬ್ಯಾಂಡ್ ಸಮೇತ ಭಾಗವಹಿಸಬಹುದು ಎಂದು ಕೋರ್ಟ್ ಸೂಚಿಸಿತು.

## ಇಂದು ಕೃತಿ ಬಿಡುಗಡೆ

ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ ಎಂದು ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಸಚಿವರಾದ ಎಚ್.ಕೆ ಪಾಟೀಲ್, ಎಂ.ಬಿ ಪಾಟೀಲ್, ಬೋಸರಾಜು, ಹಿರಿಯ ವಕೀಲ ಮೋಹನ್ ವಿ ಕಾತರಕಿ ಭಾಗವಹಿಸುವರು

## ಕೋರ್ಟ್ ಹೇಳಿದ್ದೇನು?

ಅಧಿಕಾರಿಗಳ ಮುಂದೆ ಇಡಬೇಕು ಎಂದು ಹೇಳಿರುವ ಸುಪ್ರೀಂ ಕೋರ್ಟ್ ಅರ್ಜಿ ಪುರಸ್ಕರಿಸಲು ನಿರಾಕರಿಸಿತು.

ಕಾವೇರಿ ಜಲಾನಯನ ಪ್ರದೇಶದ ನೀರಿನ ವಿಷಯದಲ್ಲಿ, ವಿವಾದವನ್ನು ಈ ನ್ಯಾಯಾಲಯ ನಿರ್ಧರಿಸಿದೆ. ಯಾವುದೇ ಸಮಸ್ಯೆಗಳನ್ನು, ಕಾವೇರಿ ನೀರು ನಿಯಂತ್ರಣ ಸಮಿತಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕೇಂದ್ರ ಜಲ ಆಯೋಗದ ಮುಂದೆ ಎತ್ತಬಹುದು ಎಂದು ಮುಖ್ಯ ನ್ಯಾಯಮೂರ್ತಿಗಳು ತಿಳಿಸಿದರು. ಅಧಿಕಾರಿಗಳಿಗೆ ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶಿಸಿದರು.

# ಮೇಕೆದಾಟುಗೆ ಗ್ರೀನ್ ಸಿಗ್ನಲ್'

ತಯಾರಿಸಲು ಅನುಮತಿ ಕೋರಿ

ಕರ್ನಾಟಕ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ವಿಚಾರಣೆ ನಡೆಸಿತು. ತಮಿಳುನಾಡಿನ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿದರು.

ಡಿಪಿಆರ್ ತಯಾರಿಕೆಗಾಗಿ ಕೇಂದ್ರ ಜಲ ಆಯೋಗ (ಸಿಡಬ್ಲ್ಯೂಸಿ) ಹೊರಡಿಸಿದ್ದ ಆದೇಶಕ್ಕೆ ತಮಿಳುನಾಡು ಸಲ್ಲಿಸಿದ್ದ ಸವಾಲು ಅಕಾಲಿಕ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಮತ್ತು ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಿದೆ. ರಾಜ್ಯವು ಆದೇಶವನ್ನು ಮೇಲ್ವಿಚಾರಣೆ ಮಾಡಲು ಅಧಿಕಾರ ಹೊಂದಿರುವ ತಜ್ಞರ ಸಮಿತಿಯನ್ನು ಸಂಪರ್ಕಿಸಬೇಕಾಗಿತ್ತು ಎಂದು ತಿಳಿಸಿದೆ. ಕೇಂದ್ರ ಜಲ ಆಯೋಗದ ನಿರ್ದೇಶನಗಳು ತಜ್ಞರ ಶಿಫಾರಸುಗಳನ್ನು ಆಧರಿಸಿವೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅನುಮೋದನೆಗಳು ವಿವರವಾದ ಯೋಜನಾ ವರದಿ ಅನುಮೋದನೆಗೆ ಪೂರ್ವಾಪೇಕ್ಷಿತವಾಗಿದೆ ಎಂದು ಪೀಠ ತಿಳಿಸಿದೆ. ರಾಜ್ಯದ ಆಕ್ಷೇಪಣೆಗಳು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಗಳ ಅಭಿಪ್ರಾಯವನ್ನು ಪರಿಗಣಿಸಿದ ನಂತರವೇ ಯೋಜನೆಯನ್ನು ಅನುಮೋದಿಸಲಾಗುತ್ತದೆ. ಮೇಕೆದಾಟು ಅಣೆಕಟ್ಟು ಪ್ರಸ್ತಾವನೆಯು ಕಾವೇರಿ ಜಲ ವಿವಾದದ ಕುರಿತಾದ ಸುಪ್ರೀಂ ಕೋರ್ಟ್ ಅಂತಿಮ ತೀರ್ಪಿನ ನೇರ ಉಲ್ಲಂಘನೆಯಾಗಿದೆ. ಅಣೆಕಟ್ಟು ನಿರ್ಮಾಣವು ರಾಜ್ಯದ ನೀರು ಸರಬರಾಜಿನ ಮೇಲೆ ತೀವ್ರ ಪರಿಣಾಮ ಬೀರುತ್ತದೆ ಎಂದು ತಮಿಳುನಾಡು ವಾದ ಮಂಡಿಸಿತ್ತು.

# ಬಿಎಸ್‌ವೈಗೆ ಸಂಕಷ್ಟ

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಯಡಿಯೂರಪ್ಪ ಮೇಲಿದೆ. ಸಹಾಯ ಕೇಳಿ ಬಂದಾಗ ಯಡಿಯೂರಪ್ಪ ಅವರು ತಮ್ಮ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಮಾರ್ಚ್ 2024ರಲ್ಲಿ ಬಾಲಕಿಯ ತಾಯಿ ದೂರು ನೀಡಿದ್ದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಬೆಂಗಳೂರಿನ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಗಂಭೀರತೆ ಪರಿಗಣಿಸಿ ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿತ್ತು. ಸಾಕ್ಷ್ಯ ನಾಶ ಮತ್ತು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿದ ಆರೋಪಗಳ ಮೇಲೆ ಯಡಿಯೂರಪ್ಪ ಮತ್ತು ಅವರ ಮೂವರು ಸಹಾಯಕರ ವಿರುದ್ಧ ಜೂನ್ 2024ರಲ್ಲಿ ಸಿಐಡಿ 750 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದೆ.

ಈ ಪ್ರಕರಣದಲ್ಲಿ ದೂರು ನೀಡಿದ್ದ ಬಾಲಕಿ ತಾಯಿ ಮತ್ತು ಆ ಬಾಲಕಿ ಇಬ್ಬರೂ ಈಗಾಗಲೇ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆಗಳನ್ನು ದಾಖಲಿಸಿದ್ದಾರೆ. ಬಾಲಕಿಯ ತಾಯಿ ಮೇ 26, 2024ರಂದು ನಿಧನರಾಗಿದ್ದರು.

# ನ್ಯಾಯಾಂಗ ನಿಂದನೆ ಎಚ್ಚರಿಕೆ

**ಎಲ್ಲಾ ನಿರ್ದೇಶನಗಳನ್ನು ಪಾಲಿಸಿದೆ ಎಂದು ಸಮರ್ಥಿಸಿಕೊಂಡಿತು. ತಮಿಳುನಾಡು ಎತ್ತಿರುವ ಅನೇಕ ಸಮಸ್ಯೆಗಳು ಉತ್ಪ್ರೇಕ್ಷವಾಗಿದೆ ಎಂದು ವಾದಿಸಿತು. ವಿಚಾರಣೆಯಲ್ಲಿ ವಿವಾದದ ದೀರ್ಘ ಇತಿಹಾಸದ ಬಗ್ಗೆಯೂ ಟೀಕೆಗಳು ಬಂದವು. ಕರ್ನಾಟಕ-ತಮಿಳು ನಾಡು 50 ವರ್ಷಗಳಿಂದ ಕಾವೇರಿ ಜಲ ವಿವಾದ ಬಗ್ಗೆ ಹೋರಾಟ ನಡೆಸುತ್ತಿವೆ ಎಂದು ವಕೀಲರು ಗಮನ ಸೆಳೆದರು. ಸಿಜೆಐ ಈ ನದಿ ತೀರದ ವಿವಾದಗಳು ಮುಂದುವರಿಯುತ್ತಲೇ ಇರುತ್ತವೆ. ನಾವು ಇಲ್ಲಿ ಇರುವುದಿಲ್ಲ ಎಂದು ಹೇಳಿದರು. ರೈತ ಸಂಘಟನೆಗಳು ಸಹ ನೀರು ಹಂಚಿಕೆಯ ಕುರಿತು ಅರ್ಜಿಗಳನ್ನು ಸಲ್ಲಿಸಿವೆ ಎಂದು ಸಿಜೆಐ ಹೇಳಿದರು. ಸಿಡಬ್ಲ್ಯುಸಿ ಶಿಫಾರಸುಗಳನ್ನು ಸರಿಯಾಗಿ ಅನುಷ್ಠಾನಗೊಳಿಸುವಂತೆ ಕೋರಿ ಸಲ್ಲಿಸಲಾದ ಪಿಐಎಲ್ ಬಾಕಿ ಇದೆ ಎಂದರು. ಸಿಡಬ್ಲ್ಯೂಎಂಎ ಮತ್ತು ಸಿಡಬ್ಲ್ಯೂಆರ್ ಗಳು ಈ ಸಮಸ್ಯೆಯನ್ನು ನಿರ್ವಹಿಸಲು ಕೇಂದ್ರ ಸರ್ಕಾರ ರಚಿಸಿದ ಸಂಸ್ಥೆಗಳಿವೆ. ನಾವು ಯಾವುದೇ ಆದೇಶಗಳನ್ನು ನೀಡುವುದಿಲ್ಲ ಎಂದು ಮುಖ್ಯ ನಾಯಮೂರ್ತಿ ಹೇಳಿದರು.**


## ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು - 570 005

ಸಂಖ್ಯೆ: ಮೈಅಪ್ರಾ:ನಯೋಶಾ:ಭೂಉಬ:ನಯೋ-1:2025-26 ದಿನಾಂಕ: 11.11.2025

## ಸಾರ್ವಜನಿಕ ಪ್ರಕಟಣೆ

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ**

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, **ಹುಯಿಲಾಳು ಗ್ರಾಮದ ಸ.ನಂ.205/3ರ 04ಎಕರೆ 00ಗುಂಟೆ ಪೈಕಿ 01ಎಕರೆ 35.04ಗುಂಟೆ** ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಗೀತಾ.ಎಸ್ ಮೂರ್ತಿ ಮತ್ತು ಬಿ.ಎಸ್.ಸುನಾಗ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **"ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು-570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.




**ಸಹಿ/- ನಗರ ಯೋಜಕ ಸದಸ್ಯರು,**
**ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.**

**ವಾಸಾಸಂಇ/ಮೈಸೂರು/1211/ಎಸ್‌ಎಸ್‌ಸಿ/2025-26**

# ಕೆಡಿಪಿ ಸದಸ್ಯ ಅಧಿಕಾರ ಸ್ವೀಕಾರ




ಚಾಮರಾಜನಗರ, ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಮಿತಿ ಸದಸ್ಯರಾಗಿ ರಾಜ್ಯ ಸರ್ಕಾರದಿಂದ ನೇಮಕವಾಗಿರುವ ಶ್ರೀನಿವಾಸ್ ಸಿ. ಅವರು ಇಂದು ಅಧಿಕಾರ ಸ್ವೀಕಾರ ಮಾಡಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣ ದಲ್ಲಿ ತಾಲೂಕು ಪಂಚಾಯಿತಿ ಯೋಜನಾಧಿಕಾರಿ ಕಿರಣ್ ಕುಮಾರ್ ಅವರಿಂದ ಅಧಿಕಾರಸ್ವೀಕರಿಸಿದರು. ಬಳಿಕ ಮಾತನಾಡಿ, ನನ್ನನ್ನು ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಮಿತಿ ಸದಸ್ಯರಾಗಿ ನೇಮಕ ಮಾಡಿದ. ಶಾಸಕ ಸಿ.ಪುಟ್ಟರಂಗಶೆಟ್ಟಿ, ಮುಖ್ಯಮಂತ್ರಿ ಗಳು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಜಿಲ್ಲೆಯ ಶಾಸಕರಿಗೆ ಈ ಮೂಲಕ ಅಭಿನಂದನೆ ಸಲ್ಲಿತ್ತೇನೆ. ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ 25 ಇಲಾಖೆಗಳಿಗೆ ಸಂಬಂಧಿಸಿದಂತೆ ಶಾಸಕರ ಸಮ್ಮುಖದಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ ಜನತೆಗೆ ಸರ್ಕಾರದಿಂದ ದೊರೆಯುವ ಸಲವತ್ತು ಗಳು ತಲುಪಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

**ಕಾಂಗ್ರೆಸ್ ಮುಖಂಡರಿಂದ ಸನ್ಮಾನ**


ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಮಿತಿ ಸದಸ್ಯರಾಗಿ ಅಧಿಕಾರ ಸ್ವೀಕರಿಸಿದ ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಮುಖಂಡರು, ಸ್ನೇಹಿತರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ್, ಮಲ್ಲೈ ಮಹದೇಶ್ವರ ಬೆಟ್ಟದ ಪ್ರಾಧಿ ಕಾರ ಸಮಿತಿ ನಾಮನಿದೇಶಿತ ಸದಸ್ಯ ಮರಿಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಸೋಮೇಶ್, ಭೋಗಾಪುರ ನಾಗೇಂದ್ರ, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಚೇತನ್‌ಕುಮಾರ್, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ಚೂಡಾ ಸದಸ್ಯ ರಾಜೇಂದ್ರ ದ್ವಾರ್ಕಿ, ತಾ.ಪಂ. ಮಾಜಿ ಸದಸ್ಯ ಮಹದೇವಶೆಟ್ಟಿ, ಮಹದೇವಸ್ವಾಮಿ, ಎನ್‌ಎಸ್‌ಯುವ ಜಿಲ್ಲಾಧ್ಯಕ್ಷ ಮೋಹನ್ ನಗು, ಕುಮಾರ್, ಸ್ನೇಹಿತರು ಇತರರು ಹಾಜರಿದ್ದರು.

# ಹುಲಿ ದಾಳಿ: ದೇವರ ಗೂಳಿ ಬಲಿ

ಎಚ್.ಡಿ.ಕೋಟೆ: ಎಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಸಮೀಪದ ಮಳಲಿ ಗ್ರಾಮದ ಬಸವೇಶ್ವರ ದೇವರಿಗೆ ಬಿಟ್ಟಿದ್ದ ಗೂಳಿ ಮೇಲೆ ಹುಲಿ ದಾಳಿ ನಡೆಸಿ ಬಲಿ ಪಡೆದಿದೆ.

ತಾಲೂಕಿನ ಎನ್.ಬೆಳತ್ತೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿಂಭಾಗ ಹುಲಿ ದಾಳಿ ನಡೆಸಿ ಬಲಿಪಡೆದಿದ್ದು, ಗೂಳಿಯ ದೇಹದ ಹಿಂಭಾಗವನ್ನು ತಿಂದು ಹಾಕಿದೆ. ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಆಗಮಿಸಿ ಹುಲಿ ಪತ್ತೆಗೆ ಕೂಂಬಿಂಗ್ ಆರಂಭಿಸಿದ್ದಾರೆ.


ಮಳಲಿ ಗ್ರಾಮದ ಮಹದೇವಪ್ಪ ಹಾಗೂ ಗುರುಮೂರ್ತಿ ಕುಟುಂಬಸ್ಥರು ಹತ್ತು ವರ್ಷಗಳ ಹಿಂದೆ ಬಸವೇಶ್ವರ ದೇವರಿಗೆ ಬಿಟ್ಟಿದ್ದರು. ಊರಿನ ಜನರ ಅಚ್ಚುಮೆಚ್ಚಿನ ಬಸವ ಮೃತಪಟ್ಟಿದ್ದರಿಂದ ಗ್ರಾಮಸ್ಥರು ಮರಕ ವ್ಯಕ್ತಪಡಿಸಿದರು. ಗ್ರಾಮದ





ಎಲ್ಲ ಬೀದಿಗಳಲ್ಲಿ ಮೆರವಣಿಗೆ ಮೂಲಕ ಗೂಳಿಯ ಕಳೇಬರಕ್ಕೆ ಪೂಜೆ ಸಲ್ಲಿಸಿದರು. ಪಡುವಲವಿರಕ್ತ ಮಠದ ಮಹದೇವಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ, ಅಂಚೀಪುರ ಮಠದ ಕುಮಾರಸ್ವಾಮಿಗಳು ಪೂಜಾ ಕೈಂಕರ್ಯಗಳ ಮೂಲಕ ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂಭಾಗ ಗೂಳಿಯ ಅಂತ್ರಕ್ರಿಯೆ ನೆರವೇರಿಸಿದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ನನ್ನಂತರಂಗದ ನೋವನು
ತಿಳಿಯುವುದು ನೀನೊಬ್ಬನೆ ಕೃಷ್ಣಾ!

ಆದ ನೋವಿಗೆ ಔಷಧಿ ಹಚ್ಚಲು
ಬರುವುದು ನಿನಗೊಬ್ಬನಿಗೆ ಕೃಷ್ಣಾ!

ನನ್ನ ಮೌನದ ಪ್ರತಿ ಮಾತಿಗೂ
ಕಿವಿಯಾಗುವುದು ನೀನೊಬ್ಬನೇ ಕೃಷ್ಣಾ!

ನಿನ್ನ ಧ್ಯಾನದೊಳು ಲೀನವಾದರೆ
ನಲಿದಾಡುವುದು ಮನ, ಅರಿವಿಗೆ
ಬರುವುದು ನನಗೊಂದೇ ಕೃಷ್ಣಾ!

# ನಾಳೆ ಕನ್ನಡ ರಾಜ್ಯೋತ್ಸವ

ಮೈಸೂರು:ಆಲನಹಳ್ಳಿಯ ಗಿರಿದರ್ಶಿನಿ ಬಡಾವಣೆಯ ಶಾಶ್ವತ ಸೇವಾ ಶಾಲೆಯಲ್ಲಿ ನ. 15 ರ ಸಂಜೆ 5.30ಕ್ಕೆ ಕನ್ನಡ ರಾಜ್ಯೋತ್ಸವ ಆಚರಿಸಲಿದ್ದು, ಈ ವೇಳೆ ಕಳೆದ ಎಸ್‌ಎಸ್‌ಎಲ್‌ಸಿಯಲ್ಲಿ 625 ಕ್ಕೆ 625 ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ಪೂಜ್ಯ ಆಯಿ ಮಾತಾಜಿ ಪುರಸ್ಕಾರ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ನಿವೃತ್ತ ಪ್ರಾಚಾರ್ಯ ಶಿ. ಕುಮಾರಸ್ವಾಮಿ ತಿಳಿಸಿದರು.

ಒಟ್ಟು 13 ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಜ್ಞಾನಲೋಕ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಆರು ಮಂದಿ ಪ್ರಸಿದ್ಧ ಕಲಾವಿದರಿಗೆ ಶಾಶ್ವತ ಕಲಾಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆಂದರು. ಮುಖ್ಯ ಶಿಕ್ಷಕರಾದ ಪವಿತ್ರ, ರಮೇಶ್ ತಾಯೂರು, ಎಂ.ಆರ್. ಚೌಧರಿ ಇದ್ದರು.



# ಹಾಡಿ ಜನರ ಸವಲತುಗಳಿಗೆ ಆಗ್ರಹಿಸಿ ಪ್ರತಿಭಟನೆ




ಎಚ್.ಡಿ.ಕೋಟೆ: ತಾಲೂಕಿನ ಚಿಕ್ಕೆರೆಯೂರು ಹಾಡಿಯಲ್ಲಿರುವ ಅಂಗನವಾಡಿಯಲ್ಲಿ ಪೌಷ್ಟಿಕ ಆಹಾರದ ಸಾಮಗ್ರಿಗಳನ್ನು ಕೊಡಬೇಕೆಂದು ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿದರು.

ಎಐಎಂಎಸ್ ಎಸ್ (ಂಋಒಖಖ) ಜಿಲ್ಲಾ ಹೋರಾಟಗಾರ್ತಿ ಜಿ.ಪುಷ್ಪ ಮಾತನಾಡಿ, ಚಿಕ್ಕೆರೆಯೂರು ಹಾಡಿಯಲ್ಲಿ ಶಾಶ್ವತ ಅಂಗನವಾಡಿ ಕಟ್ಟಡವನ್ನು ನಿರ್ಮಿಸಬೇಕು. ಅಲ್ಲಿಯವರೆಗೆ ತಾತ್ಕಾಲಿಕ ಅಂಗನವಾಡಿ ಕಟ್ಟಡದಲ್ಲಿ ಪ್ರತಿ ತಿಂಗಳು ಆದಿವಾಸಿಗಳಿಗೆ ನೀಡುವ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಇಲ್ಲಿಯೇ ನೀಡಬೇಕು. ಚಿಕ್ಕೆರೆಯೂರು ಹಾಡಿಯಲ್ಲಿ ತಾತ್ಕಾಲಿಕ ಅಂಗನವಾಡಿ ಕಟ್ಟಡ ಇದ್ದರೂ ಸಹ ಇಲ್ಲಿಯ ಜನರು ಹಾಡಿಯಿಂದ ದೂರವಿರುವ ಚಿಕ್ಕಕೆರೆಯೂರಿನ ಅಂಗನವಾಡಿಗೆ ಹೋಗಿ ಪೌಷ್ಟಿಕ ಆಹಾರ ಸಾಮಾಗ್ರಿಗಳನ್ನು ತೆಗೆದುಕೊಂಡು ಬರುವ ಪರಿಸ್ಥಿತಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂದಿಗೂ ಸಹ ಇಲ್ಲಿನ ಮಹಿಳೆಯರು, ಪುರುಷರು, ಮಕ್ಕಳು, ಸಾಮಾನ್ಯ ಜನರು ಬಯಲಿನಲ್ಲೇ ಶೌಚಾಲಯಕ್ಕೆ ಹೋಗುವ ಪರಿಸ್ಥಿತಿ ಇದೆ ವಾಸಿಸಲು ಯೋಗ್ಯವಾದ ಮನೆಗಳಿಲ್ಲ. ಸರಿಯಾದ ಮೂಲ ಸೌಕರ್ಯಗಳಿಲ್ಲ ಇವೆಲ್ಲ ಸಮಸ್ಯೆಗಳನ್ನು ಶೀಘ್ರದಲ್ಲೇ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯ ಸ್ಥಳದಲ್ಲಿ ಜಿ.ಪುಷ್ಪ ಅವರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್ ಅವರಿಗೆ ಫೋನ್ ಕರೆಯ ಮೂಲಕ ಸಮಸ್ಯೆಗಳನ್ನು ತಿಳಿಸಿ ಶೀಘ್ರದಲ್ಲೇ ಬಗೆಹರಿಸಬೇಕು ಎಂದು ತಿಳಿಸಿದಾಗ, ಅಂಗನವಾಡಿಯಲ್ಲೆ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಕೊಡುವುದಾಗಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು. ಕುಮಾರಿ, ನಂಜಮ್ಮ, ಕೆಂಪಮ್ಮ, ಛಾಯ ಸೇರಿದಂತೆ ಸ್ಥಳೀಯ ನಿವಾಸಿಗಳು ಭಾಗವಹಿದ್ದರು.

# ಶ್ರಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

ರಾಮನಗರ: ನಗರಸಭೆಯ 2025–26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಆಟೋ, ಟ್ಯಾಕ್ಸಿ, ಟೆಂಪೋ ಚಾಲಕರು ಮತ್ತು ಶ್ರಮಿಕ ವರ್ಗಗಳಿಗಾಗಿ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಬೀದಿ ಬದಿ ವ್ಯಾಪಾರಿಗಳು, ಪೌರ ಕಾರ್ಮಿಕರು ಸಹ ಈ ಶಿಬಿರದ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ (ಶಶಿ) ತಿಳಿಸಿದರು.

ನಗರದ ಮಂಜುನಾಥ ಕಲ್ಯಾಣ ಮಂಟಪದಲ್ಲಿ ರಾಮನಗರ ನಗರಸಭೆ ನೇತೃತ್ವದಲ್ಲಿ ಡಾ.ಚಂದ್ರಮ್ಮ ದಯಾನಂದ ಸಾಗರ ಆಸ್ಪತ್ರೆ, ಬಿಡದಿ ಹೋಬಳಿ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಫೌಂಡೇಶನ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಆರೋಗ್ಯ ಶಿಬಿರ ಹಾಗೂ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಈ ಕಾರ್ಯಕ್ರಮ ನಡೆಯುತ್ತಿದೆ ಎಂದರು. ಚಾಲಕರು ಸೇರಿದಂತೆ ಶ್ರಮಿಕ ವರ್ಗಗಳ ಜನತೆ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿಲ್ಲ. ತಮ್ಮ ಜೀವನಕ್ಕಾಗಿ ಸದಾ ಕಾಯಕದಲ್ಲೇ ತೊಡಗಿಸಿಕೊಂಡಿರುತ್ತಾರೆ. ಆರ್ಥಿಕ ಪರಿಸ್ಥಿತಿಯೂ ಮತ್ತೊಂದು ಪ್ರಮುಖ ಕಾರಣ. ಈ ಹಿನ್ನೆಲೆಯಲ್ಲಿ ಅವರಿಗಾಗಿ ಆರೋಗ್ಯ ಶಿಬಿರ ಆಯೋಜಿಸಿದ್ದೇವೆ. ಶಿಬಿರದಲ್ಲಿ ಅಗತ್ಯವಿದ್ದವರಿಗೆ ಉಚಿತ ಔಷಧಗಳನ್ನೂ ವಿತರಣೆ ಮಾಡಿದ್ದೇವೆ






ಎಂದರು. ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದವರಿಗೂ ಸ್ಪಂದಿಸುತ್ತೇವೆ ಎಂದು ಭರವಸೆ ಕೊಟ್ಟರು.

**ಆಹಾರಕ್ಕಿಂತ ಔಷಧಗಳಿಗೆ ಹೆಚ್ಚು ವೆಚ್ಚ – ಶ್ರೀನಿವಾಸ್**

ಶಿಬಿರ ಆಯೋಜನೆಯ ನೇತೃತ್ವ ವಹಿಸಿಕೊಂಡಿದ್ದ ನಿವೃತ್ತ ಔಷಧ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾತನಾಡಿ, ಭಾರತದಲ್ಲಿ ಬಹುತೇಕ ಬಡ ಹಾಗೂ ಮಧ್ಯಮ ವರ್ಗದವರ ಕುಟುಂಬದಲ್ಲಿ ರೇಷನ್‌ಗಿಂತ ಹೆಚ್ಚು ಹಣ ಚಿಕಿತ್ಸೆ ಹಾಗೂ ಔಷಧಗಳಿಗೆ ಖರ್ಚಾಗುತ್ತಿದೆ. ಸರ್ಕಾರಗಳು ಆರೋಗ್ಯದ ವಿಚಾರದಲ್ಲಿ ಏನೇ ಯೋಜನೆಗಳ ಜಾರಿಗೆ ತಂದರೂ ಶೇ.45 ರಷ್ಟು ಹಣ ಮಾತ್ರ ಸರ್ಕಾರದಿಂದ ಭರಿಸಲು ಸಾಧ್ಯವಾಗುತ್ತಿದೆ. ಉಳಿದ ಶೇ.55 ರಷ್ಟು ಹಣ ಜನರೆ ಭರಿಸುತ್ತಿದ್ದಾರೆ ಎಂದು ಸಮೀಕ್ಷೆಗಳು ಹೇಳುತ್ತವೆ ಎಂದರು.

ಜೀವ ಶೈಲಿ ಬದಲಾವಣೆ, ಆರೋಗ್ಯ ಕಾಳಜಿ ಕೊರತೆ, ಆಹಾರ ಪದ್ಧತಿಯಲ್ಲಿ ಬದಲಾವಣೆ, ಒತ್ತಡದ ಜೀವನ ಹಾಗೂ ಕೋವಿಡ್ ನಂತರ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಹೃದಯಾಘಾತ ಪ್ರಕರಣ ಗಳು ಹೆಚ್ಚಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ಮುಂದಿನ ದಿನಗಳಲ್ಲಿ ನಗರ ವ್ಯಾಪ್ತಿಯ ಕನಿಷ್ಠ 5000 ಮಂದಿ ಹೃದಯಾರೋಗ್ಯ ತಪಾಸಣೆ ನಡೆಸಿ, ಚಿಕಿತ್ಸೆ ದೊರಕಿಸುವ ಚಿಂತನೆ ಮಾಡಿದ್ದೇವೆ ಎಂದರು.

ನಗರಸಭೆ ಆಯುಕ್ತರಾದ ಡಾ.ಜಯಣ್ಣ, ಮಾಜಿ ಅಧ್ಯಕ್ಷೆ ಪಾರ್ವತಮ್ಮ, ಸದಸ್ಯರಾದ ನಿಜಾಮುದ್ದೀನ್ ಷರೀಫ್, ಮುತ್ತುರಾಜ್, ಮಂಜುನಾಥ್, ಜಯಲಕ್ಷ್ಮಮ್ಮ, ಬೈರೇಗೌಡ, ಗಿರಿಜಮ್ಮ, ಸಮದ್, ಟಿಪಿಎಂಸಿಎಸ್ ಅಧ್ಯಕ್ಷ ಸುರೇಶ್, ಪ್ರಮುಖರಾದ ಪ್ರವೀಣ್, ಶ್ರೀನಿವಾಸ್, ಚಂದ್ರಮ್ಮ ದಯಾನಂದ ಆಸ್ಪತ್ರೆಯ ರಾಧಾಕೃಷ್ಣ, ಡಾ.ರಮೇಶ್, ಡಾ.ಆನಂದ್, ಔಷಧ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್, ಪದಾಧಿಕಾರಿಗಳಾದ ಅತೀಕ್, ಪುರುಷೋತ್ತಮ್, ಅಕ್ರಂ, ರಿಜ್ವಾನ್, ಪ್ರಮುಖರಾದ ವೆಂಕಟೇಶ್ ಮುಂತಾದವರು ಹಾಜರಿದ್ದರು. ಶಿಬಿರದಲ್ಲಿ ಡಯಾಬಿಟಿಸ್, ಬಿಪಿ, ಇಸಿಜಿ ಸಾಧನಗಳನ್ನು ಬಳಸಿ ವಿವಿಧ ವಿಭಾಗಗಳ ತಜ್ಞ ವೈದ್ಯರು ಮತ್ತು ಸಿಬ್ಬಂದಿ ತಪಾಸಣೆ ನಡೆಸಿ, ಅಗತ್ಯ ಸಲಹೆಗಳನ್ನು ಕೊಟ್ಟರು. ಬಿಡದಿ ಔಷಧ ವ್ಯಾಪಾರಿಗಳ ಪೌಂಡೇಷನ್ ಮತ್ತು ಔಷಧ ವ್ಯಾಪಾರಿಗಳ ಸಂಘದಿಂದ ಉಚಿತ ಔಷಧ ವಿತರಿಸಿದರು. ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನ.16ಕ್ಕರ ಉಚಿತ ನೇತ್ರಾ ತಪಾಸಣಾ ಶಿಬಿರ

ಮೈಸೂರು:ನ. 16 ರ ಬೆಳಗ್ಗೆ 8 ರಿಂದ ಮಧ್ಯಾಹ್ನ 12.30 ರವರೆಗೆ ಜೆಪಿ. ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ರೋಟರಿ ಮೊದಲಾದ ಸಂಘ ಸಂಸ್ಥೆಗಳು ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಿವೆ ಎಂದು ರೋಟರಿ ಜಯಪ್ರಕಾಶ ನಗರ ಅಧ್ಯಕ್ಷ ಪಿ. ರವಿಶಂಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಚು ಬರುವುದು, ಹತ್ತಿರ ಮತ್ತು ದೂರದೃಷ್ಟಿ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆ ಕಣ್ಣು, ರಾತ್ರಿ ಕುರುಡು ಮೊದಲಾದ ಸಮಸ್ಯೆಗಳ ತಪಾಸಣೆ ನಡೆಯಲಿದೆ. ಶಸ್ತ್ರಚಿಕಿತ್ಸೆ ಅಗತ್ಯವಾಗಿರುವವರನ್ನು ಕೊಯಮತ್ತೂರಿನ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಡಲಾಗುವುದು. ಇದು ಪ್ರತಿ ತಿಂಗಳೂ ನಡೆಸುತ್ತಿರುವ ಕಾರ್ಯಕ್ರಮವಾಗಿದ್ದು, ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದರು. ವಿವಿಧ ಸಂಘ ಸಂಸ್ಥೆ ಪದಾಧಿಕಾರಿಗಳಾದ ಡಾ.ಸಿ. ವೆಂಕಟೇಶ್, ಡಾ.ಮುಳ್ಳೂರು ನಂಜಂಡಸ್ವಾಮಿ, ಡಾ.ಡಿ.ಎಂ.ನಾಗರಾಜು ಹಾಗೂ ವೆಂಕಟೇಶ್ ಇದ್ದರು.

# ಪತ್ರಿಕಾ ವಿತರಕರಿಗೆ ಶೆಲ್ಟರ್ ನಿರ್ಮಾಣ

## ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಭರವಸೆ




ಮೈಸೂರು: ಪ್ರತಿನಿತ್ಯ ಮುಂಜಾನೆ ಹಾಗೂ ಸಂಜೆ ಶ್ರದ್ಧೆ ಹಾಗೂ ನಿಷ್ಠೆಯಿಂದ ಮನೆ ಮನೆಗಳಿಗೆ ಪತ್ರಿಕೆ ವಿತರಣೆ ಮಾಡುವ ಪತ್ರಿಕಾ ವಿತರಕರ ಸುರಕ್ಷತೆ ದೃಷ್ಟಿಯಿಂದ ನಗರದಲ್ಲಿ ತಂಗುದಾಣ ನಿರ್ಮಿಸಲು ಕ್ರಮವಹಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್ ಅವರು ಭರವಸೆ ನೀಡಿದರು.

ನಗರದ ಚಿಕ್ಕಗಡಿಯಾರದ ಬಳಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಮುಂಜಾನೆ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಿಕಾ ವಿತರಕರು ಪತ್ರಿಕೆಗಳ ಜೀವಾಳ. ಹಿರಿಯರು, ಕಿರಿಯರು ಎನ್ನದೆ ಬದ್ಧತೆಯಿಂದ ಕೆಲಸ ಮಾಡುತ್ತಾರೆ ಎಂದು ತಿಳಿಸಿದರು.

ಸುದ್ದಿಮನೆಯಲ್ಲಿ ಮುದ್ರಣಗೊಂಡ ಪತ್ರಿಕೆಯನ್ನು ಒಂದು ದಿನವೂ ತಪ್ಪಿಸದೆ ಮುಂಜಾನೆಯೇ ಓದುಗರ ಕೈಗಿಡುವ ಕೆಲಸವನ್ನು ವಿತರಕರು ಮಾಡುತ್ತಾರೆ. ಪತ್ರಿಕೆಗಳನ್ನು ಜೋಡಿಸಲು ನಿಗದಿತ ಸ್ಥಳವನ್ನು ನಗರ ಪಾಲಿಕೆ ಗುರುತಿಸಿ ಕೊಟ್ಟರೆ, ವಿತರಕರಿಗೆ ಅನುಕೂಲವಾಗುವಂತೆ ತಂಗುದಾಣ ನಿರ್ಮಿಸಲಾಗುವುದು ಎಂದು ಹೇಳಿದರು.

ಕೋವಿಡ್ ಸಂದರ್ಭದಲ್ಲೂ ಅತ್ಯಂತ ಸವಾಲಿನಿಂದ ಕರ್ತವ್ಯ ನಿರ್ವಹಿಸಿದ್ದಾರೆ. ಇತ್ತೀಚಿಗೆ ಪತ್ರಿಕೆಗಳ ಡಿಜಿಟಲ್ ರೂಪ ಪಡೆದಿರುವುದರಿಂದ ಪ್ರಸರಣವು ಕಡಿಮೆಯಾಗಿದೆ. ಇದರಿಂದ ವಿಚಲಿತರಾಗುವ ಅವಶ್ಯಕತೆ ಇಲ್ಲ ಎಂದರು.


ಪತ್ರಿಕೆ ವಿತರಿಸುವ ವಿದ್ಯಾರ್ಥಿಗಳು ಇದನ್ನು ಅರಕಾಲಿಕ ವೃತ್ತಿಯಂತೆ ಮಾಡಿ ಓದಿನ ಖರ್ಚಿಗೆ ಒಂದಷ್ಟು ಹಣ ಸಂಪಾದಿಸಬೇಕು. ಯಾವುದೇ ಕಾರಣಕ್ಕೂ ಓದನ್ನು ನಿಲ್ಲಿಸಬಾರದು. ಸರ್ಕಾರದಿಂದ ಈಗಾಗಲೇ ಆರೋಗ್ಯವಿಮೆ ಕಲ್ಪಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗೆ ಒಳಗಾಗಿ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವ ವಿತರಕರಿಗೆ ಸರ್ಕಾರದಿಂದ ನೆರವು ಕೊಡಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಈ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್ ಅವರು, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ. ರಾಘವೇಂದ್ರ ಅವರು, ರಾಜ್ಯೋತ್ಸವ ಪ್ರಶಸ್ತಿ ಪುರಷ್ಕೃತರಾದ ನಂದಿ ಧ್ವಜ ಉಡಿಗಾಲ ಮಹದೇವಪ್ಪ ಅವರು, ಜವರಪ್ಪ ಅವರು, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಜೆ.ಎಸ್.ಹೋಮದೇವ, ರಾಜೇಶ್ ಕುಮಾರ್, ಉಪಾಧ್ಯಕ್ಷರಾದ ಎಂ ನಾಗರಾಜು, ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ, ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ್, ಸಲಹೆಗಾರರಾದ ಸಿ.ಆರ್.ದತ್ತಾತ್ರೇಯ, ಹರಿರಾವ್, ಎಸ್.ನಾಗೇಶ್ ಕಾವ್ಯ ಪ್ರಿಯ, ಸಿ. ರಾಜಶೇಖರ್, ಗೋವಿಂದ್ ಶೆಟ್ಟಿ, ಕನಕ ರತ್ನ, ಈಶ್ವರ ಪ್ರಸಾದ್, ಪ್ರಕಾಶ್, ನಂಜುಂಡಯ್ಯ, ಈಶ್ವರ, ಆರಾಧ್ಯ, ಚಂದ್ರು, ಜೈದೇವ್, ಹೊನ್ನಪ್ಪ,ಮಹೇಶ್, ಗುಂಡಪ್ಪ, ಶಿವಣ್ಣ, ಕಿರಣ್, ಸಂತೋಷ್, ಜಿ. ಕುಮಾರ್, ಪ್ರಭಾಕರ್ ರಾವ್ ಇನ್ನಿತರರು ಇದ್ದರು.

# ಶಿಕ್ಷಕರ ವೃತ್ತಿ ಸವಾಲಾಗಿರುವ ಕಾಲಘಟ್ಟ: ಸೋಮಶೇಖರ್

ಮೈಸೂರು: ಮೌಲ್ಯಗಳು ಅಧಃಪತನವಾಗುತ್ತಿರುವ ಈ ಹೊತ್ತಿನಲ್ಲಿ ಶಿಕ್ಷಕರ ವೃತ್ತಿ ಸವಾಲಿನದು ಎಂದು ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರದ ಹಿರಿಯ ಪ್ರಾಧ್ಯಾಪಕ ಡಾ. ಜೆ.ಸೋಮಶೇಖರ್ ಹೇಳಿದರು.

ರಾಜೇಂದ್ರ ನಗರದ ಛಾಯಾದೇವಿ ಬಿ.ಇಡಿ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಪದವೀಧರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರ ದೇಶದ ಆಸ್ತಿ. ಹೀಗಾಗಿ ಇಂದು ಹಚ್ಚಿದ ಪ್ರಜ್ಞೆಯ ಬೆಳಕು ಆರದಂತೆ ಕಾಪಾಡಿಕೊಳ್ಳುವ ಸಂಕಲ್ಪ ಮಾಡಿ. ಶಿಕ್ಷಕ ವೃತ್ತಿಯ ಮೇಲೆ ಸಮಾಜ ನಿಂತಿದೆ. ಸಮಾಜ ಕಟ್ಟುವ, ವ್ಯವಸ್ಥೆ ನಿರ್ಮಿಸುವ ವೃತ್ತಿ. ಆದ್ದರಿಂದ ಶಿಕ್ಷಕರು ಬೆಳಕಿಗೆ ದಾರಿ ತೋರುವ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು ಎಂದು ಕರೆ ನೀಡಿದರು. ಅಕ್ಷರ ಮತ್ತು ಅನ್ನದಾಸೋಹ ಮುಖ್ಯವಾದವು. ಕೃತಕ ಬುದ್ಧಿಮತ್ತೆ ಎಂಬ ತಂತ್ರಜ್ಞಾನದ ಈ ಹೊತ್ತಿನಲ್ಲಿ ಶಿಕ್ಷಕರ ಕೆಲಸ ಏನು? ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವಂತೆ ಅವರು ಸಲಹೆ ಮಾಡಿದರು. ಡಾ.ಎಸ್. ರಾಧಾಕೃಷ್ಣನ್, ಜ್ಯೋತಿ ಬಾಪುಲೆ, ಸಾವಿತ್ರಿಬಾಯಿ ಪುಲೆ ರೀತಿಯ ಶಿಕ್ಷಕರು ನೀವಾಗಬೇಕು.



ಶಿಕ್ಷಣದಿಂದ ಕ್ರಾಂತಿ ಆಗುತ್ತದೆ ಎಂದು ಹೇಳಲಾಗುತ್ತದೆ. ಆದರೆ ಶಿಕ್ಷಣದಿಂದ ಎಷ್ಟೋ ಸಮಸ್ಯೆಗಳಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಶಿಕ್ಷಕರು ಆಳುವ ವರ್ಗದ ಬಗ್ಗೆ ಎಚ್ಚರವಹಿಸಿಯೇ ಕೆಲಸ ಮಾಡಬೇಕು ಎಂದರು.

ಶಿಕ್ಷಕರ ಆಸ್ತಿ ಎಂದರೇ ವಿದ್ಯಾರ್ಥಿಗಳು. ಆದ್ದರಿಂದ ಗೂಗಲ್ ಗುರು ಹಿಂದೆ ಹೋಗುವುದನ್ನು ಬಿಟ್ಟು ಗುರುಹಿಂದೆ ಹೋಗುವಂತೆ ವಿದ್ಯಾರ್ಥಿಗಳನ್ನು ತಯಾರು ಮಾಡಿ ಎಂದರು. ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೈಣೈ ಅವರಿಗೆ 'ಆಯುರ್ವೇದ ಆರೋಗ್ಯ ಮಿತ್ರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ರನ್ನು ಸನ್ಮಾನಿಸಲಾಯಿತು.ಸಂಸ್ಥೆಯ ಅಧ್ಯಕ್ಷ ಭಾನುಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಆಂತೋಣಿ ಪಾಲ್ ರಾಜ್ ಸ್ವಾಗತಿಸಿದರು. ಜಹಾರ ಫಾತಿಮಾ ವಂದಿಸಿದರು. ರೋಸ್ಲಿಟ ಅಮಲಾನತನ್ ಕಾರ್ಯಕ್ರಮ ನಿರೂಪಿಸಿದರು.

## ರಾಜ್ಯ ಸರ್ಕಾರ ಕ್ರಮಕೈಗೊಳ್ಳದಿದ್ದರೆ ಹೋರಾಟ : ಶ್ರೀನಿವಾಸಗೌಡ

# ಶಾಸಕ ರಾಜುಕಾಗೆ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿಸುವಂತೆ ಕನ್ನಡ ವಿರೋಧಿ ಹೇಳಿಕೆ ನೀಡಿರುವ ಶಾಸಕ ರಾಜು ಕಾಗೆ ಗಡಿಪಾ ರುಗೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿ ಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ರಾಜುಕಾಗೆ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಪ್ರತಿಭ ಟನೆ ನೇತೃತ್ವ ವಹಿಸಿದ್ದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕನ್ನಡ ದ್ರೋಹಿ ಕಾಗವಾಡದ ಶಾಸಕ ರಾಜುಕಾಗೆ ಕರ್ನಾಟಕವನ್ನು ವಿಭಜನೆ ಮಾಡಬೇಕು. ಉತ್ತರಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಬೇಕು ಎಂದು ಹೇಳುವ ಮೂಲಕ ಕನ್ನಡ ವಿರೋಧಿ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯನ್ನು



ರಾಜ್ಯ ಸರ್ಕಾರ ತೀವ್ರವಾಗಿ ಪರಿಗಣಿಸಿ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯನವರೇ ನೀವು ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿದ್ದವರು. ನಿಮ್ಮ ಸರ್ಕಾರದಲ್ಲಿ ನಿಮ್ಮ ಶಾಸಕ ಕನ್ನಡ ವಿರೋಧಿ ಹೇಳಿಕೆ ನೀಡಿದ್ದರು ಕೂಡ ನೀವು ಯಾವುದೇ ರೀತಿ ಕ್ರಮಕೈಗೊಳ್ಳದಿರುವುದು ಅತ್ಯಂತ ಖಂಡನೀಯವಾದದ್ದು, ಕರ್ನಾಟಕ ಏಕೀಕರಣಕ್ಕಾಗಿ ಅನೇಕ ಮಹನೀಯರು ಕರ್ನಾಟಕ ರಾಜ್ಯಕ್ಕಾಗಿ ಹೋರಾಟ ಮಾಡಿದ ಕಾರಣದಿಂದ ಅಖಂಡ ಕರ್ನಾಟಕ ರಚನೆ ಆಗಿದೆ. ನವೆಂಬರ್ ಮಾಸದಲ್ಲಿ ಶಾಸಕ ರಾಜು ಕಾಗೆ ಕನ್ನಡ ವಿರೋಧಿ ಹೇಳಿಕೆ ನೀಡಿರುವುದು ಸರಿಯಲ್ಲ. ತಕ್ಷಣವೇ ರಾಜ್ಯ ಸರ್ಕಾರ ರಾಜುಕಾಗೆ ವಿರುದ್ಧ ಕ್ರಮಕೈಗೊಳ್ಳಬೇಕು ಇಲ್ಲದಿದ್ದರೆ ನಮ್ಮ ಹೋರಾಟ ತೀವ್ರಸ್ವರೂಪ ಪಡೆದುಕೊಳ್ಳಲಿದೆ ಎಂದು ಶ್ರೀನಿವಾಸಗೌಡ ಎಚ್ಚರಿಸಿದರು. ನಿಜಧ್ವನಿ ಗೋವಿಂದರಾಜು, ಚಾ.ವೆಂ.ರಾಜ್ ಗೋಪಾಲ್, ಪಣ್ಯದಹುಂಡಿ ರಾಜು, ಮುತ್ತಿಗೆಗೋವಿಂದರಾಜು, ಆಟೋ ಲಿಂಗರಾಜು, ತಾಂಡವಮೂರ್ತಿ, ಮಹೇಶ್‌ಗೌಡ, ವೀರಭದ್ರಪ್ಪ, ಜಗದೀಶ್, ರಾಚಪ್ಪ ಕಾರರು ಹಾಜರಿದ್ದರು.

## ಬಸ್ ನಿಲ್ದಾಣದಲ್ಲಿ ಮಹಿಳೆಯ ಚಿನ್ನದ ಮಾಂಗಲ್ಯ ಸರ ಅಪಹರಣ

ಚಾಮರಾಜನಗರ, ಮಹಿಳೆ ಒಬ್ಬರ 50 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಅಪಹರಿಸಿರುವ ಘಟನೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸೋಮವಾರ ಮಧ್ಯಾಹ್ನ ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.


ನಗರದ 23ನೇ ವಾರ್ಡ್ ಶಂಕರಪುರದ ನಿವಾಸಿ ಬಂಗಾರನಾಯಕ ಅವರ ಪತ್ನಿ ಸುಬ್ಬಲಕ್ಷ್ಮಿ ಎಂಬುವವರೇ ಸರ ಕಳೆದುಕೊಂಡ ಮಹಿಳೆಯಾಗಿದ್ದು ಅವರು ಮಲೆ ಮಹದೇಶ್ವರ ಬೆಟ್ಟದಲ್ಲಿ ಪೂಜೆಗಾಗಿ ಬಸ್ನಲ್ಲಿ ತೆರಳುವ ವೇಳೆ ನಿರ್ಧಾರದಲ್ಲಿ ಬಸ್ ಹತ್ತುತ್ತಿದ್ದ ಸಂದರ್ಭದಲ್ಲಿ ಅವರ ಕತ್ತಿನಲ್ಲಿದ್ದ 50 ಗ್ರಾಂ ಚಿನ್ನ ಸುಮಾರು 6 ಲಕ್ಷ ಮೌಲ್ಯದಾಗಿದ್ದು, ಸರವನ್ನು ಯಾರೋ ಕಳ್ಳರು ಕೈಚಳಕ ಮಾಡಿ ಅಪರಿಸಿದ್ದಾರೆ. ಕಂಡಕ್ಟರ್ ಗೆ ಆಧಾರ್ ಕಾರ್ಡ್ ಕೊಡುವ ವೇಳೆ ಸುಬ್ಬಲಕ್ಷ್ಮಮ್ಮ ಅವರಿಗೆ ಸದಾ ನಾಪತ್ತೆಯಾಗಿರುವುದು ಗೊತ್ತಾಗಿದೆ, ಇದರಿಂದ ಗಾಬರಿ ಗೊಂಡ ಅವರು ಸ್ಥಳದಲ್ಲಿ ಹುಡುಕಾಡಿದರು ಸಿಗದೇ ಕೊನೆಗೆ ಪಟ್ಟಣ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ, ಸ್ಥಳಕ್ಕೆ ಪೊಲೀಸ್ ಇದೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ, ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ಥಳಕ್ಕೆ ಬಾರದ ಉಸ್ತುವಾರಿ ಸಚಿವ, ಸಂಸದರ ವಿರುದ್ಧ ರೈತರ ಆಕ್ರೋಶ

ಗುಂಡ್ಲುಪೇಟೆ: ತಾಲ್ಲೂಕಿನ ರೈತಸಂಘ ಕಳೆದ ಒಂದು ತಿಂಗಳಿಂದ ತಾಲ್ಲೂಕು ಕಚೇರಿ ಅವರಣದಲ್ಲಿ ಕೆರೆ ತುಂಬಿಸುವಂತೆ, ಸಾಗುವಳಿ



ವಿತರಣೆ, ಶಾಶ್ವತವಾಗಿ ಸಪಾರಿ ನಿಷೇಧ ಮತ್ತು ಮಾನವ ಪ್ರಾಣಿ ಸಂಘರ್ಷ ತಪ್ಪಿಸುವಂತೆ ಮತ್ತಿತರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕಳೆದ ಮೂವತ್ತು ದಿನದಿಂದ ಅಹೋರಾತ್ರಿ ಧರಣಿ ನಡೆಸುತಿದ್ದರೂ ಜಿಲ್ಲೆಯ ಉಸ್ತುವಾರಿ ಸಚಿವ ಕೆ ವೆಂಕಟೇಶ್, ಹಾಗೂ ಸಂಸದ ಸುನೀಲ್ ಬೋಸ್ ರೈತರ ದರಣಿ ಸ್ಥಳಕ್ಕೆ ಧಾವಿಸುವ ಸೌಜನ್ಯ ವನ್ನು ತೊರಿಲ್ಲ ಎಂದು ರೈತ ಮುಖಂಡ ಶಿವಪುರ ಮಹದೇವಪ್ಪ ಆಕ್ರೋಶ ಹೊರಹಾಕಿದರು. ರೈತರು ಎಲ್ಲಾ ಕೆಲಸ ಕಾರ್ಯ ಬಿಟ್ಟು ಒಂದು ತಿಂಗಳಿಂದ ಪ್ರತಿಭಟನೆ ನಡರಸುತಿದ್ದೇವೆ, ರೈತರ ಸಮಸ್ಯೆ ಆಲಿಸಲು ಅರಣ್ಯ ಸಚಿವ ಈಶ್ವರ್ ಖಂಡ್ರೆ, ವಿರೋಧ ಪಕ್ಷದ ನಾಯಕ ಆರ್ ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಯದುವೀರ್, ಹಾಗೂ ಸ್ಥಳೀಯ ಶಾಸಕ ಗಣೇಶ್ ಪ್ರಸಾದ್ ಹಾಗೂ ಮಾಜಿ ಶಾಸಕರು ಸೇರಿದಂತೆ ಭೇಟಿ ನಿಡಿ ರೈತರಿಗೆ ಸಾಂತ್ವಾನ ಹೇಳಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ ಆದರೆ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಸಂಸದರಿಗೆ ರೈತರ ಮೇಲೆ ಕಾಳಜಿ ಇಲ್ಲ ಎಂದರೂ. ರೈತರ ಧರಣಿ ಸ್ಥಳಕ್ಕೆ ಬರುವ ಮನಸ್ಸಿಲ್ಲ ಎಂದ ಮೇಲೆ ಇವರೆಂಥ ನಾಯಕರು, ಜಿಲ್ಲೆಗೆ ತಿರುಗಿ ನೊಡದ ಉಸ್ತುವಾರಿ, ಸಂಸದ ಇಬ್ಬರಿಗೆ ರೈತರ ಬಗ್ಗೆ ಕಾಳಜಿ ಇಲ್ಲ ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲ ಎಂದು ಆಕ್ರೋಶ ಹೊರಹಾಕಿದರು.



ಕರ್ನಾಟಕ ರಾಜ್ಯ ಮಡಿವಾಳ ಮಾಚಿದೇವರ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾದ ಸಿ.ನಂಜಪ್ಪ ಅವರನ್ನು ಮೈಸೂರು ಜಿಲ್ಲಾ ಮಡಿವಾಳ ಸಂಘದ ಉಪಾಧ್ಯಕ್ಷ ಧರ್ಮರಾಜ್, ಲಾಳಂದೇವನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ದಾಕ್ಷಾಯಣಿ, ಮುಖಂಡ ಭೇರ್ಯ ಹರೀಶ್ ಸೇರಿದಂತೆ ಹಲವರು ಸನ್ಮಾನಿಸಿ ಅಭಿನಂದಿಸಿದರು.

## ಪೋಷಕ ಶಿಕ್ಷಕರ ಮಹಾಸಭೆಯಲ್ಲಿ ಭಾಗವಹಿಸಲು ಮನವಿ

ಮಂಡ್ಯ: ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿ ಹಾಜರಾತಿಯನ್ನು ಉತ್ತಮಪಡಿಸಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳನ್ನು ಬಲವರ್ಧನೆಗೊಳಿಸಲು ವಿದ್ಯಾರ್ಥಿ ಪೋಷಕರ ಸಹಭಾಗಿತ್ವದ ದೃಷ್ಟಿಯಿಂದ ನ. 14 ರ ಶುಕ್ರವಾರ ಮಕ್ಕಳ ದಿನಾಚರಣೆ ದಿನದಂದು ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಪೋಷಕ ಶಿಕ್ಷಕರ ಮಹಾಸಭೆಯನ್ನು ಆಯೋಜಿಸಲಾಗಿರುತ್ತದೆ.

ಈ ಮಹಾಸಭೆಯಲ್ಲಿ ಶಾಲೆಯಲ್ಲಿನ ಕಲಿಕಾ ಉಪಕ್ರಮಗಳು ಕಲಿಕಾ ಪ್ರಗತಿಯಲ್ಲಿ ಪೋಷಕರ ಜವಾಬ್ದಾರಿ ಮತ್ತು ಭಾಗವಹಿಸುವಿಕೆ, ಶಾಲಾ ಭೌತಿಕ ಸೌಲಭ್ಯಗಳ ಬಲವರ್ಧನೆ ಮತ್ತು ಸರ್ಕಾರಿ ಶಾಲೆಗಳ ಅವಶ್ಯಕತೆಗಳು ಸರ್ಕಾರಿ ಶಾಲೆಗಳಲ್ಲಿನ ಪ್ರೋತ್ಸಾಹದಾಯಕ ಯೋಜನೆಗಳ ಅನುಷ್ಠಾನ, ಮಕ್ಕಳ ಹಕ್ಕುಗಳು ಮಕ್ಕಳ ರಕ್ಷಣಾ ನೀತಿ, ಮಕ್ಕಳ ಗೈರು ಹಾಜರಿಯಿಂದಾಗುವ ದುಷ್ಪರಿಣಾಮಗಳ ಕುರಿತಾದ ಚರ್ಚೆ ಮತ್ತು ಪರಿಹಾರೋಪಾಯಗಳ ಅವಲೋಕನ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಮಂಡ್ಯ ಇವರ ಮಾರ್ಗದರ್ಶನದಲ್ಲಿ ನಡೆಯಲಿದೆ.

ಸದರಿ ಮಹಾಸಭೆಯಲ್ಲಿ ಎಲ್ಲ ಪೋಷಕರು ಭಾಗವಹಿಸಿ ಸರ್ಕಾರಿ ಶಾಲಾ ಕಾಲೇಜಿನ ಬಲವರ್ಧನೆ ಮತ್ತು ಉಳಿವಿಗಾಗಿ ಸೂಕ್ತ ಸಲಹೆ ಮಾರ್ಗದರ್ಶನ ನೀಡುವಂತೆ ಹಾಗೂ ಶಾಲಾ ಶಿಕ್ಷಣ ಇಲಾಖೆ (ಆಡಳಿತ) ಮತ್ತು (ಪದವಿ ಪೂರ್ವ) ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಹರಾಜು ಪ್ರಕ್ರಿಯೆ ಪ್ರಾರಂಭಿಸಿ



ಚಾಮರಾಜನಗರ, ನಗರದ ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಎಪಿಎಂಸಿ ಅಧ್ಯಕ್ಷ ಎಂ.ಬಿ.ಗುರುಸ್ವಾಮಿ ಅವರ ಅಧ್ಯಕ್ಷತೆ ಯಲ್ಲಿ ರೈತರು ಹಾಗೂ ವರ್ತಕರ ಸಮ್ಮುಖ ದಲ್ಲಿ ಕುಂದುಕೊರತೆ ಸಭೆ ನಡೆಯಿತು.

ಸಭೆಯಲ್ಲಿ ಹಾಜರಿದ್ದ ರೈತರು ತಾವು ಮಾರುಕಟ್ಟೆಗೆ ತರುವ ಕೃಷಿಉತ್ಪನ್ನಗಳನ್ನು ಮಾರಾ ಟಮಾಡಲು ಮಧ್ಯಾಹ್ನ 12ಗಂಟೆಯವರೆಗೂ ಕಾಯಬೇಕಿದೆ. ಹರಾಜು ಪ್ರಕ್ರಿಯೆಯನ್ನು ಬೇಗನೆ ಪ್ರಾರಂಭಿಸಬೇಕು, ರೈತರು ವಿಶ್ರಾಂತಿ ಪಡೆಯಲು ಒಂದು ವಿಶ್ರಾಂತಿಗೃಹ ನಿರ್ಮಿಸಿ ಕೊಡಬೇಕು, ಶುದ್ಧಕುಡಿಯುವ ನೀರು ಒದಗಿ ಸಲು ಎಪಿಎಂಸಿ ಆಡಳಿತ ಮುಂದಾಗಬೇಕು ಎಂಬ ಒತ್ತಾಯ ಇಟ್ಟರು, ರೈತರ ಕುಂದು ಕೊರತೆ ಆಲಿಸಿದ ಎಪಿಎಂಸಿ ಅಧ್ಯಕ್ಷ ಎಂ.ಬಿ. ಗುರುಸ್ವಾಮಿ ಮಾತನಾಡಿ, ರೈತರ ಬೇಡಿಕೆ ಯಂತೆ ಬೆಳಗ್ಗೆ 10.30ಕ್ಕೆ ಹರಾಜು ಪ್ರಕ್ರಿಯೆ ನಡೆಸಲು ಕ್ರಮವಹಿಸಲಾಗುವುದು, ರೈತರು ವಿಶ್ರಾಂತಿ ಪಡೆಯಲು ಒಂದು ವಿಶ್ರಾಂತಿಗೃಹ ನಿರ್ಮಿಸಿಕೊಡಬೇಕು, ಶುದ್ಧಕುಡಿಯುವ ನೀರು ಒದಗಿಸುವ ಸಂಬಂಧ ಸಮಿತಿನಿರ್ದೇಶಕರ ಜತೆ ಸಭೆ ನಡೆಸಿ, ಚರ್ಚೆ ಮಾಡುವ ಮೂಲಕ ಅನುಷ್ಠಾನ ಮಾಡಲಾಗುವುದು ಎಂದು ಭರ ವಸೆ ನೀಡಿದರು. ಇದೇವೇಳೆ ಅಧ್ಯಕ್ಷ ಎಂ.ಬಿ. ಗುರುಸ್ವಾಮಿ ಬೆಲ್ಲದ ಗೋದಾಮುಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಆವರಣ ಸೇರಿದಂತೆ ಗೋದಾ ಮುಗಳಲ್ಲಿ ಸ್ವಚ್ಛತೆ ಕಾಪಾಡುವಂತೆ ವರ್ತಕರಲ್ಲಿ ಮನವಿಮಾಡಿದರು. ನಿರ್ದೇಶಕ ವೆಂಕಟರಾವ್ ಸಾಠೆ, ಎಪಿಎಂಸಿ ಕಾರ್ಯ ದರ್ಶಿ ಜಗದೀಶ್ ಸೇರಿದಂತೆ ವರ್ತಕರು, ರೈತರು ಹಾಜರಿದ್ದರು.

## ಮೀನು ಹಿಡಿಯಲು ಹೋಗಿ ಯುವಕನ ಸಾವು



ಚಾಮರಾಜನಗರ, ಸುವರ್ಣಾವತಿ ನದಿಯಲ್ಲಿ ಮೀನು ಹಿಡಿಯಲು ತೆಪ್ಪದಲ್ಲಿ ತೆರಳಿದ್ದ ಇಬ್ಬರು ಯುವಕರ ಪೈಕಿ ತೆಪ್ಪ ಮುಳುಗಿ ಮೃತಪಟ್ಟಿದ್ದ ಅಟ್ಟುಗುಳಿ ಗ್ರಾಮದ ಶಿವಸ್ವಾಮಿ ( 25) ಯುವಕನ ಶವ ಪತ್ತೆಯಾಗಿದ್ದು, ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದೆ.

ಅಟ್ಟುಗುಳಿಪುರ ಗ್ರಾಮದ ಬುಡಕಟ್ಟು ಜನಾಂಗಕ್ಕೆ ಸೇರಿದ ಶಿವಸ್ವಾಮಿ 25 ವರ್ಷ ಹಾಗೂ ದಿಲೀಪ್ 17 ವರ್ಷ ಇವರು ಸೋಮವಾರ ಸಂಜೆ ತೆಪ್ಪದ ಮೂಲಕ ಸುವರ್ಣಾವತಿ ನದಿಯಲ್ಲಿ ಮೀನು ಹಿಡಿಯಲು ತೆರಳಿದ್ದರು, ಆಕಸ್ಮಿಕವಾಗಿ ತೆಪ್ಪ ಮುಳುಗಿದ ಪರಿಣಾಮ ಇಬ್ಬರೂ ಸಹ ನದಿಯಲ್ಲಿ ಬಿದ್ದರು, ಬಳಿಕ ದಿಲೀಪ್ ಈಜು ಮೂಲಕ ದಡ ಸೇರಿದರೆ ಶಿವಸ್ವಾಮಿ ತನಗೆ ಈಜಲು ಸಾಧ್ಯವಾಗದೆ ಮುಳುಗಿ ಮೃತಪಟ್ಟಿದ್ದಾನೆ.

ವಿವಾಹಿತನಾಗಿರುವ ಶಿವಸ್ವಾಮಿಗೆ ಒಂದು ಮಗು ಇದೆ, ಸುದ್ದಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಸಿಬ್ಬಂದಿಯವರು ಶವಕ್ಕಾಗಿ ಶೋದ ನಡೆಸಿದ್ದಾರೆ, ಆದರೆ ಸೋಮವಾರ ತಡರಾತ್ರಿವರೆಗೂ ಸಹ ಶವ ದೊರೆಯದ ಕಾರಣ ಮಂಗಳೂರಿನಿಂದ ನುರಿತ ಈಜುಗಾರನ್ನು ಕರೆಸಿ ಶೋಧನೆ ನಡೆಸಲಾದ ಬಳಿಕ ಮಂಗಳವಾರ ಶವ ದೊರೆತ್ತಿದೆ. ಬಳಿಕ ಶವವನ್ನು ನಗರದ ಸಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವವನ್ನು ಒಪ್ಪಿಸಿದರು.

ಸ್ಥಳದಲ್ಲಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಪೂರ್ವ ಠಾಣೆ ಪೊಲೀಸರು ಪರಿಶೀಲನೆ ಹಾಜರಿದ್ದರು. ಪೂರ್ವ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾಳೆ ಸಿವಿದ್ಯಾಪೀಠ ಟ್ರಸ್ಟ್‌ನಿಂದ ರಾಜ್ಯೋತ್ಸವ

ಮೈಸೂರು:ಸಕಲಕಲಾ ಸಿರಿ ವಿದ್ಯಾಪೀಠ ಚಾರಿಟಬಲ್ ಟ್ರಸ್ಟ್ ವತಿಯಿಂದ ನ. 15 ರಂದು ನಗರದ ಜೆ.ಕೆ. ಮೈದಾನದಲ್ಲಿ ಕರ್ನಾಟಕ ಸಂಭ್ರಮ–2025 ರ ಶೀರ್ಷಿಕೆ ಅಡಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಿರುವುದಾಗಿ ಕಾರ್ಯದರ್ಶಿ ಸಿರಿಬಾಲು ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 11ಕ್ಕೆ ಇದರ ಅಂಗವಾಗಿ ವಸ್ತು ಪ್ರದರ್ಶನ ಉದ್ಘಾಟನೆಗೊಳ್ಳಲಿದೆ. ಸಂಜೆ 4 ರಿಂದ 5 ರವರೆಗೆ ಮೈಸೂರು ನೃತ್ಯಗಿರಿ ಅಕಾಡೆಮಿ ವತಿಯಿಂದ ಭರತನಾಟ್ಯ, ಸಮೂಹ ಗಾಯನ, ಸಂಜೆ 6ಕ್ಕೆ ರಸಮಂಜರಿ ನಡೆಯಲಿವೆ. ಮೈಸೂರು ಸಿಂರ?ಸ್ ಫ್ರೆಂಡ್ಸ್ ವತಿಯಿಂದ ಕರೋಕೆ ಮೊದಲಾದ ಕಾರ್ಯಕ್ರಮ ನಡೆಯಲಿವೆ ಎಂದರು.

ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ತನ್ವೀರ್‌ಸೇಠ್, ಎಂಎಲ್ಸಿ ವಿವೇಕಾನಂದ, ನಾಗರಾಜ್ ವಿ. ಭೈರಿ ಇನ್ನಿತರರು ಅತಿಥಿಗಳಾಗಿರುವರು. ಟೆನ್ನಿಸ್ ಕೃಷ್ಣ, ಸೃಜನ್ ಲೋಕೇಶ್, ಶಂಕರ್ ದೇವನೂರು, ಎಸ್. ಗಂಗಾಧರಪ್ಪ, ಡಾ. ಕೃಪಾ ಫಡ್ಕೆ, ಡಾ. ಅಪ್ಪೆಗೆರೆ ತಿಮ್ಮರಾಜು, ಗಣೇಶ್ ಈಶ್ವರ್ ಭಟ್, ಎಂ.ವಿ. ತ್ಯಾಗರಾಜು, ಎಚ್.ಆರ್. ಪಾಂಡುರಂಗ ಅವರನ್ನು ಸನ್ಮಾನಿಸಲಾಗುವುದು. ಅನುರಾಧ ಭಟ್, ಭವ್ಯಾ ಹೆಬ್ಬಾಲೆ, ಎಂ.ಎಸ್. ಶ್ರೀಕೃಪಾ, ದಿವ್ಯಾ ಸಚ್ಚಿದಾನಂದ, ಕಂಬದ ರಂಗಯ್ಯ, ನಿತಿನ್ ರಾಜಾರಾಮ್ ಶಾಸ್ತ್ರಿ, ಅಮ್ಮ ರಾಮಚಂದ್ರ, ರುತ್ವಿಕ್ ಸಿ. ರಾಜ್ ರಸಮಂಜರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆಂದರು.

ಪ್ರಮಥ ಮಂಜುನಾಥ್, ಸೇತುರಾಂ, ರವಿ, ಪ್ರಮೋದ್ ಹಾಗೂ ಇನ್ನಿತರರು ಇದ್ದರು.

## ಆಂಗ್ಲ ಶಾಲೆಗಳಲ್ಲೂ ರಾಜ್ಯೋತ್ಸವ ಸಂತಸದ ವಿಚಾರ

**ಡಾ. ಜಯಪ್ಪ ಹೊನ್ನಾಳಿ ಅಭಿಮತ**

ಮೈಸೂರು: ನಶಿಸುತ್ತಿರುವ ಕನ್ನಡ ಭಾಷೆಯನ್ನು ಆಂಗ್ಲ ಮಾಧ್ಯಮ ಶಾಲೆಯಲ್ಲೂ ಬೆಳೆಸುವ ಕೆಲಸವನ್ನು ಮಾಡುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ ಎಂದು ಸಾಹಿತಿ ಡಾ. ಜಯಪ್ಪ ಹೊನ್ನಾಳಿ ಹೇಳಿದರು.



ದಿ ಆಕ್ಕಿ ಸ್ಕೂಲ್‌ನಲ್ಲಿ ಶನಿವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ನಿವೇದಿತಾನಗರದಲ್ಲಿರುವ ಕಮಲರಂಜಿತ್ ಎಜುಕೇಷನಲ್ ಸೊಸೈಟಿಯ ದಿ ಆಕ್ಕಿ ಸ್ಕೂಲ್‌ನಲ್ಲಿ ಅತ್ಯಂತ ಸಡಗರ ದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಧ್ವಜಾರೋಹಣ ನೆರವೇರಿಸಿದ ಸಾಹಿತಿ ಡಾ.ಜಯಪ್ಪ ಹೊನ್ನಾಳಿ ಮಾತನಾಡಿ, ನಮ್ಮ ಕನ್ನಡ ಭಾಷೆಗೆ ಸ್ವಂತ ಲಿಪಿ ಇದ್ದು, ಕನ್ನಡ ಭಾಷೆ 27ನೇ ಜಾಗತಿಕ ಸ್ಥಾನ ಮಾನ ದೊರಕಿರುವುದು ನಮ್ಮ ಹೆಮ್ಮೆಯಾಗಿದೆ ಎಂದರು.

ನಮ್ಮ ಕನ್ನಡದ ಬಾವುಟದಲ್ಲಿರುವ ಅರಿಶಿಣ ಬಣ್ಣವು ಶಾಂತಿಯನ್ನು ಸೂಚಿಸಿದರೆ, ಕುಂಕುಮ ಕೆಂಪು ಬಣ್ಣವು ಕ್ರಾಂತಿ ಯನ್ನು ಸೂಚಿಸುತ್ತದೆ. ಇಷ್ಟೆಲ್ಲಾ ವೈಶಿಷ್ಟ್ಯತೆ ಹೊಂದಿರುವ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಬೇಕಿರುವುದು ಕನ್ನಡಿಗರಾಗಿ ನಮ್ಮೆಲ್ಲರ ಕರ್ತವ್ಯ ಎಂದರು. ವಿವಿಧ ತರಗತಿಯ ಮಕ್ಕಳು, ಕನ್ನಡದ ಅಭಿಮಾನ ಮೆರೆಯುವ ನೃತ್ಯ ರೂಪಕ ಹಾಗೂ ಕಿರುನಾಟಕ ಸೇರಿದಂತೆ ಸಾಂಸ್ಕೃತಿಕ ಕರ?ಯಕ್ರಮಗಳ ಮೂಲಕ ಗಮನ ಸೆಳೆದರು. ಶಾಲೆಯ ಕಾರ್ಯದರ್ಶಿಗಳಾದ ಅರುಣ್ ಸಿಂಗ್, ಸುಭಾಷಿಣಿ, ಪ್ರಾಂಶುಪಾಲೆ ಶ್ವೇತ ಚವಾಣ್, ಮುಖ್ಯ ಶಿಕ್ಷಕರಾದ ಶ್ರೀದೇವಿ, ಶಾಲಿನಿ ಮತ್ತು ಹಾಗೂ ಅವರ ಪೋಷಕರು ಹಾಜರಿದ್ದರು.

**ರಸ್ತೆ ಅಪಘಾತ**

## ಗೂಡ್ಸ್ ವಾಹನ ಚಾಲಕ ಸಾವು

ಎಚ್.ಡಿ.ಕೋಟೆ: ಶುಂಠಿ ಕೆಲಸ ಮುಗಿಸಿ ವಾಪಸ್ಸಾಗುತ್ತಿದ್ದಾಗ ಗೂಡ್ಸ್ ಆಪೆ ಮತ್ತು ಟೆಂಪೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ 6ಮಂದಿ ಕಾರ್ಮಿಕರು ಗಾಯಗೊಂಡು ಗೂಡ್ಸ್ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಎಚ್.ಡಿ.ಕೋಟೆ ತಾಲೋಕಿನ ಮೇಟಿಕುಪ್ಪೆ ಗ್ರಾಮದ ಗೂಡ್ಸ್ ಚಾಲಕ ಗುರುಸ್ವಾಮಿ ಮೃತ ದುರ್ದೈವಿ. ಗುರುಸ್ವಾಮಿ ಮೇಟಿ ಕುಪ್ಪೆ ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷರಾಗಿದ್ದರು. ಮಂಡ್ಯ ಜಿಲ್ಲೆಯ ಮದ್ದೂರು ತಾಲೋಕಿನ ನಾಗಮ್ಮ, ಕಿರಣ, ಶಿಲ್ಪಾ ಹಾಗೂ ಕೆ.ಆರ್.ಎಸ್ ಸಮೀಪದ ಬಸವನಪುರ ಗ್ರಾಮದ ಲಕ್ಷ್ಮಿ, ಅನು ಮತ್ತೊಬ್ಬ ಸೇರಿ 6ಮಂದಿ ಗಾಯಗೊಂಡಿದ್ದು, ವಯೋವೃದ್ಧ ನಾಗಮ್ಮ ಅವರ ತಲೆಗೆ ತೀವ್ರ ಪೆಟ್ಟು ಬಿದ್ದು ಸ್ಥಿತಿ ಗಂಭೀರವಾಗಿದೆ. ಶಿಲ್ಪ ಅವರ ಹಸುಗೂಸೊಂದು ಆಶ್ವರ್ಯಕರ ರೀತಿಯಲ್ಲಿ ಅನಾಹುತದಿಂದ ಪರಾಗಿದೆ. ಘಟನ ಸ್ಥಳದಿಂದ ಪುಟಾಣಿ ಮಗುವನ್ನು ರಕ್ಷಿಸಿದ ಸರ್ಕಲ್ ಇನ್ಸ್ ಪೆಕ್ಟರ್ ಗಂಗಾಧರ್ ಪೊಲೀಸ್ ವಾಹನದಲ್ಲಿ ಮಗು ವನ್ನು ತರಾತುರಿಯಲ್ಲಿ ಆಸ್ಪತ್ರೆಗೆ ಸ್ಥಳಾಂತರಿಸಿ ಮಾನವೀಯತೆ ಮೆರೆದರು.



ಮಂಡ್ಯ ಜಿಲ್ಲೆಯ ಈ ಕೂಲಿ ಕಾರ್ಮಿಕರು ಶುಂಠಿ ಬಿಡಿಸುವ ಕಾಯಕದಲ್ಲಿ ತೊಡಗಿದ್ದು, ಕಳೆದ ಒಂದು ತಿಂಗಳಿಂದ ಮೇಸ್ತ್ರಿ ಹೇಳಿದ ಕಡೆಗಳಿಗೆ ತೆರಳಿ ಶುಂಠಿ ಬಿಡಿಸುವ ಕೆಲ ಮಾಡುತ್ತಿದ್ದರು. ಅಣ್ಣೂರ ಬಳಿ ಶುಂಠಿ ಬಿಡಿಸಿ ಸಂಜೆಯಾಗುತ್ತಿದ್ದಂತೆಯೇ ಮೇಸ್ತ್ರಿ ಆದೇಶ ದಂತೆ ತಾಲೂಕಿನ ಬೇರೆ ಗ್ರಾಮದ ಕಡೆ ಸ್ಥಳಾಂತರ ಗೊಳ್ಳಲು, 6 ಮಂದಿ ಹಾಗೂ ಹಸುಗೂಸೊಂದು ಗೂಡ್ಸ್ ವಾಹನದಲ್ಲಿ ಎಚ್.ಡಿ.ಕೋಟೆ ಕಡೆಗೆ ಪ್ರಯಾಣ ಬೆಳೆಸಿದ್ದರು.

ಟೈಗರ್ ಬ್ಲಾಕ್ ಸಮೀಪದಲ್ಲಿ ವಿರುದ್ಧ ದಿಕ್ಕಿನಿಂದ ಬಂದ ಟೆಂಪೋ ಗೂಡ್ಸ್ ವಾಹನಕ್ಕೆ ರಭಸವಾಗಿ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗೂಡ್ಸ್ ವಾಹನ ಪಲ್ಟಿಯಾಗಿ ವಾಹನದಲ್ಲಿದ್ದವರು ಚಲ್ಲಾಪಿಲ್ಲಿಯಾಗಿ ರಸ್ತೆಗೆ ಬಿದ್ದಿದ್ದರು. ಮಗು ಹೊರತು ಪಡಿಸಿ ಇನ್ನುಳಿದ ಆರು ಮಂದುಗೂ ಗಾಯಗಳಾಗಿದ್ದು ಅವರನ್ನು ಎಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸಿ ಚಿಕಿತ್ಸೆ ನೀಡಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ನಾಗಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಎಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

## 15 ದಿನಗಳೊಳಗೆ ದಾಖಲಾತಿ ಸಲ್ಲಿಸಲು ಸೂಚನೆ

ರಾಮನಗರ: ರಾಮನಗರ ತಾಲ್ಲೂಕಿನಲ್ಲಿ 2025ರ ಮಾರ್ಚ್ 31ಕ್ಕೆ ಇದ್ದಂತೆ 9 ವಿವಿಧ ರೀತಿಯ ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಅಡಿಯಲ್ಲಿ ನೋಂದಣಿಗೊಂಡು ಸಂಘದ ಬೈಲಾ ರಿತ್ಯ ಕಾರ್ಯನಿರ್ವಹಿಸದೆ ಇರುವುದರಿಂದ ಸ್ಥಗಿತಗೊಂಡಿರುತ್ತದೆ.

ವಿವರ: ಫ್ಯೂಚರ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ., ಬೂದಿಗೇರಿ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ದಿ ರಾಮನಗರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.. ಜಯಪುರ, ಬೆಳಗುಂಬ ಅಂಚೆ, ಕಸಬಾ ಹೋಬಳಿ, ರಾಮನಗರ, ಮಾಯಾ ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ., ರಾಮನಗರ, ಮಾಯಾ ಕಿರಣ ಮಹಿಳಾ ಸೌಹಾರ್ದ ಸಹಕಾರಿ ನಿ., ರಾಮನಗರ, ಮಾಯಾ ಏಕತಾ ಮಹಿಳಾ ಸೌಹಾರ್ದ ಸಹಕಾರಿ ನಿ., ರಾಮನಗರ ಹಾಗೂ ಮಾಯಾ ನಿಸರ್ಗ ಮಹಿಳಾ ಸೌಹಾರ್ದ ಸಹಕಾರಿ ನಿ., ರಾಮನಗರ. ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ/ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ರಾಮನಗರ ಇಲ್ಲಿ ದಾಖಲಾತಿಗಳೊಂದಿಗೆ ಸಲ್ಲಿಸುವಂತೆ ತಿಳಿಸಿದ್ದಾರೆ.

## ಜಿಲ್ಲಾ ಸಂಘದ ನೂತನ ನಿರ್ದೇಶಕರಿಗೆ ಸನ್ಮಾನ



ಗುಂಡ್ಲುಪೇಟೆ: ನ.09 ರಂದು ನಡೆದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಗುಂಡ್ಲುಪೇಟೆ ತಾಲ್ಲೂಕು ಪತ್ರಕರ್ತರ ಸಂಘದ ವಿಜಯ ಕರ್ನಾಟಕ ವರದಿಗಾರ ಮಹೇಶ್ ಮಡಹಳ್ಳಿ ಮತ್ತು ಪ್ರಜಾವಾಣಿ ವರದಿಗಾರ ಮಲ್ಲೇಶ್ ಎಂ ರವರಿಗೆ ತಾಲ್ಲೂಕು ಪತ್ರಕರ್ತರ ಸಂಘದಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಪತ್ರಕರ್ತರಾದ ಮಹೇಂದ್ರ ಹಸಗೂಲಿ, ಬಸವರಾಜು, ರಾಜೇಶ್ ಭಟ್, ಮನು ಶ್ಯಾನ್ ಭೋಗ್, ಮಂಜು, ಚಂದ್ರು, ಕೃಷ್ಣ, ಜನಾರ್ಧನ್, ಶಿವಕುಮಾರ್, ನಂಜಪ್ಪ, ಹರೀಶ್, ವೆಂಕಟೇಶ್, ಮತ್ತಿತರರಿದ್ದರು.

## ವ್ಯಾಪಾರಗಾರರು ಶುಚಿತ್ವಕ್ಕೆ ಆದ್ಯತೆ ನೀಡಬೇಕು

ಎಚ್.ಡಿ.ಕೋಟೆ: ಪುರಸಭೆ ವ್ಯಾಪ್ತಿಯ ಯರ ಹಳ್ಳಿ ಹ್ಯಾಂಡ್‌ಪೋಸ್ಟ್ ಗ್ರಾಮದಲ್ಲಿ ವ್ಯಾಪಾರಿ ಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆ ಅಡಿ ಆಹಾರ ತಯಾರಿಕೆ ಮತ್ತು ವಿತರಣೆಯಲ್ಲಿನ ಶುಚಿತ್ವ ಹಾಗೂ ಗುಣಮಟ್ಟ ಕುರಿತು ಅರಿವು ಮೂಡಿಸುವ ವಿಶೇಷ ಆಂದೋಲನ ನಡೆಯಿತು.



ತಾಲೂಕು ಆರೋಗ್ಯಾಧಿಕಾರಿ ಹಾಗೂ ತಾಲೂಕಿನ ಆಹಾರ ಸುರಕ್ಷತಾಧಿಕಾರಿ ಡಾ.ಟಿ. ರವಿಕುಮಾರ್ ಮಾತನಾಡಿ, ಬೀದಿ ಬದಿಯಲ್ಲಿ ತಯಾರು ಮಾಡಿ, ಮಾರಾಟ ಮಾಡುವ ಫಾಸ್ಟ್‌ಫುಡ್ ವ್ಯಾಪಾರ ಮಾಡುವವರು ಕಡ್ಡಾಯವಾಗಿ ಆಹಾರ ಪರವಾನಗಿ ಪಡೆಯಬೇಕು. ವ್ಯಾಪಾರ ಮಾಡುವ ಸ್ಥಳಗಳನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು. ಜನರಿಗೆ ಶುದ್ಧ ಆಹಾರ ನೀಡಬೇಕು. ಅಡುಗೆ ಮಾಡಿದ ನಂತರ ಆಹಾರ ಪದಾರ್ಥವನ್ನು ಮುಚ್ಚಿಡಬೇಕು. ಜನರಿಗೆ ಕುಡಿಯಲು ಬಿಸಿ ನೀರನ್ನೇ ನೀಡಬೇಕು. ಪಾತ್ರೆಗಳನ್ನು ಶುದ್ಧವಾದ ನೀರಿನಿಂದ ತೊಳೆಯ ಬೇಕು ಕವರ್‌ಗಳನ್ನು ಉಪಯೋಗಿಸಬಾರದು. ತರಕಾರಿ ಮಾರಾಟ ಮಾಡುವವರು ಶುದ್ಧವಾದ ತರಕಾರಿಗಳನ್ನು ಮಾರಾಟ ಮಾಡಬೇಕು. ಕೊಳೆತ ತರಕಾರಿಗಳನ್ನು ಒಂದು ಕಡೆ ಶೇಖರಣೆ ಮಾಡಿ ಪುರಸಭೆಯಿಂದ ಬರುವ ವಾಹನಕ್ಕೆ ನೀಡಬೇಕು ಎಂದು ತಿಳಿಸಿದರು.

ಮಟನ್ ಮತ್ತು ಚಿಕನ್ ಮಾರಾಟಗಾರರು ಶುದ್ಧವಾದ ಮಾಂಸ ಮಾರಾಟ ಮಾಡಬೇಕು. ಯಾವುದೇ ಕಾರಣಕ್ಕೂ ಪ್ರಾಣಿಗಳು ಕಚ್ಚಿ ಸತ್ತಿರುವ ಮಾಂಸ ಮಾರಾಟ ಮಾಡಬಾರದು. ಮಾಂಸ ಕತ್ತರಿಸುವಾಗ ಬರುವ ಘನತ್ಯಾಜ್ಯ ವನ್ನು ಒಂದು ಕಡೆ ಶೇಖರಣೆ ಮಾಡಿ ಪುರಸಭೆಯ ಕಸ ಸಂಗ್ರಹ ವಾಹನಕ್ಕೆ ಮಾತ್ರ ನೀಡಬೇಕು. ಬೇರಡೆ ಎಲ್ಲೂ ಬಿಸಾಡಬಾರದು ಎಂದು ತಿಳಿಸಿದರು. ತಾಲೂಕು ಆರೋಗ್ಯಾಧಿಕಾರಿ ಕಚೇರಿಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶರಣಪ್ಪ ರಮಾಣಿ, ಪ್ರತಾಪ್ ಮತ್ತು ಸಿಬ್ಬಂದಿ ಇದ್ದರು.

## ಅಂಗನವಾಡಿ ಮಕ್ಕಳಿಗೆ ಪರೀಕ್ಷಾ ಶಿಬಿರ




ಗುಂಡ್ಲುಪೇಟೆ: ತಾಲೂಕಿನ ಹಂಗಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಮಕ್ಕಳಿಗೆ ದ್ವಿತೀಯ ಹಂತದ ಪರೀಕ್ಷಾ ಶಿಬಿರ ನಡೆಯಿತು.

ಶಿಬಿರದಲ್ಲಿ 226 ಮಕ್ಕಳಿಗೆ ತಪಾಸಣೆ ನಡೆಸಲಾಯಿತು, ತಾಲೂಕು ಪಂಚಾಯಿತಿ, ಶಿಶು ಅಭಿವೃದ್ಧಿ ಯೋಜನೆ ಗುಂಡ್ಲುಪೇಟೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗುಂಡ್ಲುಪೇಟೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಮೈಸೂರು, ಭಾರತ ಸರ್ಕಾರ ಸಹಯೋಗದಲ್ಲಿ ಅಂಗನವಾಡಿ ಮಕ್ಕಳಿಗೆ ದ್ವಿತೀಯ ಹಂತದ ಪರೀಕ್ಷಾ ಶಿಬಿರಕ್ಕೆ ಚಾಲನೆ ನೀಡಲಾಯಿತು.

ನಂತರ ಮಾತನಾಡಿದ ಸಿಡಿಪಿಓ ಹೇಮಾವತಿ ಅಂಗನವಾಡಿ ಈ ಕೇಂದ್ರದ ಪ್ರತಿಯೊಂದು – ಮಕ್ಕಳು ಕೂಡ ತಪಾಸಣೆಗೆ ನ ಒಳಗಾದರೆ ಆ ಮೂಲಕ ಮಕ್ಕಳ ಸಮಸ್ಯೆಗಳಿಗೆ 2 ಬೇಗ ಪರಿಹಾರ ಕಂಡು – ಹಿಡಿಯಬಹುದು, ಆದ್ದರಿಂದ ಎಲ್ಲಾ ಮಕ್ಕಳು ವಾಕ್ ಮತ್ತು 2 ಶ್ರವಣ ಪರೀಕ್ಷೆಗೆ ಒಳಗಾಗ – ಬೇಕು ಎಂದು ಮನವಿ ಮಾಡಿ. ಸಮಸ್ಯೆಗಳಿರುವ ಮಕ್ಕಳನ್ನು ಮೈಸೂರಿನ ವಾಕ್ ಮತ್ತು ಶ್ರವಣ ಕಳುಹಿಸಲಾಗುವುದು ಎಂದರು. ವಾಕ್ ಮತ್ತು ಶ್ರವಣ ಸಂಸ್ಥೆಯ ಇಂದಿರಾ. ಡಾ.ಶಿವಕುಮಾರ್, ಹಂಗಳ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸಂದೀಪ್ ಕುಮಾರ್, ಮಂಗಲ ಆಸ್ಪತ್ರೆಯ ಡಾ.ಪ್ರವೀಣ್, ಬಾಲಾಜಿ, ಮಹಿಳಾ ಮೇಲ್ವಿಚಾರಕಿ ರುದ್ರವ್ವ ಬಸಪ್ಪ ಕೆಳಗೇರಿ, ತಾಲ್ಲೂಕು ಸಂಯೋಜಕ ಸಂತೋಷ್, ಮಹೇಶ್ವರಿ, ಸೌಮ್ಯ, ಪರಮೇಶ್, ಗಗನಶ್ರೀ, ಭಾರತಿ ಸೇರಿದಂತೆ ಅಂಗನವಾಡಿ, ಆಶಾ ಕಾರ್ಯಕರ್ತರು ಮತ್ತು ಸಹಾಯಕಿಯರು, ಆಸ್ಪತ್ರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಹೇಳಿಕೆ**

## ಬುಡಕಟ್ಟು ಮಕ್ಕಳ ಪ್ರತಿಭೆ ಗುರುತಿಸಲು ಕ್ರೀಡಾಕೂಟ

ಚಾಮರಾಜನಗರ ಬುಡಕಟ್ಟು ಆಶ್ರಮ ಶಾಲೆಗಳ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಲು ಕ್ರೀಡೆಯು ಅತ್ಯವಶ್ಯಕವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ತಿಳಿಸಿದರು.

ತಾಲೂಕಿನ ರಂಗಸಂದ್ರ ಗ್ರಾಮದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಜನ ಜಾತೀಯ ಗೌರವ ದಿವಸ್ 150ನೇ ವರ್ಷಾಚರಣೆ ಹಾಗೂ ಭಗವಾನ್ ಶ್ರೀ ಬಿರ್ಸಾ ಮುಂಡಾ ಜಯಂತಿ ಅಂಗವಾಗಿ ತಾಲೂಕು ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳ ತಾಲೂಕು ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿಶೇಷವಾಗಿ ಬುಡಕಟ್ಟು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಹೆಚ್ಚು ಪ್ರೋತ್ಸಾಹ ನೀಡಲು ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ ಇದರಲ್ಲಿ ವಿಜೇತರಾದ ಮಕ್ಕಳಿಗೆ ಜನ ಜಾತೀಯ ಗೌರವ ದಿವಸ್ ಸಮಾರಂಭದಲ್ಲಿ ಬಹುಮಾನವನ್ನು ವಿತರಿಸಲಾಗುವುದು ಎಂದು ತಿಳಿಸಿದರು.



ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ. ಹೆಚ್.ಎಸ್, ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಆಶ್ರಮ ಶಾಲೆ ಮಕ್ಕಳಲ್ಲಿರುವ ಸಾಂಪ್ರದಾಯಿಕ ಕ್ರೀಡೆಗಳನ್ನು ಹೊರ ತರಲು ಹಾಗೂ ಪ್ರೋತ್ಸಾಹಿಸಲು ಇದು ಒಂದು ಉತ್ತಮ ಕಾರ್ಯಕ್ರಮವಾಗಿದ್ದು, ಈ ಕ್ರೀಡಾಕೂಟದಲ್ಲಿ ತಾಲೂಕಿನಾದ್ಯಂತ 6 ಆಶ್ರಮ ಶಾಲೆಯ ಮಕ್ಕಳು ಪಾಲ್ಗೊಂಡಿದ್ದು, ಅವರ ಪ್ರತಿಭೆಯನ್ನು ಹೊರ ತರಲಾಗುತ್ತದೆ ಎಂದು ತಿಳಿಸಿದರು.ಇದೆ ಸಂದರ್ಭದಲ್ಲಿ ಮಕ್ಕಳಿಗೆ ಖೋ–ಖೋ, ವಾಲಿಬಾಲ್, ಕಬಡ್ಡಿ, ಮ್ಯೂಸಿಕಲ್ ಚೇರ್ ಸೇರಿದಂತೆ ಇತರೆ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಿನಿಸ್ಟ್ರಿ ಆಫ್ ಪಬ್ಲಿಸಿಟಿ ಅಂಡ್ ಬ್ರಾಡ್ ಕಾಸ್ಟಿಂಗ್ ನ ಫೀಲ್ಡ್ ಆಫೀಸರ್ ಶೃತಿ ಎಸ್.ಟಿ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಮ್ಯಾನೇಜರ್ ಸುರೇಶ್, ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಯ ಮುಖ್ಯ ಶಿಕ್ಷಕ ಶಂಕರ್, ಹಾಗೂ ಆಶ್ರಮ ಶಾಲೆಗಳ ಮುಖ್ಯ ಶಿಕ್ಷಕರಾದ ಸೋಮಣ್ಣ, ಬಸವಣ್ಣ, ಶಿವಣ್ಣ, ಸಿದ್ದರಾಜು, ಕುಮಾರಸ್ವಾಮಿ ಸೇರಿದಂತೆ ಇತರರಿದ್ದರು.







ಕಲಾವಿದೆ ಅನು ಪ್ರಭಾಕರ್ ಹುಟ್ಟುಹಬ್ಬ...ಪತಿ ಕಲಾವಿದ ರಘು ಮುಖರ್ಜಿ ಜೊತೆಗೆ ಆಚರಣೆ

## ಡಾನ್ಸ್ ಕರ್ನಾಟಕ ಡಾನ್ಸ್, ನ.15 ರಿಂದ ಜೀ ಕನ್ನಡದಲ್ಲಿ ಆರಂಭ



ಡಾನ್ಸ್ ರಿಯಾಲಿಟಿ ಶೋ ?ಡಾನ್ಸ್ ಕರ್ನಾಟಕ ಡಾನ್ಸ್? ಹೊಸ ಸೀಸನ್‌ನೊಂದಿಗೆ ಮರಳಿ ಬರುತ್ತಿದೆ.

ಡಾನ್ಸ್ ಮೂಲಕ ಪ್ರೇಕ್ಷಕರ ಹೃದಯ ಗೆದ್ದ ಈ ಶೋ ಈ ಬಾರಿ ಇನ್ನಷ್ಟು ವಿಭಿನ್ನವಾಗಿರಲಿದೆ. ಹೊಸ ಥೀಮ್‌ಗಳು, ಅದ್ಭುತ ಪ್ರತಿಭೆಗಳ ಪ್ರದರ್ಶನಗಳೊಂದಿಗೆ ಈ ಬಾರಿಯ ಶೋ ಮತ್ತಷ್ಟು ಮನರಂಜನೆ ನೀಡಲು ಸಜ್ಜಾಗಿದೆ. ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಶೋ ನವೆಂಬರ್ 15ರಂದು ಪ್ರೀಮಿಯರ್ ಆಗಲಿದ್ದು, ಪ್ರತೀ ಶನಿವಾರ ಮತ್ತು ಭಾನುವಾರ ಸಂಜೆ 7:30ಕ್ಕೆ ಪ್ರಸಾರವಾಗಲಿದೆ.

ತನ್ನ ಮಾತಿನ ಮೂಲಕ ಜನಮನ್ನಣೆ ಪಡೆದ ಅನುಶ್ರೀ ಅವರು ಈ ಸೀಸನ್‌ನ



ಆಂಕರ್ ಆಗಲಿದ್ದು, ಜಡ್ಜಸ್ ಪ್ಯಾನೆಲ್‌ನಲ್ಲಿ ಶಿವರಾಜ್‌ಕುಮಾರ್, ರಚಿತಾ ರಾಮ್

ವಿಜಯ ರಾಘವೇಂದ್ರ ಮತ್ತು ಅರ್ಜುನ್ ಜನ್ಯ ಇರಲಿದ್ದಾರೆ. ಶಿವರಾಜ್ ಕುಮಾರ್ ನಟ ಮಾತ್ರವಲ್ಲದೆ ಒಳ್ಳೆಯ ಡ್ಯಾನ್ಸರ್ ಆಗಿದ್ದು ತನ್ನ ಡಿಫರೆಂಟ್ ಸ್ಟೈಲ್ ಗೆ ಜನಪ್ರಿಯ. ಇನ್ನು ಇವರ ವರುಷಗಳ ಅನುಭವ, ಜ್ಞಾನ ಸ್ಪರ್ಧಿಗಳಿಗೆ ಹುಮ್ಮಸ್ಸು ನೀಡಲಿದೆ. ನಟಿ ಮಾತ್ರವಲ್ಲದೆ, ಶಾಸ್ತ್ರೀಯ ನೃತ್ಯಗಾರ್ತಿಯೂ ಆಗಿರುವ ರಚಿತಾರಾಮ್ ಅವರ ನಾಲೆಡ್ಜ್, ಬಹುಮುಖ ಪ್ರತಿಭೆ, ರಾಷ್ಟ್ರಪ್ರಶಸ್ತಿ ವಿಜೇತ ವಿಜಯ

ರಾಘವೇಂದ್ರ ಅವರ ನಟನೆ, ಸಂಗೀತ ಮತ್ತು ಡಾನ್ಸ್ ಬಗೆಗಿನ ಜ್ಞಾನ, ಮತ್ತು ಅರ್ಜುನ್ ಜನ್ಯ ಅವರಿಗಿರುವ ಸಂಗೀತ, ತಾಳ, ಲಯಗಳ ಅರಿವು ಈ ಶೋಗೆ ಹೆಚ್ಚಿನ ಶಕ್ತಿ ತುಂಬಲಿದೆ. ಈ ಸೀಸನ್‌ನಲ್ಲಿ ಬಿಗ್ ಟ್ವಿಸ್ಟ್ ಇರಲಿದ್ದು ಜನಪ್ರಿಯ ಸೆಲೆಬ್ರಿಟಿಗಳು ರಾಜ್ಯದಾದ್ಯಂತ ಆಯ್ಕೆಯಾದ ಪ್ರತಿಭಾವಂತ ನೃತ್ಯಗಾರರೊಂದಿಗೆ ಜೋಡಿಯಾಗಿ ಪಾಲ್ಗೊಳ್ಳಲಿದ್ದಾರೆ. ಸೆಲೆಬ್ರಿಟಿಗಳ ಸಾಲಿನಲ್ಲಿ ಧನಂಜಯ್, ಭವ್ಯಾ ಗೌಡ, ಆರತಿ ಪಡುಬಿದ್ರಿ, ಅಮೋಘ್, ಪ್ರತೀಕ್ಷಾ, ನಂದಿನಿ, ಅನೂಪ್, ಸ್ಟೈಲ್ ಗುರು ರಕ್ಷಿತ್, ಜಗಪ್ಪ, ಅನನ್ಯ, ಪೂಜಾ ರಮೇಶ್ ಮತ್ತು ಅಶ್ವಿನ್ ಇರಲಿದ್ದಾರೆ. ಮೊದಲ ಎಪಿಸೋಡ್ ನಲ್ಲಿ ಸೆಲೆಬ್ರಿಟಿ ಡ್ಯಾನ್ಸರ್ ಗಳು ಇರಲಿದ್ದು, ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆದ ಆಡಿಷನ್ ನಲ್ಲಿ ಸೆಲೆಕ್ಟ್ ಆದ ಡ್ಯಾನ್ಸರ್ ಗಳು ಮುಂಬರಲಿರುವ ಎಪಿಸೋಡ್ ಗಳಲ್ಲಿ ಇವರಿಗೆ ಜೋಡಿಯಾಗಲಿದ್ದಾರೆ. ಯಾವ ಸೆಲೆಬ್ರಿಟಿಗೆ ಯಾರು ಜೋಡಿ ಆಗ್ತಾರೆ ಎಂಬುದು ವೀಕ್ಷಕರಲ್ಲಿ ಕುತೂಹಲ ಮೂಡಿಸಲಿದೆ. ?ಡಾನ್ಸ್ ಕರ್ನಾಟಕ ಡಾನ್ಸ್? ನವೆಂ 15 ರಿಂದ, ಶನಿವಾರ ಮತ್ತು ಭಾನುವಾರ ರಾತ್ರಿ 7:30 ಕ್ಕೆ ಪ್ರಸಾರ ಆಗಲಿದೆ

## ದಿ ಟಾಸ್ಕ್ ಟ್ರೇಲರ್ ಬಿಡುಗಡೆ



ದಿ ಟಾಸ್ಕ್ ಸಿನಿಮಾ ಟೈಟಲ್ ಮತ್ತು ಟೀಸರ್ ಮೂಲಕ ಈಗಾಗಲೇ ಸಿನಿಪ್ರಿಯರಲ್ಲಿ ಕುತೂಹಲ ಹೆಚ್ಚಿಸಿದೆ. . ಈಗ ದಿ ಟಾಸ್ಕ್ ಸಿನಿಮಾದ ಟ್ರೇಲರ್ ಬಿಡುಗಡೆ ಮಾಡಲಾಗಿದೆ. ಶ್ರೀಮುರಳಿ ಟ್ರೇಲರ್ ಬಿಡುಗಡೆ ಮಾಡಿದರು. ಶಾಸಕ ಸತೀಶ್ ರೆಡ್ಡಿ ಉಪಸ್ಥಿತರಿದ್ದರು.

ಶ್ರೀಮುರಳಿ ಮಾತನಾಡಿ, ದಿ ಟಾಸ್ಕ್ ಚಿತ್ರದ ನಾಯಕರಾದ ಸಾಗರ್-ಸೂರ್ಯ ನೀವು ಅದೃಷ್ಟವಂತರು. ಕಾರಣ ರಾಘು ಅವರಂತಹ ಬ್ರಿಲಿಯಂಟ್ ಡೈರೆಕ್ಟರ್ ಜೊತೆ ಕೆಲಸ ಮಾಡುವ ಅವಕಾಶ ನಿಮ್ಮದಾಗಿದೆ. ರಾಘು ಅವರನ್ನು ಚೂರಿಕಟ್ಟೆ ಸಿನಿಮಾ ಸಮಯದಿಂದ ನೋಡುತ್ತಾ ಬಂದಿದ್ದೇನೆ. ಅವರ ಡೈರೆಕ್ಷನ್ ನನಗೆ ಬಹಳ ಇಷ್ಟವಾಯ್ತು. ಅವರ ಬರವಣಿಗೆ, ಅಂದುಕೊಳ್ಳುವ ರೀತಿ ಚೆಂದ. ಅವರು ಬುದ್ದಿವಂತ ವ್ಯಕ್ತಿ. ಚೂರಿಕಟ್ಟೆ ಇವತ್ತಿನ ಮಾರ್ಕೆಟ್ ರಿಲೀಸ್ ಆದರೆ 100 ದಿನ ಓಡುತ್ತದೆ. ಈಗ ದಿ ಟಾಸ್ಕ್ ಸಿನಿಮಾ. ಇಬ್ಬರು ಹೀರೋಗಳು ತುಂಬಾ ಎನರ್ಜಿಟಿಕ್ ಆಗಿ ಕಾಣಿಸ್ತಾರೆ. ಒಳ್ಳೆ ಹೀರೋಗಳು ಇಂಡಸ್ಟ್ರಿಗೆ ಬರ್ತಿದ್ದಾರೆ. ಜೀವನದಲ್ಲಿ ತುಂಬಾನೇ ಟಾಸ್ಕ್ ಇದೆ. ಅದನ್ನು ಪಕ್ಕಕ್ಕಿಟ್ಟು ಇದೇ ನವೆಂಬರ್ 21ರಂದು ದಿ ಟಾಸ್ಕ್ ಸಿನಿಮಾ ನೋಡಿ, ಬೆಂಬಲಿಸಿ ಎಂದರು.

ಶಾಸಕ ಸತೀಶ್ ರೆಡ್ಡಿ ಮಾತನಾಡಿ, ಅದ್ಭುತವಾದ ಸಿನಿಮಾ ದಿ ಟಾಸ್ಕ್. ಇದೇ ತಿಂಗಳ 21ರಂದು ತೆರೆಗೆ ಬರ್ತಿದೆ. ಕನ್ನಡಿಗರು ಸಿನಿಮಾ ನೋಡಿ ಹಾರೈಸಬೇಕು. ಯಶಸ್ವಿಯಾಗಿಗೊಳಿಸಬೇಕು. ಸಾಗರ್ ಹಾಗೂ ಸೂರ್ಯ, ಇಡೀ ತಂಡ ಎಫರ್ಟ್ ಹಾಕಿ ಸಿನಿಮಾ ಮಾಡಿದ್ದಾರೆ. ರಾಜೇಶ್ ಸರ್ 10ಙು ಫೇಲ್ ಆದವರಿಗೆ ತಮ್ಮ ದುಡ್ಡಲ್ಲಿ ಮತ್ತೆ ಪರೀಕ್ಷೆ ಕಟ್ಟಿಸಿ ಓದಿಸಿದ್ದಾರೆ. ಇದು ಅವರ ಮಾಡಿದ ಟಾಸ್ಕ್ ಎಂದರು.

ವಿಜಯ್ ಕುಮಾರ್ ಮತ್ತು ರಾಮಣ್ಣ ?ದಿ ಟಾಸ್ಕ್? ಸಿನಿಮಾ ನಿರ್ಮಾಣ ಮಾಡಿದ್ದಾರೆ. ರಾಘು ಶಿವಮೊಗ್ಗ ನಿರ್ದೇಶನದ ಜೊತೆಗೆ ಒಂದು ಮುಖ್ಯ ಪಾತ್ರವನ್ನು ಕೂಡ ನಿರ್ವಹಿಸಿದ್ದಾರೆ. ಅಚ್ಯುತ್ ಕುಮಾರ್, ಶ್ರೀಲಕ್ಷ್ಮೀ, ಗೋಪಾಲಕೃಷ್ಣ ದೇಶಪಾಂಡೆ, ಹರಿಣಿ ಶ್ರೀಕಾಂತ್, ಅರವಿಂದ್ ಕುಪ್ಳಿಕರ್, ಸಂಪತ್ ಮೈತ್ರಿಯಾ, ಬಿ.ಎಂ. ಗಿರಿರಾಜ್, ಬಾಲಾಜಿ ಮನೋಹರ್ ಮುಂತಾದವರು ಪಾತ್ರವರ್ಗದಲ್ಲಿ ಇದ್ದಾರೆ.



## ಮ್ಯಾಂಗೋ ಪಚ್ಚ ಆಡಿಯೋ ಹಕ್ಕು ಸರೆಗಮಕ್ಕೆ

ಕಿಚ್ಚ ಸುದೀಪ್ ಅಕ್ಕನ ಮಗ ಸಂಚಿತ್ ಸಂಜೀವ್ ?ಮ್ಯಾಂಗೋ ಪಚ್ಚ? ಸಿನಿಮಾದ ಮೂಲಕ ಹೀರೋ ಆಗಿ ಸ್ಯಾಂಡಲ್ ವುಡ್ ಗೆ ಪರಿಚಯವಾಗುತ್ತಿದ್ದಾರೆ. ವಿವೇಕ ಚೊಚ್ಚಲ ನಿರ್ದೇಶನದಲ್ಲಿ ಈ ಚಿತ್ರ ಮೂಡಿ ಬರ್ತಿದೆ. ಟೀಸರ್ ಮೂಲಕ ಈಗಾಗಲೇ ಪ್ರೇಕ್ಷಕರ ವಲಯದಲ್ಲಿ ನಿರೀಕ್ಷೆ ಹೆಚ್ಚು ಮಾಡಿರುವ ಮ್ಯಾಂಗೋ ಪಚ್ಚ ಸಿನಿಮಾದ ಆಡಿಯೋ ಹಕ್ಕು ಸರೆಗಮ ಪಾಲಾಗಿದೆ.

ಹೊಸ ಹೀರೋ, ಹೊಸ ಡೈರೆಕ್ಟರ್ ಮೊದಲ ಪ್ರಯತ್ನಕ್ಕೆ ಒಳ್ಳೆ ಬೇಡಿಕೆ ಕ್ರಿಯೇಟ್ ಆಗಿದೆ. ಮ್ಯಾಂಗೋ ಪಚ್ಚ ಸಿನಿಮಾದ ಆಡಿಯೋ ರೈಟ್ಸ್ ನ್ನು ಸರೆಗಮ ಒಂದೊಳ್ಳೆ ಮೊತ್ತಕ್ಕೆ ಕೊಂಡುಕೊಂಡಿದೆ. ಇದು ಇಡೀ ಚಿತ್ರ ತಂಡದ ಖುಷಿಗೆ ಕಾರಣವಾಗಿದೆ.

2001ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳು ?ಮ್ಯಾಗೋ ಪಚ್ಚ? ಸಿನಿಮಾದಲ್ಲಿವೆ. ಕ್ರೈಂ ಥ್ರಿಲ್ಲರ್ ಕಹಾನಿಯನ್ನು ಈ ಚಿತ್ರ ಹೊಂದಿದೆ. ಈ ಚಿತ್ರಕ್ಕೆ ಕೆಆರ್‌ಜಿ ಮತ್ತು ಕಿಚ್ಚ ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ಬಂಡವಾಳ ಹೂಡಿವೆ. ಪ್ರಿಯಾ ಸುದೀಪ್, ಕಾರ್ತಿಕ್, ಯೋಗಿ ಜಿ. ರಾಜ್ ಅವರು ನಿರ್ಮಾಪಕರಾಗಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಒಳ್ಳೆ ಮೊತ್ತಕ್ಕೆ ಆಡಿಯೋ ಹಕ್ಕು ಸೇಲ್ ಆಗಿರುವ ಬಗ್ಗೆ ಸಂತಸ ಹಂಚಿಕೊಂಡಿರುವ ನಿರ್ಮಾಪಕಿ ಪ್ರಿಯಾ ಸುದೀಪ್ ಅವರು, "ಸರೆಗಮ ಮ್ಯಾಂಗೋ ಪಚ್ಚ ಆಡಿಯೋ ಖರೀದಿಸಿರುವುದು ನಾವು ನಂಬಲಾಗದಷ್ಟು ಉತ್ಸುಕರಾಗಿದ್ದೇವೆ. ಚರಣ್ ರಾಜ್ ಅವರು ಸಂಯೋಜಿಸಿದ ಸಂಗೀತವು ಪ್ರೇಕ್ಷಕರನ್ನು ಪ್ರತಿಧ್ವನಿಸುತ್ತದೆ ಮತ್ತು ಚಿತ್ರವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂಬುದು ಖಚಿತ. ಚರಣ್ ಅವರ ಸಾಮರ್ಥ್ಯದ ಮೇಲೆ ನಂಬಿಕೆ ಇದೆ. ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿ ಬಂದಿರುವ ಹಾಡುಗಳನ್ನು ಕೇಳಲು ಉತ್ಸುಕಳಾಗಿದ್ದೇನೆ" ಎಂದರು. ಮ್ಯಾಂಗೋ ಪಚ್ಚ ಸಿನಿಮಾದ ಮೊದಲ ಹಾಡನ್ನು ಇದೇ ತಿಂಗಳ 24ರಂದು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

## ಕಿಚ್ಚನ 'ಮಾರ್ಕ್'ಗೆ ಕುಂಬಳಕಾಯಿ ಪ್ರಾಪ್ತಿ.. ಡಿಸೆಂಬರ್ 25ಕ್ಕೆ ಮಾರ್ಕ್ ಎಂಟ್ರಿ ಫಿಕ್ಸ್

ಸುದೀಪ್ ನಟಿಸಿರುವ 'ಮಾರ್ಕ್' ಸಿನಿಮಾದ ಟೀಸರ್ ಈಗಾಗಲೇ ದಾಖಲೆ ಬರೆದಿದೆ. ಕಿಚ್ಚನ ಆಕ್ಷನ್ ಖದರ್ ನೋಡಿ ಥ್ರಿಲ್ಲರ್ ಆಗಿರುವವರಿಗೆ ಚಿತ್ರತಂಡ ಈಗ ಮತ್ತೊಂದು ಕ್ರೇಜಿ ಅಪ್ ಡೇಟ್ ಕೊಟ್ಟಿದೆ.

ಕನಕಪುರ ರಸ್ತೆಯಲ್ಲಿ ಕೊನೆ ಹಂತದ ಚಿತ್ರೀಕರಣ ಮುಗಿಸಿ ಚಿತ್ರತಂಡ ಕುಂಬಳಕಾಯಿ ಒಡೆದಿದೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ನಲ್ಲಿ ತೊಡಗಿಸಿಕೊಂಡಿದೆ.

'ಮ್ಯಾಕ್ಸ್? ಸಿನಿಮಾದಲ್ಲಿ ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಅವರ ಕಾಂಬಿನೇಷನ್ ಮೋಡಿ ಮಾಡಿತ್ತು. ಈಗ ಮತ್ತೆ ಅವರಿಬ್ಬರು ?ಮಾರ್ಕ್? ಸಿನಿಮಾದ ಮೂಲಕ ರಂಜಿಸಲು ಬರುತ್ತಿದ್ದಾರೆ. ?ಮ್ಯಾಕ್ಸ್? ರೀತಿಯೇ ಈ ಬಾರಿ ಕೂಡ ಪೊಲೀಸ್ ಆಫೀಸರ್ ಪಾತ್ರದಲ್ಲಿ ಸುದೀಪ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ.



ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ 25ರಂದು ?ಮಾರ್ಕ್? ಸಿನಿಮಾ ರಿಲೀಸ್ ಆಗಲಿದೆ.

'ಮಾರ್ಕ್? ಸಿನಿಮಾಗೆ ಶೇಖರ್ ಚಂದ್ರ ಅವರು ಛಾಯಾಗ್ರಹಣ ಮಾಡಿದ್ದಾರೆ. ಅಜನೀಶ್ ಬಿ. ಲೋಕನಾಥ್ ಅವರು ಸಂಗೀತ ನೀಡಿದ್ದಾರೆ. ಈ ಸಿನಿಮಾದಲ್ಲಿ ಅಜಯ್ ಮಾರ್ಕಂಡೆ ಎಂಬ ಪಾತ್ರವನ್ನು ಸುದೀಪ್ ಮಾಡಿದ್ದಾರೆ. ?ಸತ್ಯಜ್ಯೋತಿ ಫಿಲ್ಮ್ಸ್? ಹಾಗೂ ?ಕಿಚ್ಚ ಕ್ರಿಯೇಷನ್ಸ್? ಬ್ಯಾನರ್‌ಗಳು ಜತೆಯಾಗಿ ಈ ?ಮಾರ್ಕ್? ಚಿತ್ರವನ್ನು ನಿರ್ಮಿಸಿವೆ.

## ಇನಿಯನ ಆತ್ಮ ಟ್ರೇಲರ್ ಮತ್ತು ಹಾಡು ಬಿಡುಗಡೆ

ಕೋಲಾರ ಮೂಲದ ಹೊಸ ಪ್ರತಿಭೆಗಳೇ ಸೇರಿಕೊಂಡು ಸಿದ್ದಪಡಿಸಿರುವ ಇನಿಯನ ಆತ್ಮ ಚಿತ್ರದ ಟ್ರೇಲರ್ ಮತ್ತು ಹಾಡುಗಳನ್ನು ಉದ್ಯಮಿ ಪುಂಡರೀಕ ಮೂರ್ತಿ ಲೋಕಾರ್ಪಣೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಶ್ರೀ ವಿನಾಯಕ ವೆಂಕಟೇಶ್ವರ ಫಿಲಂಸ್ ಅಡಿಯಲ್ಲಿ ಬಿ.ಕಲಾವತಿ ನಿರ್ಮಾಣ ಮಾಡಿದ್ದಾರೆ. ಕಥೆ,ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಹಾಗೂ ನಿರ್ದೇಶನದ ಜವಬ್ದಾರಿಯನ್ನು ನರೇಶ್ ಸಿದ್ದಘಟ್ಟ ವಹಿಸಿಕೊಂಡಿದ್ದಾರೆ.

ನಂತರ ಮಾತನಾಡಿದ ನಿರ್ದೇಶಕರು, ಏಳು ಜನ ಯುವ ತಂಡದವರು ಪ್ರವಾಸಕ್ಕೆಂದು ದೂರದ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಇವರನ್ನೆ ಗುರಿಯಾಗಿಸಿಕೊಂಡು ಒಂದಷ್ಟು ಘಟನೆಗಳು ನಡೆಯುವುದು ಯಾಕೆ? ಕರ್ಮ ಯಾರನ್ನು ಬಿಡುವುದಿಲ್ಲ. ಪ್ರೇಯಸಿ ಆತ್ಮ ಹೇಗಾಗುತ್ತದೆ. ಇಂತಹ ಹಲವು ಸ್ವಾರಸ್ಯಕರ ವಿಷಯಗಳು ಹಾರರ್, ಥ್ರಿಲ್ಲರ್ ರೀತಿಯಲ್ಲಿ ನೋಡುಗರಿಗೆ ಕುತೂಹಲ ಮೂಡಿಸುತ್ತದೆ ಹಾಗೂ ಕಾಮಿಡಿಯಾಗಿ ಸನ್ನಿವೇಶಗಳು ಇರಲಿದೆ. ಕೋಲಾರ, ಚಿಕ್ಕಾಬಳ್ಳಾಪುರ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಮಾಧ್ಯಮದವರ ಸಹಕಾರ ಬೇಕೆಂದು ನರೇಶ್ ಸಿದ್ದಘಟ್ಟ ಕೋರಿದರು.

ನಾಯಕ ಸಿದ್ದರ್ಥ್ ಹರಿ, ನಾಯಕಿ ನಿಶಾರೆಡ್ಡಿ. ಉಳಿದಂತೆ ಕೋಲಾರ



ಸೂರ್ಯ, ರಾಜ್‌ವೀರ್, ಕಿಟ್ಟಿ ತಾಳಿಕೋಟೆ, ಆದಿಮಧುಗಿರಿ, ಸುಶ್ಮಿತ, ನಯನ ಮುಂತಾದವರು ನಟಿಸಿದ್ದಾರೆ. ಸಂಗೀತ ಎ.ಟಿ.ರವೀಶ್, ಛಾಯಾಗ್ರಹಣ ಚರಣ್‌ತೇಜ್, ಸಂಕಲನ ಪವನ್.ಬಿ.ಕೆ, ಸಾಹಸ ಥ್ರಿಲ್ಲರ್‌ಮಂಜು-ಕೌರವವೆಂಕಟೇಶ್, ನಿರ್ವಹಣೆ ಮೋಹನ್, ನೃತ್ಯ ಕರಿಯನಂದ,ಸನ್ ಸುನಿಲ್ ಅವರದಾಗಿದೆ. ಹೇಮಂತ್‌ಕುಮಾರ್, ರವಿಶಾಸ್ತ್ರೀ, ಸುರಭಿ ಭರದ್ವಾಜ್, ಸಚಿನ್ ಹಾಡುಗಳಿಗೆ ಕಂಠದಾನ ಮಾಡಿದ್ದಾರೆ. ಜಯದೇವ್ ಫಿಲಂಸ್ ಮುಖಾಂತರ ಚಿತ್ರವು ಇದೇ ತಿಂಗಳು ತೆರೆಗೆ ಬರಲಿದೆ.

## ಅಣ್ಣ ತಂಗಿ ಬಾಂಧವ್ಯದ ಕಥನ



ಶ್ರೀ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಸಿದ್ದಗೊಂಡಿರುವ ಗಿಡುಗ ಸಿನಿಮಾಕ್ಕೆ ರಾಜ ರಾಣಿ ರೋರರ್ ರಾಕೆಟ್? ಖ್ಯಾತಿಯ ಕೆಂಪೆಗೌಡ ಮಾಗಡಿ ಇವರು ಚಿತ್ರಕಥೆ,ಸಂಭಾಷಣೆ, ನಿರ್ದೇಶನ ಜತೆಗೆ ಬಂಡವಾಳ ಹೂಡಿರುವುದು ಮೂರನೇ ಅನುಭವ. ಸಂಕರ ನಾರಾಯಣ ನಂಬುದಿರಿ ಮತ್ತು ವಿ.ಎ.ರತೀಶ್ ಹುದಿಕೇರಿ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ದ ಹಂಟರ್ ಎಂಬ ಅಡಿಬರಹವಿದೆ.

ಅಣ್ಣ ತಂಗಿ ಕಥೆಯುಳ್ಳ ಚಿತ್ರ ಇದಾಗಿದ್ದು, ಸೆಸ್ಪೆನ್ಸ್, ಮರ್ಡರ್ ಮಿಸ್ಟರಿ ಅಂಶಗಳನ್ನು ಒಳಗೊಂಡಿರುವುದರಿಂದ ನಿರ್ದೇಶಕರು ಚಿತ್ರದ ಸಾರಾಂಶವನ್ನು ಗೌಪ್ಯವಾಗಿಟ್ಟಿದ್ದಾರೆ. ರತೀಶ್ ಕೂರ್ಗ್ ನಾಯಕ. ತಂಗಿಯಾಗಿ ಭವಾನಿ, ಉಳಿದಂತೆ ಭಾನು, ಮೋಹನ್, ಚಾಮರಾಜು, ರೇವಣ್ಣ ಮಾಗಡಿ, ಚೆನ್ನಬಸವ, ಕಿಶೋರ್, ಸಂಜೀವ್, ಮಾಸ್ಟರ್ ಹೃದಯನ್ ಗೌಡ, ಮಾಸ್ಟರ್ ಪುನೀತ್ ಮುಂತಾದವರು ನಟಿಸಿದ್ದಾರೆ. ಹಾಡುಗಳಿಗೆ ವಿನ್ಸೆಂಟ್ ಮುಕೇಶ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ದೀಪು ಅರಸಿಕೆರೆ-ಸಂಗಮೇಶ್-ರವಿ, ಸಂಕಲನ ಆದಿ ಆದರ್ಶ್, ಸಾಹಸ ಮಾರುತಿ ಮಾಗಡಿ ಅವರದಾಗಿದೆ. ಬೆಂಗಳೂರು, ಮಾಗಡಿ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ವಿತರಕ ರಾಮಚಂದ್ರ ಕುಲಕರ್ಣಿ ಮುಖಾಂತರ ?ಗಿಡುಗ? ಇದೇ ತಿಂಗಳು ಬಿಡುಗಡೆಯಾಗುವ ಸಾಧ್ಯತೆ ಇದೆ.



ಶ್ರೀಮತಿ ಸಿಂಧೂರ ಚಿತ್ರದಲ್ಲಿ ಮಾನಸಿ ಹಾಗೂ ಪ್ರಿಯಾ

## ಹೊಸಬರ 1979 ಪೋಸ್ಟರ್ ಬಿಡುಗಡೆ

ಹೊಸ ಪ್ರತಿಭೆಗಳೇ ಸೇರಿಕೊಂಡು ಸಿದ್ದಪಡಿಸಿರುವ 1979 ಚಿತ್ರದ ಪೋಸ್ಟರ್‌ನ್ನು ?ಆ ದಿನಗಳು? ಖ್ಯಾತಿಯ ಚೇತನ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಕ್ರೀಡಾಪಟು, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ.ಬಿ.ಎಂ.ಶ್ರೀನಿವಾಸ್, ಬೀರಮಾನಹಳ್ಳಿ ಇವರು ಅಪ್ಪನ ಸ್ಮರಣಾರ್ಥ ಸಲುವಾಗಿ ಮನಂ ಮೂವೀ ಮೇಕರ?ಸ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಕಥೆ,ಚಿತ್ರಕಥೆ,ಸಂಭಾಷಣೆ ಬರೆದು ನಿರ್ದೇಶನ ಮಾಡಿರುವುದು ಪುಷ್ಪರಾಜ್. ಎಲ್ಲೂ ಕೇಳಿರದ ಕಥೆ ಎಂದು ಇಂಗ್ಲೀಷ್‌ದಲ್ಲಿ ಅಡಿಬರಹ ಇರಲಿದೆ. ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ಅಜ್ಜು, ಪ್ರಾಣ್ವಿ, ಸುಜಿತ್, ಅಮೃತ ಇವರುಗಳು ಯೌವ್ವನ ಹಾಗೂ ಮುಪ್ಪಿನವರೆಗೂ ನಟನೆ ಮಾಡಿರುವ ಅನುಭವಗಳನ್ನು ಹಂಚಿಕೊಂಡರು. ಉಳಿದಂತೆ ದುರ್ಗಾ, ಪ್ರೀತಿ, ತಕ್ಷಾರಾಮ್, ನಿರಂಜನ್, ಧನುಷ್ ಮುಂತಾದವರು ಬಣ್ಣ ಹಚ್ಚಿದ್ದಾರೆ. ಸಂಗೀತ ಜಸ್ವಂತ್ ಪಸುಪುಲೇಟಿ, ಛಾಯಗ್ರಹಣ ಚಲಾಕಿ ಚರಣ್, ಸಂಕಲನ ವಸಂತ್, ಕಲರಿಸ್ಟ್ ದೀಪಕ್ ಕೊಂಡೂರು ಅವರದಾಗಿದೆ. ಕೋಲಾರ, ತೇರಳ್ಳಿ, ಯರಗೋಳ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು 1904 ರಿಂದ 1979ರ ವರೆಗೆ ವೆಸ್ಟ್‌ಬೆಂಗಾಲ್‌ದಲ್ಲಿ ನಡೆದಂತ ಸತ್ಯ ಘಟನೆಗಳನ್ನು ಆಧಾರವಾಗಿ ಇಟ್ಟುಕೊಂಡು ಸೃಷ್ಟಿಸಿದ ಕಾಲ್ಪನಿಕ ಕಥೆಯಲ್ಲಿ (ಫಿಕ್ಷನಲ್ ಸ್ಟೋರಿ ಬೇಸಡ್ ಆನ್ ಟ್ರೂ ಈವೆಂಟ್ಸ್)



ಒಂದಷ್ಟು ಅಂಶಗಳನ್ನು ಕಮರ್ಷಿಯಲ್ ರೂಪದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಪಿರಿಯಾಡಿಕ್ ಡ್ರಾಮಾ ಕಥೆಯಲ್ಲಿ ಕೆಲವು ಪಾತ್ರಗಳನ್ನು ಸೃಷ್ಟಿಸಲಾಗಿದೆ. ನಿರಾಶ್ರಿತ ಒಂದು ಸಮುದಾಯದವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಯಾವ ರೀತಿ ಹೋರಾಟ ಮಾಡುತ್ತಾರೆ. ಅಲ್ಲಿನ ದಬ್ಬಾಳಿಕೆ ವಿರುದ್ದ ಕ್ರಾಂತಿ ಹೇಗೆ ಶುರುವಾಗುತ್ತದೆ ಎಂಬುದನ್ನು ಹೇಳಲಾಗಿದೆ ಎಂದು ಪುಷ್ಪರಾಜ್ ಮಾಹಿತಿ ಬಿಚ್ಚಿಟ್ಟರು.

ಆ ದಿನಗಳು ಚೇತನ್ ಮಾತನಾಡುತ್ತಾ, ಹೊಸಬರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆಂದು ಗೊತ್ತಿತ್ತು. ಆದರೆ ಇಷ್ಟು ಪ್ರತಿಭಾವಂತರು ಎಂಬುದು ತುಣುಕುಗಳನ್ನು ನೋಡಿದಾಗ ತಿಳಿಯಿತು. ಇವರ ವಿಭಿನ್ನ ಪ್ರಯೋಗ ಕನ್ನಡ ಚಿತ್ರರಂಗಕ್ಕೆ ಹೊಸತನ ನೀಡಿದೆ. ನಿರಾಶ್ರಿತರ ಕಥೆಗಳು ಕನ್ನಡದಲ್ಲಿ ಹೆಚ್ಚು ಬಂದಿಲ್ಲದರಬಹುದು. ಕನ್ನಡ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ವಿಶ್ವದಾದ್ಯಂತ ಪ್ರಸರಿಸುತ್ತಿದೆ.

ಅದರಲ್ಲೂ ಪ್ಯಾನ್ ಇಂಡಿಯಾ ಕಥೆಗಳನ್ನು ಕರ್ನಾಟಕಕ್ಕೆ ತಂದು, ಇತಿಹಾಸದಲ್ಲಿ ಮುಚ್ಚಿ ಹಾಕಿರುವ ವಿಷಯಗಳನ್ನು ಜನತೆಗೆ ಪರಿಚಯಿಸುವ ಶ್ರಮ ನಿಜಕ್ಕೂ ಶ್ಲಾಘನೀಯವಾಗಿದೆ. ಕನ್ನಡ ಚಿತ್ರರಂಗವು ಕಂಟೆಂಟ್‌ನಿಂದ ಬೆಳೀತಾ ಇದೆ. ನಿಮ್ಮೆಗೆಲ್ಲರಿಗೂ ಮಂಗಳವಾಗಲೆಂದು ಮಾತಿಗೆ ವಿರಾಮ ಹಾಕಿದರು.

# ಕರ್ನಾಟಕದ ಆಕರ್ಷಣೀಯ ಪ್ರವಾಸಿ ತಾಣ.. ಚಾಲುಕ್ಯ ಅರಸರು ಆಳಿದ ಬಾದಾಮಿ

ನಮ್ಮ ಭಾರತ ದೇಶ ಜಗತ್ತಿನಲ್ಲೇ ವಿಶೇಷವಾದ ದೇಶ. ವಿಭಿನ್ನ ಸಂಸ್ಕೃತಿ ಸಂಸ್ಕಾರ ಒಡಲಲ್ಲಿ ತುಂಬಿಕೊಂಡು, ಭಿನ್ನತೆಯಲ್ಲಿ ಏಕತೆ ಸಾಧಿಸಿದ ದೇಶ. ತನ್ನ ದೇಶದಲ್ಲಿರುವ ವಿಶೇಷತೆಗಳಿಂದ ಜಗದಲ್ಲೇ ಹಿರಿಮೆ ಗರಿಮೆ ಗಳಿಸಿಕೊಂಡಿದೆ. ಅನೇಕ ಮೊದಲುಗಳು ಕರ್ನಾಟಕದಲ್ಲಿ ಆರಂಭವಾಗಿವೆ. ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಮೈಸೂರು ದಸರಾ, ಜಲ್ಲಿ ಕಟ್ಟು, ಕದಿರು ಕಟ್ಟು, ಹುತ್ತರಿ ಹಬ್ಬ, ಕರಗ ಉತ್ಸವ, ಹೀಗೇ ಇನ್ನೂ ಅನೇಕ ರೀತಿಯ ಹಬ್ಬ ಹರಿದಿನಗಳ ಆಚರಣೆ ನಡೆಯುತ್ತದೆ.

.ಈ ದೇಶದ ರಾಜರು ಆಡಳಿತ ನಡೆಸುವುದಷ್ಟೇ ಅಲ್ಲದೇ ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ.. ಸಾವಿರಾರು ವರ್ಷ ಹಳೆಯದಾದರೂ  ಚಳಿ ಮಳೆ ಗಾಳಿ,ಯಾವುದೇ ಹೊಡೆತಕ್ಕೆ ಜಗ್ಗದೇ ಬಗ್ಗದೇ ನಿಂತ ಸಾವಿರಾರು ದೇವಾಲಯಗಳಿವೆ. ಇದೇ ವಿಶೇಷವೆನಿಸುತ್ತದೆ.

ಅದರಲ್ಲೂ ಉತ್ತರ ಕರ್ನಾಟಕದ ಬಾದಾಮಿ ಎಲ್ಲರ ಗಮನ ಸೆಳೆದಿದೆ..ಬಾದಾಮಿ ಬೆಂಗಳೂರನಿಂದ ಸು. 386–400 ಇಟ ದೂರ ಇದೆ.

ಬಾದಾಮಿಯ ಬನಶಂಕರಿ ದೇವಿಯ ದೇವಸ್ಥಾನ ತುಂಬಾ ಪ್ರಸಿದ್ಧವಾಗಿದೆ. ಬನಶಂಕರಿ ಅಥವಾ ಶಾಕಾಂಬರಿ ಎಂತಲೂ ಕರೆಯುತ್ತಾರೆ. ಇಲ್ಲಿ 6–7 ನೇ ಶತಮಾನದಲ್ಲಿ ಚಾಲುಕ್ಯರ ಆಡಳಿತವಿತ್ತು .  ಚಾಲುಕ್ಯರ ರಾಜಧಾನಿ ಬಾದಾಮಿಯಾಗಿತ್ತು



1 ಇಟ ಗಿಂತ ಹೆಚ್ಚಾಗುತ್ತದೆ.

ಬಾದಾಮಿ ಹತ್ತಿರವೇ ಇರುವ ಪಟ್ಟದಕಲ್ಲು ಮತ್ತು ಐಹೊಳೆ ಪ್ರಸಿದ್ಧ ಪ್ರವಾಸಿ ತಾಣಗಳಾಗಿವೆ ಇವು ಮಲಪ್ರಭಾ ನದಿಯ ದಂಡೆಯ ಮೇಲಿದ್ದು, ಉನೆಸ್ಕೋದ ವಿಶ್ವ ಪರಂಪರೆಯ ತಾಣಗಳೆಂದು ಘೋಷಿಸಲ್ಪಟ್ಟಿವೆ. ಈ ದೇವಾಲಗಳು ದ್ರಾವಿಡ ಹಾಗೂ ನಾಗರ ವಾಸ್ತು ಶಿಲ್ಪವನ್ನು ಹೊಂದಿವೆ. ಪಟ್ಟದಕಲ್ಲಿನಲ್ಲಿ ಒಟ್ಟು 10 ಪ್ರಮುಖ ದೇವಾಲಯಗಳಿವೆ. ಅತ್ಯಂತ ಸುಂದರ ವಾಸ್ತು ಶಿಲ್ಪದಿಂದ ಕೂಡಿವೆ. ಎಲ್ಲವೂ ಶಿವನ ಆರಾಧ್ಯ ಕೇಂದ್ರವಾಗಿವೆ.

ತನ್ನ ಪತಿ ವಿಕ್ರಮಾದಿತ್ಯ ರಾಜನ ಯುದ್ಧ ವಿಜಯವನ್ನು

ಆಗ ಅವರು ಕಟ್ಟಿಸಿದ್ದಾರೆ ಈ ದೇವಾಲಯಗಳನ್ನು. ಅವರ ಕುಲದೇವತೆ ಬನಶಂಕರಿ ದೇವಿಯಾಗಿದ್ದಳು. ಚಾಲುಕ್ಯರು ಅತ್ಯಂತ ಉತ್ತಮ ರಾಜ್ಯಭಾರ ಮಾಡಿದ್ದಾರೆ. ಅವರಲ್ಲಿ ಇಮ್ಮಡಿ ಪುಲಕೇಶಿ ಶೂರ ವೀರನಾಗಿದ್ದ. ದಕ್ಷಿಣ ಪಥೇಶ್ವರ ಎಂಬ ಬಿರುದು ಅವನ ಚಾಣಾಕ್ಷತನಕ್ಕೆ ಇಟ್ಟ ಗರಿಯಾಗಿದೆ. ಪುಲಕೇಶಿ (೨)

ಬಾದಾಮಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದನು. ಇವನ ಮಗನಾದ ಕೀರ್ತಿವರ್ಮನು ದೇವಸ್ಥಾನಗಳ ನಿರ್ಮಾಣವನ್ನು ಪೂರ್ತಿಗೊಳಿಸಿದನು.

ಬಾದಾಮಿಯಲ್ಲಿ ಮೇಣಬಸದಿ ಎಂಬ ಗುಹಾಂತರ ದೇವಾಲಯವಿದೆ. ಏಕಶಿಲೆಯಲ್ಲಿಯೇ ಇಡೀ ಬ್ರಹತ್ ದೇವಸ್ಥಾನ ಕಟ್ಟಿದ್ದಾರೆ ಇದರಲ್ಲಿ ನಾಲ್ಕು ಭಾಗಗಳನ್ನು ಮಾಡಿದ್ದಾರೆ.. ಸಾವಿರಾರು ಮೆಟ್ಟಿಲು ಹತ್ತುತ್ತಾ  ಮೇಲೆ ಮೇಲೆ ಹೋಗಿ ನೋಡಿದಾಗ ಶಿವ ದೇವಾಲಯ ಕಾಣುತ್ತದೆ ಅನೇಕ ಸುಂದರ ಶಿಲ್ಪಗಳು ಇಲ್ಲಿ ಕೆತ್ತಲ್ಪಟ್ಟಿವೆ.

ಎಲ್ಲ ದೇವಾಲಯಗಳಲ್ಲಿ ವಿಷ್ಣು ಅಥವಾ ಶಿವನ ಮೂರ್ತಿಗಳಿವೆ..ಎಲ್ಲ ದೇವಾಲಯದ ಉದ್ದ ಸು.



**ರೇಖಾ. ಮುತಾಲಿಕ್,**
**ವಿದ್ಯಾಗಿರಿ, ಬಾಗಲಕೋಟ**

ಆಚರಿಸಲು ಅವನ ಪತ್ನಿ ಲೋಕ ಮಹಾದೇವಿ ಈ ಗುಡಿಗಳನ್ನು ನಿರ್ಮಿಸಿದಳೆನ್ನು ಹೇಳುತ್ತಾರೆ. ಐಹೊಳೆಯಲ್ಲೂ ದುರ್ಗಾದೇವಿ ದೇವಸ್ಥಾನ ಅತ್ಯಂತ ಸುಂದರವಾಗಿದೆ  ಇಲ್ಲಿ 100 ಕ್ಕೂ ಹೆಚ್ಚು ದೇವಾಲಯಗಳಿವೆ ಇಲ್ಲಿ ಜೈನ ಹಾಗೂ ಬೌದ್ಧ ದೇವಾಲಯಗಳೂ ಇವೆ. ಈ ಎಲ್ಲ ದೇವಾಲಯಗಳು ಕ್ರಿ. ಶ. 7–8 ಶತಮಾನದಲ್ಲಿ ನಿರ್ಮಾಣ ವಾಗಿವೆ.

ಬನಶಂಕರಿ ದೇವಾಲಯವೂ ಬಹಳ ಸುಂದರವಾಗಿದೆ. ದೇವಾಲಯದ ಎದುರಿಗೆ ಇರುವ ಕಲ್ಯಾಣಿ ವಿಶಾಲವಾಗಿದೆ..ಇಲ್ಲಿ ಸಂಕ್ರಾಂತಿ ವೇಳೆಗೆ ಜಾತ್ರೆ ಜರಗುತ್ತದೆ. ಈ ಜಾತ್ರೆಯಲ್ಲಿ ಸಿಗದ ವಸ್ತುವೇ ಇಲ್ಲಾ ಎನ್ನಬಹುದು. ಅಷ್ಟು ಪ್ರಸಿದ್ಧ ಬಾದಾಮಿ ಬನಶಂಕರಿ ಜಾತ್ರೆ.

ಬಾದಾಮಿ ಐಹೊಳೆ ಪಟ್ಟದಕಲ್ಲು ನೋಡಲು 1 ದಿನ ಸಾಕಾಗದು.

ಬಾದಾಮಿ  ಬಹಳ ಸುಂದರ ಪ್ರವಾಸಿ ಮಂದಿರ.

ಇಲ್ಲಿಗೆ ತಲುಪಲು ಬೆಂಗಳೂರನಿಂದ ಹುಬ್ಬಳ್ಳಿ ಗೆ ಫ್ಲೈಟ್ ಲ್ಲಿ ಬರಬಹುದು. ಅಲ್ಲದೇ ಅನೇಕ ರೈಲ್ವೆ ವ್ಯವಸ್ಥೆಯೂ ಕೂಡ ಇದೆ..ನಮ್ಮ ಸಂಸ್ಕೃತಿ ವೈಭವ ಕಣ್ತುಂಬಿಕೊಳ್ಳಲು ಬಾದಾಮಿಗೆ ಭೇಟಿ ನೀಡಿ.



# ಎರಡನೆಯ ವಿಕ್ರಮಾದಿತ್ಯನು ಪರಾಕ್ರಮ, ಶೌರ್ಯದ ಸಂಕೇತ

**ಕನ್ನಡಾಂಬೆಗೆ ಕಲಾ ಕಿರೀಟ ತೊಡಿಸಿದ ರಾಜ ವಿಕ್ರಮಾದಿತ್ಯ!**
**ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ**
**ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ**
**ನಮ್ಮ ತಪ್ಪನೆನಿತೊ ತಾಳ್ವೆ**
**ಅಕ್ಕರೆಯಿಂದೆಮ್ಮನಾಳ್ವೆ**
**ನೀನೆ ಕಣಾ ನಮ್ಮ ಬಾಳ್ವೆ ನಿನ್ನ ಮರೆಯಲೆಮ್ಮೆವು**
**ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಮ್ಮವು.**
**ಶಕವಿಜೇತನಮರ ಶಾತವಾಹನಾಖ್ಯನೀ ಶಕಂ,**
**ನಿನ್ನೊಳಂದು ತೊಡಗಿ ಸಂದುದರ್ಥ ಭರತದೇಶಕಂ**
**ಚಳುಕ್ಯರಾಷ್ಟ್ರಕೂಟರೆಲ್ಲ ಗಂಗರಾ ಕದಂಬರೆಲ್ಲ**
**ಹೊಯ್ಸಳ ಕಳಚುರ್ಯರೆಲ್ಲ ವಿಜಯನಗರ ಭೂಪರು**
**ಆಳ್ದರಿಲ್ಲಿಯಲ್ಲದೆಲ್ಲ ತಾಯೆ ಮೇಣಲೂಪರು.**



ಕನ್ನಡ ನಾಡಿಗೆ ಕೀರ್ತಿ ತಂದ ಮತ್ತೊಬ್ಬ ಕನ್ನಡ ಕುವರ, ಎರಡನೆಯ ವಿಕ್ರಮಾದಿತ್ಯನು ಪರಾಕ್ರಮ,ಶೌರ್ಯದ ಸಂಕೇತ, ದಯಾಗುಣದ ಮೂರ್ತಿ ಮತ್ತು ಕಲಾಭಿಮಾನದ ಕಿರೀಟ!

ಎರಡನೆಯ ವಿಕ್ರಮಾದಿತ್ಯ: ಕಾಂಚಿಪುರದ ವಿಜೇತ, ಪಟ್ಟದಕಲ್ಲಿನ ಸೃಷ್ಟಿಕರ್ತ

ಬಾದಾಮಿಯ ಚಾಲುಕ್ಯ ವಂಶದಲ್ಲಿ ಹೊಳೆದು ಹೋದ ತೇಜಸ್ವಿ ತಾರೆ, ಇಡೀ ದಕ್ಷಿಣ ಭಾರತದ ಭೂಪಟವನ್ನೇ ಬೆರಗುಗೊಳಿಸಿದ ವೀರ ರಾಜ ಎರಡನೆಯ ವಿಕ್ರಮಾದಿತ್ಯ (ಸುಮಾರು ಕ್ರಿ ಶ  733?744). ಇವನ ಆಳ್ವಿಕೆ, ಕನ್ನಡದ ಸಾರ್ವಭೌಮತ್ವದ ಸುವರ್ಣ ಯುಗ!

1. ಸೇಡಿನ ವೀರಗಾಥೆ: ವೈರಿಯ ಅಹಂ ಮುರಿದ ಚಕ್ರವರ್ತಿ

ಶತಮಾನಗಳಿಂದ ಚಾಲುಕ್ಯರು ಮತ್ತು ಪಲ್ಲವರ ನಡುವೆ ದೀರ್ಘ ಕಾಲದ ದ್ವೇಷದ ಯುದ್ಧ ನಡೆದಿತ್ತು. ಮೊದಲನೆಯ ಪುಲಕೇಶಿಯ ಅವಮಾನಕ್ಕೆ, ಮೊದಲನೆಯ ವಿಕ್ರಮಾದಿತ್ಯನ ಪ್ರತೀಕಾರದ ನಂತರವೂ ಆ ಕಿಚ್ಚು ಆರದಾಗಿತ್ತು. ಈ ಕಿಚ್ಚನ್ನು ಶಾಶ್ವತವಾಗಿ ಆರಿಸಲು ಬಂದವನೇ ಎರಡನೆಯ ವಿಕ್ರಮಾದಿತ್ಯ!




ತ್ರಿವಳಿ ಕಾಂಚಿ ವಿಜಯ: ಆತ ಕೇವಲ ಪಲ್ಲವರ ರಾಜಧಾನಿಯಾದ ಕಾಂಚೀಪುರಂ ಮೇಲೆ ದಾಳಿ ಮಾಡಲಿಲ್ಲ, ಬದಲಿಗೆ ಮೂರು ಬಾರಿ ಆ ನಗರವನ್ನು ಪ್ರವೇಶಿಸಿ, ಪಲ್ಲವರನ್ನು ನಡುಗಿಸಿದ! ಮೊದಲನೆ ಬಾರಿಗೆ ಯುವರಾಜನಾಗಿ, ಎರಡನೆ ಬಾರಿಗೆ ಚಕ್ರವರ್ತಿಯಾಗಿ, ಕೊನೆಯ ಬಾರಿಗೆ ತನ್ನ ಪುತ್ರನ ನೇತೃತ್ವದಲ್ಲಿ ಕಾಂಚಿಯನ್ನು ಗೆದ್ದು, ಚಾಲುಕ್ಯರ ಪರಾಕ್ರಮಕ್ಕೆ ಅಕ್ಷಯ ಕೀರ್ತಿಯ ಗರಿ ಮೂಡಿಸಿದ. ಅರಬ್ ಗರ್ವಭಂಗ: ಭಾರತದ ಮೇಲೆ ದಂಡೆತ್ತಿ ಬಂದ ಇಸ್ಲಾಮಿಕ್ ಶಕ್ತಿಗಳಾದ ಅರಬ್ ಸೈನಿಕರನ್ನು ದಕ್ಷಿಣದತ್ತ ಸುಳಿಯದಂತೆ ಗುಜರಾತ್ ಮತ್ತು ರಾಜಸ್ಥಾನದ ಗಡಿಗಳ ಬಳಿಯೇ ತಡೆದು ನಿಲ್ಲಿಸಿ, ಹಿಂದಕ್ಕೆ ಅಟ್ಟಿದ ಮಹಾಸಾಧನೆ ಇವನದು. ಈ ವಿಜಯವು ದಕ್ಷಿಣ ಭಾರತವನ್ನು ಸಂಪೂರ್ಣವಾಗಿ ರಕ್ಷಿಸಿದ ಐತಿಹಾಸಿಕ ತಿರುವು!

2. ದಯಾಗುಣದ ಮಹಾ ಪಾಠ: ವಿಜಯಿಯ ಧರ್ಮ

ಶತ್ರು ರಾಜಧಾನಿಯಾದ ಕಾಂಚಿಯನ್ನು ಗೆದ್ದರೂ, ವಿಕ್ರಮಾದಿತ್ಯನು ಪ್ರಜೆಗಳನ್ನು ಲೂಟಿ ಹೊಡೆಯಲಿಲ್ಲ, ನಾಡನ್ನು ನಾಶ ಮಾಡಲಿಲ್ಲ. ಅಲ್ಲಿ ಆತ ತೋರಿಸಿದ ದಯಾಗುಣ ಇವನನ್ನು 'ವಿಕ್ರಮಾದಿತ್ಯ' ಎಂಬ ಹೆಸರಿಗೆ ಮತ್ತಷ್ಟು ಘನತೆ ತಂದುಕೊಟ್ಟಿತು.

ಕಲೆಯ ರಕ್ಷಕ: ಶತ್ರುಗಳೇ ನಿರ್ಮಿಸಿದ್ದ ಕೈಲಾಸನಾಥ ದೇವಾಲಯದ ಅಪೂರ್ವ ಸೌಂದರ್ಯಕ್ಕೆ ಮಾರುಹೋಗಿ, ಅದನ್ನು ನಾಶ ಮಾಡುವುದರ ಬದಲು, ಅಲ್ಲಿ ಅಪಾರವಾದ ಚಿನ್ನದ ದಾನ ಮಾಡಿ, ದೇವಾಲಯದ ಘನತೆಯನ್ನು ಹೆಚ್ಚಿಸಿದ.

ಕನ್ನಡದ ಸಿಂಹಗರ್ಜನೆ: ಆತ ಕೈಲಾಸನಾಥ ದೇವಾಲಯದ ಕಂಬವೊಂದರ ಮೇಲೆ ತನ್ನ ಶೌರ್ಯ ಮತ್ತು ದಾನದ ಕುರಿತು ಕನ್ನಡ ಭಾಷೆಯಲ್ಲಿ ಶಾಸನ ಕೆತ್ತಿಸಿದ! ವೈರಿಯ ರಾಜಧಾನಿಯಲ್ಲಿ ಕನ್ನಡದ ಶಾಸನ ಮೂಡಿಸಿದ್ದು, ಕೇವಲ ರಾಜಕೀಯ ವಿಜಯವಲ್ಲ, ಅದು ಕನ್ನಡ ಸಂಸ್ಕೃತಿಯ ದಿಗ್ವಿಜಯದ ಘೋಷಣೆ!

ಪ್ರಜೆಗಳ ಪ್ರೀತಿ: ಕಾಂಚಿಯ ಪ್ರಜೆಗಳಿಗೆ ಅಭಯ ನೀಡಿ, ಲೂಟಿ ಮಾಡಿದ್ದ ಸಂಪತ್ತನ್ನು ಹಿಂದಿರುಗಿಸಿ, ಇಡೀ ನಾಡಿನ ಪ್ರೀತಿ ಗಳಿಸಿದ ಧೀರ ರಾಜ.

3. ಕನ್ನಡ ನಾಡಿನ ಕಲಾ ಕಿರೀಟ: ಕನ್ನಡ ನಾಡಿನ ವಾಸ್ತುಶಿಲ್ಪಕ್ಕೆ ಪಟ್ಟದಕಲ್ಲಿನ ವೈಭವ ಎರಡನೆಯ ವಿಕ್ರಮಾದಿತ್ಯರ ಕಾಲದ ಅತಿದೊಡ್ಡ ಮತ್ತು ಶಾಶ್ವತ ಕೊಡುಗೆ! ಇವನು ಯುದ್ಧ ವೀರನಷ್ಟೇ ಅಲ್ಲ, ಕಲಾಪ್ರೇಮಿಯೂ ಆಗಿದ್ದ.

* ವಿರೂಪಾಕ್ಷ ದೇಗುಲದ ಸೃಷ್ಟಿ: ಕಾಂಚಿಯ ಕೈಲಾಸನಾಥ ದೇವಾಲಯದಿಂದ ಸ್ಫೂರ್ತಿ ಪಡೆದ ಇವನ ಪಟ್ಟದ ರಾಣಿ ಲೋಕಮಹಾದೇವಿಯು, ತಮ್ಮ ಪತಿಯ ವಿಜಯದ ಸಂಕೇತವಾಗಿ ಪಟ್ಟದಕಲ್ಲಿನಲ್ಲಿ ವಿರೂಪಾಕ್ಷ ದೇವಾಲಯವನ್ನು (ಲೋಕೇಶ್ವರ ದೇವಾಲಯ) ಕಟ್ಟಿಸಿದಳು. ದ್ರಾವಿಡ ಶೈಲಿಯ ಈ ದೇವಾಲಯವು ಭಾರತೀಯ ದೇವಾಲಯ ವಾಸ್ತುಶಿಲ್ಪದ ಒಂದು ಮಾಸ್ಟರ್‌ಪೀಸ್ ಎಂದೇ ಖ್ಯಾತವಾಗಿದೆ.
* ಮಲ್ಲಿಕಾರ್ಜುನ ದೇಗುಲ: ಇವನ ಇನ್ನೊಬ್ಬ ರಾಣಿ ತ್ರಿಲೋಕಮಹಾದೇವಿಯು ಮಲ್ಲಿಕಾರ್ಜುನ ದೇವಾಲಯವನ್ನು (ತ್ರಿಲೋಕೇಶ್ವರ ದೇವಾಲಯ) ನಿರ್ಮಿಸಿದಳು.
* ಕಲೆಯ ಸಂಯೋಗ: ಈ ದೇವಾಲಯಗಳ ನಿರ್ಮಾಣದಲ್ಲಿ ಕಾಂಚಿಯ ಶೈಲಿ ಮತ್ತು ಚಾಲುಕ್ಯರ ಶೈಲಿಯು ಅದ್ಭುತವಾಗಿ ಸಮ್ಮಿಳಿತಗೊಂಡಿವೆ. ಪಟ್ಟದಕಲ್ಲಿನ ಈ ಸ್ಮಾರಕಗಳು ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳಾಗಿ ಕನ್ನಡ ನಾಡಿನ ಕಲಾ ವೈಭವವನ್ನು ಇಂದಿಗೂ ಜಗತ್ತಿಗೆ ಸಾರುತ್ತಿವೆ.

ಹೀಗೆ, ಎರಡನೆಯ ವಿಕ್ರಮಾದಿತ್ಯನು ರಣರಂಗದಲ್ಲಿ ಸಿಂಹನಾಗಿ, ಕಲಾಭೂಮಿಯಲ್ಲಿ ಅಪ್ಪಟ ಪ್ರೇಮಿಯಾಗಿ, ಕನ್ನಡ ನಾಡಿನ ಗರಿಮೆಯನ್ನು ಆಕಾಶಕ್ಕೇರಿಸಿದ ಮಹಾ ಚಕ್ರವರ್ತಿ. ಇವನ ಸಾಧನೆಗಳು ಇಂದಿಗೂ ಪ್ರತಿಯೊಬ್ಬ ಕನ್ನಡಿಗನಿಗೆ ಸ್ಫೂರ್ತಿಯ ಸೆಲೆ!ಕನ್ನಡದ ಮಣ್ಣಿನಲ್ಲಿ ಹುಟ್ಟಿದ ಇಂಥ ವೀರಪುತ್ರನಿಗೆ ನನ್ನ ವಂದನೆಗಳು.



**ರೂಪ ಮಂಜುನಾಥ**
**ಹೊಳೆನರಸೀಪುರ**


# ಕಾಳುಮೆಣಸಿನ ರಾಣಿ-ರಾಣಿ ಚೆನ್ನಭೈರಾದೇವಿ

ನಮ್ಮ ಕನ್ನಡ ನಾಡಿನಲ್ಲಿ ಹಲವಾರು ಮಹಿಳೆಯರು ಈ ಮಣ್ಣಿನ ರಕ್ಷಣೆಗಾಗಿ ಪರಕೀಯರ ವಿರುದ್ಧ ಹೋರಾಡಿ, ಪ್ರಾಣಾರ್ಪಣೆಗೈದು  ಅಮರರಾಗಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ, ಬೆಳವಾಡಿ ಮಲ್ಲಮ್ಮ, ಒನಕೆ ಓಬವ್ವ ಹಾಗೆಯೇ ಇವರ ಗುಂಪಿಗೆ ಸೇರುವ ಇನ್ನೊಂದು ಹೆಸರೇ ರಾಣಿ ಚೆನ್ನಭೈರಾದೇವಿ, ಇತಿಹಾಸದಲ್ಲಿ ಸುವರ್ಣ ಅಕ್ಷರದಲ್ಲಿ ಬರೆದಿಡುವಂತಹ ದೇಶ ಕಂಡ ಅಪ್ರತಿಮ ವೀರ ವನಿತೆ.  ಭಾರತದ ಇತಿಹಾಸದಲ್ಲಿಯೇ ಸುಧೀರ್ಘ ಅವಧಿಯ ಕಾಲ (54 ವರ್ಷ) ದಿಟ್ಟತನದಿಂದ ರಾಜ್ಯಭಾರ ನಡೆಸಿದ ಏಕೈಕ ರಾಣಿ ಎಂದು ಪರಿಗಣಿಸಲಾಗಿದೆ. ಸಾಳುವ ರಾಜವಂಶದ ಭಾಗವಾಗಿದ್ದ ರಾಣಿ ಚೆನ್ನಭೈರಾದೇವಿಯು 1552 ರಿಂದ 1606 ರ ವರೆಗೆ 54 ವರ್ಷಗಳ ಕಾಲ ಉತ್ತರ ಕನ್ನಡ ಜಿಲ್ಲೆಯ ಪ್ರಸ್ತುತ ಭಾಗವಾಗಿರುವ ಭಟ್ಕಳ ತಾಲೂಕಿನ ಹಾಡುವಳ್ಳಿ ಹಾಗೂ ಗೇರುಸೊಪ್ಪೆ ಪ್ರಾಂತ್ಯವನ್ನು ಆಳುತ್ತಿದ್ದಳು. ಕೆಲವು ಶಾಸನಗಳ ಪ್ರಕಾರ ರಾಣಿಯ ರಾಜ್ಯವು ದಕ್ಷಿಣ ಗೋವಾದಿಂದ ಉತ್ತರಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರ್ ವರೆಗೆ ವಿಸ್ತರಿಸಲ್ಪಟ್ಟಿತ್ತು ಎಂದು ಹೇಳಲಾಗಿದೆ.

ಕರಾವಳಿ ಹಾಗೂ ಮಲೆನಾಡಿನ ಪ್ರದೇಶದಲ್ಲಿ ವ್ಯಾಪಾಕವಾಗಿ ಬೆಳೆಯುತಿದ್ದ ಕಾಳು ಮೆಣಸನ್ನು ಯುರೋಪಿಗೆ ರಫ್ತು ಮಾಡುತ್ತಿದ್ದ ರಾಣಿಗೆ ಕರಿಮೆಣಸಿನ ರಾಣಿ /ಕಾಳು ಮೆಣಸಿನ ರಾಣಿ ಎಂದು ಕರೆಯಲಾಗಿದೆ. ಗೇರುಸೊಪ್ಪೆ ಪ್ರಾಂತ್ಯವನ್ನು ಆಳುತ್ತಿದ್ದ ಕಾರಣ ಅಲ್ಲಿಯ ಜನರು ಗೇರುಸೊಪ್ಪೆಯ ರಾಣಿ ಎಂದು ಕರೆಯುತ್ತಿದ್ದರು. ಚೆನ್ನಭೈರಾದೇವಿ ನಗಿರಿಯನ್ನು ಆಳುತಿದ್ದರಿಂದ ಆಕೆಗೆ ನಗಿರೆಯ ರಾಣಿ ಎಂದೂ ಹೆಸರು ಇತ್ತು. ಕೆಳದಿಯ ಅರಸರು ಮತ್ತು ಬಿಜಾಪುರದ ಸುಲ್ತಾನರ ಯುದ್ಧಗಳನ್ನು ಜಾಣ್ಮೆಯಿಂದ ನಿರ್ವಹಿಸಿದ ಕಾರಣ ರಾಣಿಗೆ ಪೋರ್ಚುಗೀಸರು "ರೈನಾ ದೆ ಪಿಮೆಂಟಾ" ಎಂಬ ಹೆಸರು ಕೊಟ್ಟಿದ್ದರು.

**ರಾಣಿಯ ಆಡಳಿತ:** ವಿಜಯನಗರದ ಸಾಳುವ ವಂಶದ ಒಂದು ಶಾಖೆಯ ಅರಸರು ಗೇರುಸೊಪ್ಪೆಯನ್ನು ಆಳುತ್ತಿದ್ದರೆ ಮತ್ತೊಂದು ವಂಶದವರು ಹಾಡುವಳ್ಳಿಯನ್ನು ಆಳುತ್ತಿದ್ದರು. ಗೇರುಸೊಪ್ಪೆಯ ಅರಸ ಇಮ್ಮಡಿದೇವರಾಯ(1515–50) ಪೋರ್ಚುಗೀಸರ ಮೇಲೆ ಯುದ್ಧ ಮಾಡಿದ ಸಂದರ್ಭದಲ್ಲಿ ಆ ಭೀಕರ ಯುದ್ಧದಲ್ಲಿ ಸೋಲನ್ನಪ್ಪಿದ ಬಳಿಕ ಪೋರ್ಚುಗೀಸರು ಆತನ ರಾಜಧಾನಿ ಭಟ್ಕಳವನ್ನು ಸುಟ್ಟು ಹಾಕಿದರು ಆತನ ಪತ್ನಿ ಚೆನ್ನದೇವಿಯ ತಂಗಿಯೇ ಚೆನ್ನಭೈರಾದೇವಿ.ಪೋರ್ಚುಗೀಸರ ಜೊತೆಗಿನ ಒಪ್ಪಂದದಂತೆ ಕಪ್ಪವನ್ನು ಕೊಡಲಿಲ್ಲವೆಂದು, ಕಾರ್ಟಜ್ ಪಡೆಯದ ಮಹಾನ್ ಮಹಮದ್ದೀಯರ ಹಡಗುಗಳಿಗೆ ಭಟ್ಕಳ ಬಂದರಿನಲ್ಲಿ ಆಶ್ರಯ ಕೊಟ್ಟಿರುವವಳೆಂದು ಆರೋಪಿಸಿ ಭಟ್ಕಳವನ್ನು ಮುತ್ತಿ ರಾಣಿಯನ್ನು ಸೋಲಿಸಿ, ಭಟ್ಕಳವನ್ನು ಸುಟ್ಟು ಹಾಕಿದ. ಅಕ್ಕನ ನಂತರ  ಚೆನ್ನಭೈರಾದೇವಿಗೆ ಹಾಡುವಳ್ಳಿಯ ಜೊತೆಗೆ ಗೇರುಸೊಪ್ಪೆಯ ಅಧಿಕಾರವು ದೊರಕಿತು.

ಒಟ್ಟು 54 ವರ್ಷಗಳ ಕಾಲ ರಾಜ್ಯವಾಳಿದ ಸಾಳುವ






ವಂಶದ ರಾಣಿ ಚೆನ್ನಭೈರಾದೇವಿಯು ತಾನು ಬದುಕಿರುವಷ್ಟು ಕಾಲ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದಳು. ಪೋರ್ಚುಗೀಸರು,ಕೆಳದಿ ಅರಸರು ಮತ್ತು ಬೀಜಾಪುರದ ಸುಲ್ತಾನರ ನಡುವಿನ ಯುದ್ಧಗಳನ್ನು ತನ್ನ ಜಾಣ್ಮೆಯಿಂದ ನಿರ್ವಹಿಸಿದ ರಾಣಿ  ಪರಂಗಿಯವರೊಡನೆ ಅಗತ್ಯವಿದ್ದಾಗ ಸ್ನೇಹ, ಅನಿವಾರ್ಯವಾದಾಗ ಸಮರ ಎರಡಕ್ಕೂ ಸೈ ಎನಿಸಿಕೊಂಡಿದ್ದವಳು. ದಕ್ಷಿಣ ಕೊಂಕಣಕ್ಕೆ ತಮ್ಮ ಒಡೆತನವನ್ನು ಮತ್ತು ಮತಾಂತರ ಪ್ರಕ್ರಿಯೆಯನ್ನು ವಿಸ್ತರಿಸಲು ನಿಂತಿದ್ದ ಪೋರ್ಚುಗೀಸರ ಪ್ರಯತ್ನಕ್ಕೆ ಅಡ್ಡಗೋಡೆಯಾಗಿ ನಿಂತು ಇಂದಿನ ಕೆನರಾ ಪ್ರದೇಶವನ್ನು ಸಂರಕ್ಷಿಸಿದವಳು.

ಚೆನ್ನಭೈರಾದೇವಿಯ ರಾಜ್ಯ ದಕ್ಷಿಣ ಗೋವೆಯಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ,ಭಟ್ಕಳ, ಮಲ್ಪೆ, ಹೊನ್ನಾವರ,ಮಿರ್ಜಾನ್, ಅಂಕೋಲ, ಬೈಂದೂರು ಕಾರವಾರಗಳನ್ನೊಳಗೊಂಡಿತ್ತು, ಈ ಕರಾವಳಿಯ ಜೊತೆಗೆ ಘಟ್ಟದ ಮೇಲಿನ ಹಲವಾರು ಸೀಮೆಗಳು ರಾಣಿಯ ಆಡಳಿತಕ್ಕೆ ಒಳಪಟ್ಟಿದ್ದವು. ರಾಣಿಯ ಆಳ್ವಿಕೆಯಲ್ಲಿ ಯುರೋಪಿನ ರಾಷ್ಟ್ರಗಳಿಗೆ ಕಾಳುಮೆಣಸು, ದಾಲ್ಚಿನ್ನಿ, ಅಡಿಕೆ,ಶುಂಠಿ, ಗಂಧಗಳನ್ನು ರಫ್ತು ಮಾಡಿ, ಅದಕ್ಕೆಲ್ಲ ಅದಕ್ಕೆಲ್ಲ ಬೆಲೆ ತಂದುಕೊಟ್ಟು ಮಣಗಟ್ಟಲೆ ಬೆಳ್ಳಿ ಬಂಗಾರ ಗಳಿಸಿ ಆ ಸಂಪತ್ತನ್ನು ಪ್ರಾಂತ್ಯಗಳ ಅಭಿವೃದ್ಧಿಗೆ ಉಪಯೋಗಿಸಿ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಿ ಹಲವಾರು  ದೇವಾಲಯಗಳನ್ನು, ಜೈನಬಸದಿಯನ್ನು, ಜೀರ್ಣೋದ್ದಾರ ಮಾಡಿ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಪ್ರಜಾಸಕ್ತ ರಾಣಿಯಾಗಿ ಮೆರೆದಳು.

ಪೋರ್ಚುಗೀಸರ ಒಪ್ಪಿಗೆ ಇಲ್ಲದೆ ಮುಸಲ್ಮಾನರ ಹಡಗುಗಳಿಗೆ ಕರಿಮೆಣಸು, ದಾಲ್ಚಿನ್ನಿ ಕೆಂಪಕ್ಕಿ ಮತ್ತು ಶ್ರೀಗಂಧ ತುಂಬಿಸಿ ಹೊನ್ನಾವರ ಮತ್ತು ಭಟ್ಕಳ ಬಂದರುಗಳ ಮೂಲಕ ರಾಣಿಯು ಮಾಡುತಿದ್ದ ಸಮುದ್ರ ವ್ಯಾಪಾರವು ಪೋರ್ಚುಗೀಸರ ಆಶಯಕ್ಕೆ ವಿರುದ್ಧವಾದ ಕಾರಣ ಹಲವಾರು ಯುದ್ಧಗಳನ್ನು ಎದುರಿಸುವ ಸಂದರ್ಭ ಒದಗಿ ಬಂದಿತ್ತು. ಚೆನ್ನಭೈರಾದೇವಿಯು ತನಗೆ ಎದುರಾದ ಅನೇಕ ಬಗೆಯ ವೈರುಧ್ಯಗಳನ್ನು ಚಾಣಾಕ್ಷ ಮೈತ್ರಿಗಳ ಮೂಲಕ ನಿಭಾಯಿಸುತ್ತಾ ತನ್ನ ರಾಜಕೀಯ ಸಾಂಸ್ಕೃತಿಕ ಮತ್ತು ಆರ್ಥಿಕ ಮೇಲುಗೈಯನ್ನು ಬಿಟ್ಟುಕೊಡದೆ 50 ವರ್ಷಗಳಿಗೂ ಹೆಚ್ಚು ಕಾಲ ತನ್ನ ರಾಜ್ಯವನ್ನು ಗಟ್ಟಿಯಾಗಿ  ಹಿಡಿದಿಟ್ಟುಕೊಂಡು ಸಮರ್ಥವಾಗಿ ಆಳ್ವಿಕೆ ನಡೆಸಿ ಯಶಸ್ವಿಯಾಗಿದ್ದಳು. ರಾಣಿಯ ಆಳ್ವಿಕೆಯಲ್ಲಿದ್ದ ಜಾಗಗಳನ್ನು ವಶಕ್ಕೆ ಪಡೆಯಬೇಕೆಂದು ಕೆಳದಿ ಮತ್ತು ಬಿಳಗಿ ಅರಸರು ಒಟ್ಟುಗೂಡಿ ಗೇರುಸೊಪ್ಪೆಯ ಮೇಲೆ ಆಕ್ರಮಣ ಮಾಡಿ ಆ ಯುದ್ಧದಲ್ಲಿ ರಾಣಿಯ ಸೇನಾಧಿಪತಿ ಗೊಂಡನಾಯಕನ ಮೋಸದಿಂದ ರಾಣಿ ಚೆನ್ನಭೈರಾದೇವಿ ಸೋಲುವ ಮೂಲಕ ಗೇರುಸೊಪ್ಪೆ ಕೆಳದಿ ಸಾಮ್ರಾಜ್ಯದ ಭಾಗವಾಗುತ್ತದೆ. ಆಕೆಯನ್ನು ಹಳೆಯಕೇರಿ ಕೋಟೆಯಲಿ ಸುಮಾರು ಕಾಲ ಬಂದನದಲ್ಲಿ ಇಟ್ಟಿದ್ದಾಗಲೇ ಆಕೆ ಅಲ್ಲಿಯೇ ಕೊನೆಯುಸಿರೆಳೆಯುತ್ತಾಳೆ  ಎಂದು  ಇತಿಹಾಸದಲ್ಲಿ ಉಲ್ಲೇಖಿತವಾಗಿದೆ.

**ರಾಣಿಯ ಕೋಟೆ:** ಹೊನ್ನಾವರ ಗೇರುಸೊಪ್ಪದಲ್ಲಿರುವ ಕಾನೂರು ಹೆಸರಿಗೆ ತಕ್ಕಂತೆ ಪಶ್ಚಿಮ ಘಟ್ಟದ ಸಹ್ಯಾದ್ರಿ ಶ್ರೇಣಿಯ ಗೋವರ್ಧನ ಗಿರಿಪಂಕ್ತಿಯ ನಡುವಿನ ದತ್ತಡವಿಯ ನಡುವೆ ಹುದುಗಿರುವ ಪುಟ್ಟ ಗಿರಿ ಗ್ರಾಮ. ಗ್ರಾಮದಂಚಿನ ಬೆಟ್ಟ ಮೂರು ದಿಕ್ಕಿನಲ್ಲಿ ಒಂದು ಸಾವಿರ ಅಡಿಗೂ ತಗ್ಗಿನ ಕಣಿವೆ ಮತ್ತು ಊರಿನ ದಿಕ್ಕಿನಿಂದ ಮಾತ್ರ ಪ್ರವೇಶ ಸಾಧ್ಯವಿರುವ ನೈಸರ್ಗಿಕ ರಕ್ಷಣಾ ಆವರಣವುಳ್ಳ ಆಯಕಟ್ಟಿನ ಪ್ರದೇಶದಲ್ಲಿ ರಾಣಿ ಉರುಟುಗಲ್ಲು ಜಂಬಿಟ್ಟಿಗೆ ಮತ್ತು ಗ್ರಾನೆಟ್ ಶಿಲೆಗಳನ್ನು ಬಳಸಿ ಎತ್ತರವಾದ ದಪ್ಪ ಕಲ್ಲಿನ ಸುಭದ್ರ ಕೋಟೆ ಕಟ್ಟಿಸಿದಳು. ಗೋಡೆಯ ಮೇಲೆ ರಕ್ಷಣಾ ದಳದ ಸೈನಿಕರು ಸುಲಭದಲ್ಲಿ ಓಡಾಡಿ ತಮ್ಮ ಆಯುಧಗಳನ್ನು ಉಪಯೋಗಿಸಲು ಸಾಧ್ಯವಾಗುವಂತೆ ಮುನ್ನೆಚ್ಚರಿಕೆ ವಹಿಸಿದ್ದಳು. ವಿಶಾಲವಾದ ಗೋಡೆ ಕಟ್ಟೆಯ ಉದ್ದಕ್ಕೂ ಅಲ್ಲಲ್ಲಿ ಕಾವಲು ಗೋಪುರಗಳು ಬುರುಜುಗಳು,ಪಹರೆ ಬಿಡಾರಗಳು ನಿರ್ಮಾಣಗೊಂಡವು. ಗೋಪುರಗಳ ಪಕ್ಕದಲ್ಲಿ ಉರಿಯುವ ವಸ್ತುಗಳು ಮತ್ತು ಮುಳ್ಳು ಕೋಲುಗಳನ್ನು ಎಸೆಯಲು ಆಸ್ಪದವಾಗುವಂತೆ ಹಾಗೂ ಶತ್ರುಗಳು ಹಲ್ಲೆ ಮಾಡಿದರೆ ರಕ್ಷಕರಿಗೆ ಆಶ್ರಯ ಪಡೆಯಲು ಅಡಗಲು ಸಾಕಷ್ಟು ಅವಕಾಶವಿರುವಂತೆ ನೋಡಿಕೊಂಡಳು. ಹಾಗೆಯೇ ಅಲ್ಲಲ್ಲಿ ನೈಸರ್ಗಿಕ ಕೊಳ ನಿರ್ಮಿಸಿ ನೀರಿನ ಕೊರತೆ ನೀಗಿದಳು ಈ ವಿಶಿಷ್ಟ ಗಿರಿ ದುರ್ಗದೊಳಗೆ ಗುಪ್ತ ಭಂಡಾರ, ಆನೆಯ ಮಹಲು, ಉಗ್ರಾಣ, ಜ್ಞಾನ ಶಾಲೆ, ಕುದುರೆ ಲಾಯ ಶಸ್ತ್ರಾಗಾರ, ಫಿರಂಗಿ ಕಟ್ಟೆಗಳನ್ನು ನಿರ್ಮಿಸಿದಳು.

ಅಘನಾಶಿನಿ ನದಿಯ ಪಕ್ಕದಲ್ಲಿರುವ ಮಿರ್ಜಾನ್ ಕೋಟೆ 10 ಎಕರೆಗಳಷ್ಟು ವಿಸ್ತೀರ್ಣದಲ್ಲಿದೆ. ಈ ಕೋಟೆಯ ಬಹಪಾಲು ಶಿಥಿಲಾವಸ್ತೆಯಲ್ಲಿದೆ. ಆದರೆ ಹಿಂದಿನ ಕಾಲದಲ್ಲಿ ಇದು ಎತ್ತರದ ಚಾವಣಿಗಳು ಕಾವಲು ಗೋಪುರಗಳು ಮತ್ತು ಪರಸ್ಪರ ಸಂಪರ್ಕ ಹೊಂದಿದ ಬಾವಿಗಳಿಗೆ ಹೆಸರುವಾಸಿಯಾಗಿತ್ತು.ಚೆನ್ನಭೈರಾದೇವಿ ತನ್ನ ಜೀವನದ ಮಹತ್ವದ ಭಾಗವನ್ನು ಕೋಟೆಯಲ್ಲಿ ಕಳೆದಳು.

**ಸಾಧನೆಗಳು:** ಮಹಾಮಂಡಲೇಶ್ವರಿ ಚೆನ್ನಭೈರಾದೇವಿಯು ಉತ್ತಮ ಆಡಳಿತಗಾರ್ತಿಯಾಗಿದ್ದು, ಜೈನಧರ್ಮದ ಪೂಜನ ಪರಳಾದ ಶ್ರಾವಕಿಯಾಗಿ ಕಾಣಿಸಿಕೊಂಡಿದ್ದಳು. ಆಕೆಯ ಆಳ್ವಿಕೆಯ ಕಾಲದ ಮಿರ್ಜಾನ್ ಕೋಟೆ ಮತ್ತು ಕಾನೂರು ಕೋಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದು. ಅವರು 1562ರಲ್ಲಿ ಕಾರ್ಕಳದಲ್ಲಿ ಗ್ರಾನೈಟ್ ಬಂಡೆಗಳಿಂದ ಕೆತ್ತಲಾದ ಚತುರ್ಮುಖ ಬಸದಿಯನ್ನು ನಿರ್ಮಿಸಿದರು. ತನ್ನ ಆಳ್ವಿಕೆಯ ಸಮಯದಲ್ಲಿ ಅನೇಕ ಶೈವ,ವೈಷ್ಣವ, ಬಸಿದಿ ಚೈತ್ಯಾಲಯಗಳನ್ನು ಮತ್ತು ಶಕ್ತಿ ದೇವಾಲಯಗಳನ್ನು ನಿರ್ಮಿಸಲು ಮತ್ತು ನವೀಕರಿಸಲು ಸಹಾಯ ಮಾಡಿದರು. ಬಾದೇರು ಅಥವಾ ವೇಣುಪುರದಲ್ಲಿ ಯೋಗ ನರಸಿಂಹ ಸ್ವಾಮಿ ದೇವಸ್ಥಾನ ಮತ್ತು ವರ್ಧಮಾನ ಬಸದಿಯ ನವೀಕರಣಕ್ಕೂ ಸಹಾಯ ಮಾಡಿದರು. ನೂರಾರು ದೇಗುಲ ಮತ್ತು ಬಸದಿಗಳಿಗೆ ದಾನ ಧರ್ಮ, ದತ್ತಿಗಳನಿತ್ತು ಸಮಾಜದಲ್ಲಿ ಧರ್ಮ ಕಾರ್ಯ ಸುಸ್ಥಿರವಾಗುವಂತೆ ನಡೆದುಕೊಂಡವಳು. ರಾಜ್ಯದುದ್ದಕ್ಕೂ ಕೋಟೆ ಕೆರೆ ಬಾವಿ ರಸ್ತೆ ಕಾಲುವೆ ಸಂತೆಕಟ್ಟೆಗಳನ್ನು ನಿರ್ಮಿಸಿ ಅಥವಾ ದುರಸ್ತಿಗೊಳಿಸಿ ರಾಜ್ಯದ ಸಮೃದ್ಧಿಗೆ ಕಾರಣಳಾದವಳು. ನೌಕೆ ಮತ್ತು ದೋಣಿಗಳ ನಿರ್ಮಾಣಕ್ಕೆ ಆದ್ಯತೆ ಕೊಟ್ಟು ಸಾಗರೋತ್ತರ ವ್ಯಾಪಾರವನ್ನು ಪ್ರೋತ್ಸಾಹಿಸಿದವಳು. ಪಾಳು ಬಿದ್ದಿದ್ದ ಹಳೆಯ ಕೋಟೆಗಳನ್ನು ಪುನರ್ ನಿರ್ಮಿಸಿ ಅಲ್ಲಿ ಕಾಳುಮೆಣಸು ಮತ್ತು ಸಂಪತ್ತನ್ನು ಸಂಗ್ರಹಿಸಿದವಳು. ರಾಜಕೀಯ ಚದುರಂಗದಾಟದಲ್ಲಿ ಸದಾ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತ ಯಶಸ್ಸು ಕಂಡವಳು.

ಪ್ರತಿ ನಾಗರಿಕನಿಗೆ ನೆಮ್ಮದಿಯ ಜೀವನ ಕರುಣಿಸಿದ ರಾಣಿಯು, ಧೀಮಂತ ದೇಶಭಕ್ತಳಾಗಿ ಇತಿಹಾಸದ ಪುಟಗಳಲ್ಲಿ ಸದಾ ಅಮರರಳಾಗಿ ಕಾಣುತ್ತಾಳೆ. ಭಾರತೀಯ ಆಡಳಿತಗಾರರಿಂದ ಮಾತ್ರವಲ್ಲದೆ ಪೋರ್ಚುಗೀಸ್ ಆಕ್ರಮಣಕಾರದಿಂದಲೂ ಗೌರವವನ್ನು ಗಳಿಸಿದ ಏಕೈಕ ವೀರ ವನಿತೆ. ಆಕೆ ಎಲ್ಲಾ ಜಾತಿ ಧರ್ಮಗಳ ಜೊತೆ ಸಾಮರಸ್ಯವನ್ನು ಕಾಪಾಡಿಕೊಂಡು ಎಲ್ಲರನ್ನು ಸಮಾನ ಪ್ರೀತಿ ವಿಶ್ವಾಸದಿಂದ ಒಳಗೊಂಡು ಸರ್ವಧರ್ಮ ಸಮಭಾವದಿಂದ ವ್ಯವಹಾರ ಕೌಶಲ್ಯವನ್ನು ಸರಿದೂಗಿಸಿ ರಾಜ್ಯದಲ್ಲಿ ಸದಾ ವಾಣಿಜ್ಯ ಚಟುವಟಿಕೆ ನಡೆಯುವಂತೆ ನೋಡಿಕೊಂಡ ಮಹಾನ್ ಬುದ್ಧಿವಂತೆ.



**ಆಶಾ ಅಡೂರ್**
**ಉಜಿರೆ**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,